ಭಾನುವಾರ, ಡಿಸೆಂಬರ್ 24, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 354 | ಪುಟ 18
• www.prajavani.net
prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಬ್ರೂಮ್...ಬ್ರೂಮ್... ಬೈಕಿಂಗ್
ಬೈಕ್‌ಗಳ ಗತಿ–ಸ್ಥಿತಿ, ವ್ಲಾಗಿಂಗ್‌ನ ವ್ಯಾಮೋಹ, ಸೋಲೊ ರೈಡರ್ ಎಂಬ ಹಠಯೋಗಿಯ ಚಿತ್ರಣ...

ಜ.6ರಂದು ಎಲ್1 ಕಕ್ಷೆಗೆ ಆದಿತ್ಯ: ಇಸ್ರೊ 7
ವೀರಶೈವ–ಲಿಂಗಾಯತ ಮಹಾ ಅಧಿವೇಶನದಲ್ಲಿ ಒಕ್ಕೊರಲ ಆಗ್ರಹ
ಮಾಗಡಿ ಕೆರೆಗೆ ಮಾಂಗೋಲಿಯಾ ಹೆಬ್ಬಾತು 6
ಹೊಸದಾಗಿ ಜಾತಿಗಣತಿಗೆ ಒತ್ತಾಯ 5

ಸರ್ಕಾರಿ ಶಾಲೆಗೆ ಮಕ್ಕಳು ಬೇಕಾಗಿದ್ದಾರೆ! • ಈ ಶಾಲೆಗಳ ಭವಿಷ್ಯವೇನು?

ಶೂನ್ಯ ದಾಖಲೆ 'ಸಾಧನೆ'

ವಿದ್ಯಾರ್ಥಿಗಳ ಸಂಖ್ಯೆ ಮತ್ತು ಶಾಲೆಗಳ ಸಂಖ್ಯೆ

ವಿದ್ಯಾರ್ಥಿಗಳ ಸಂಖ್ಯೆ	ಶಾಲೆಗಳ ಸಂಖ್ಯೆ
0-10	3,646
10-20	7,395
30-50	6,833
50-100	9,006

48,285 ರಾಜ್ಯದಲ್ಲಿರುವ ಸರ್ಕಾರಿ ಶಾಲೆಗಳು
287 ಶೂನ್ಯ ದಾಖಲಾತಿ ಶಾಲೆಗಳು

• ಕೆ.ನರಸಿಂಹಮೂರ್ತಿ

ಒಳನೋಟ

ಮೈಸೂರು: ರಾಜಧಾನಿ ಬಳಿಯ ರಾಮನಗರ ಜಿಲ್ಲೆಯ ಹಾರೋಹಳ್ಳಿ ತಾಲ್ಲೂಕು ಕೇಂದ್ರದಿಂದ ಕೇವಲ 3 ಕಿ.ಮೀ ದೂರದಲ್ಲಿರುವ ದೊಡ್ಡ ಬಾದಗೆರೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಮುಚ್ಚಿದ್ದು, ಪಾಳು ಬಿದ್ದಿದೆ. ಸ್ಥಳೀಯರು ಅಲ್ಲಿ ಮೇಕೆಗಳನ್ನು ಕಟ್ಟಿ ಹಾಕುತ್ತಿದ್ದಾರೆ!

ಸಾಂಸ್ಕೃತಿಕ ರಾಜಧಾನಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆಯಾದ ಮೈಸೂರಿನ ಗ್ರಾಮೀಣ ಭಾಗದ 26 ಸರ್ಕಾರಿ ಶಾಲೆಗಳನ್ನು ಮುಚ್ಚಲಾಗಿದೆ. ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕೊಂದರಲ್ಲೇ ಐದು ವರ್ಷಗಳಲ್ಲಿ 19 ಶಾಲೆಗಳನ್ನು ಮುಚ್ಚಲಾಗಿದೆ. ಆ ಪೈಕಿ ಕೆಲವು ಶಾಲೆಗಳಲ್ಲಿ ಇಬ್ಬರು ವಿದ್ಯಾರ್ಥಿಗಳಿಗೆ ಮೂವರು ಶಿಕ್ಷಕರಿದ್ದರು. ಈಗ ವಿದ್ಯಾರ್ಥಿಗಳಿಲ್ಲ. ಬೈಲಹೊಂಗಲದಲ್ಲಿ 12 ಕೊಠಡಿಗಳಿದ್ದರೂ, ಉತ್ತಮ ಶಿಕ್ಷಕರಿಲ್ಲವೆಂಬ ಕಾರಣಕ್ಕೆ ಮಕ್ಕಳನ್ನು ಪೋಷಕರು ಸೇರಿಸಿಲ್ಲ.

ಮಲೆನಾಡಿನ ಚಿಕ್ಕಮಗಳೂರು ಜಿಲ್ಲಾ ಕೇಂದ್ರಕ್ಕೆ ಹೊಂದಿಕೊಂಡಿರುವ ಉಂಡೇದಾಸರಹಳ್ಳಿ ಸರ್ಕಾರಿ ಶಾಲೆಯಲ್ಲಿ ಸುಸಜ್ಜಿತ ಕಟ್ಟಡ, ಶಿಕ್ಷಕಿ, ಅಡುಗೆ ಸಿಬ್ಬಂದಿ ಇದ್ದರೂ ವಿದ್ಯಾರ್ಥಿ ಗಳಿಲ್ಲದೆ ಮುಚ್ಚಲಾಗಿದೆ. ಅಲ್ಲಿಂದ ಕೇವಲ ಅರ್ಧ ಕಿ.ಮೀ ದೂರದಲ್ಲಿರುವ ಖಾಸಗಿ ಶಾಲೆಯಲ್ಲಿ ಒಂದೂವರೆ ಸಾವಿರಕ್ಕೂ ಹೆಚ್ಚು ಮಕ್ಕಳಿದ್ದಾರೆ.

ಹೀಗೆ, ರಾಜ್ಯದಲ್ಲಿ ಒಟ್ಟು 287 ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳು ವಿದ್ಯಾರ್ಥಿಗಳಿಲ್ಲದೆ ಮುಚ್ಚಿವೆ. ಅವುಗಳ ಪೈಕಿ, ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕು ಮೋರಟಗಿಯಲ್ಲಿರುವ ಶಾಲೆ ಶತಮಾನ ಕಂಡಿದ್ದರೂ ವಿದ್ಯಾರ್ಥಿಗಳಿಲ್ಲ. ಕನ್ನಡ ಮಾಧ್ಯಮವಷ್ಟೇ ಅಲ್ಲದೆ, ಉರ್ದು, ತಮಿಳು, ತೆಲುಗು, ಮರಾಠಿ ಮಾಧ್ಯಮದ ಶಾಲೆಗಳನ್ನೂ ಮುಚ್ಚಲಾಗಿದೆ. ವಿಜಯನಗರ ಜಿಲ್ಲೆಯಲ್ಲಿ ಅಂಥ ಹಲವು ಶಾಲೆಗಳಿವೆ. ಅದಷ್ಟೇ ಅಲ್ಲದೆ, ರಾಜ್ಯದಲ್ಲಿ ಮೂರು ವರ್ಷದಿಂದ ಖಾಸಗಿ ಶಾಲೆಗಳ ದಾಖಲಾತಿ ಸಂಖ್ಯೆ ಏರಿಕೆ ಕಂಡಿದ್ದರೆ, ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಕುಸಿಯುತ್ತಿದೆ. ಇದು, ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಸರ್ಕಾರಿ ಶಿಕ್ಷಣ ವ್ಯವಸ್ಥೆಯ ದುಸ್ಥಿತಿಗೆ ಕನ್ನಡಿ ಹಿಡಿದಿದೆ.

ಸರ್ಕಾರಿ ಶಾಲೆಗೆ ಮಕ್ಕಳು ಬರಲಿ ಎಂದು ಬಿಸಿಯೂಟ, ಸಮವಸ್ತ್ರ, ಶೂ–ಸಾಕ್ಸ್, ಬ್ಯಾಗ್, ಹಾಲು ಮೊದಲಾದವುಗಳನ್ನು ಕಲ್ಪಿಸಲಾಗಿದೆ ಎಂದು ಸರ್ಕಾರ ಹೇಳುತ್ತದೆ. 'ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿ' ಎಂದು ಪ್ರತಿ ಶೈಕ್ಷಣಿಕ ವರ್ಷದ ಆರಂಭಕ್ಕೂ ಮುಂಚೆಯೇ ಶಿಕ್ಷಕರು ಮನೆಯಿಂದ ಮನೆಗೆ ಅಲೆದಾಡುತ್ತಾ, 'ದಾಖಲಾತಿ ಆಂದೋಲನ' ನಡೆಸುತ್ತಲೇ ಇದ್ದಾರೆ. ಫಲಿತಾಂಶ ಮಾತ್ರ ನೂರಾರು ಶಾಲೆಗಳಲ್ಲಿ 'ಶೂನ್ಯ ದಾಖಲಾತಿ'.

4ನೇ ಪುಟ ನೋಡಿ



ರಾಮನಗರ ಜಿಲ್ಲೆಯ ಹಾರೋಹಳ್ಳಿ ತಾಲ್ಲೂಕಿನ ದೊಡ್ಡ ಬಾದಗೆರೆ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಹಳೆಯ ಕಟ್ಟಡದಲ್ಲಿ ಸ್ಥಳೀಯರು ಮೇಕೆ ಕಟ್ಟಿರುವುದು ಪ್ರಜಾವಾಣಿ ಚಿತ್ರ: ವಿ. ಗೋವಿಂದರಾಜು

ಖಾಸಗಿ ಶಾಲೆಗಳಿಗೆ ವರವಾದ ಆರ್‌ಟಿಇ

ಕಡ್ಡಾಯ ಶಿಕ್ಷಣ ಹಕ್ಕು(ಆರ್‌ಟಿಇ) ಜಾರಿಗೆ ತಂದ ಬಳಿಕ ಖಾಸಗಿ ಶಾಲೆಗಳಿಗೆ ಶೇ 25 ರಷ್ಟು ವಿದ್ಯಾರ್ಥಿಗಳನ್ನು ಸರ್ಕಾರವೇ ಆಯ್ಕೆ ಮಾಡಿ ಶುಲ್ಕ ಪಾವತಿಸಿ ಪ್ರವೇಶಾತಿ ನೀಡುತ್ತಿತ್ತು. ಪರಿಣಾಮ, ಸರ್ಕಾರಿ ಶಾಲೆಗೆ ಬರುತ್ತಿದ್ದವರು ಉಚಿತವಾಗಿ ಖಾಸಗಿ ಶಾಲೆಗೆ ಹೋಗತೊಡಗಿದರು.

ಅದಕ್ಕೂ ಮೊದಲು ಖಾಸಗಿ ಶಾಲೆಗಳಲ್ಲಿ ಪ್ರತಿ ವಿದ್ಯಾರ್ಥಿಯಿಂದ ಐದಾರು ಸಾವಿರ ರೂಪಾಯಿ ಶುಲ್ಕ ಪಡೆಯಲಾಗುತ್ತಿತ್ತು. ಆರ್‌ಟಿಇ ವಿದ್ಯಾರ್ಥಿಯ ಶುಲ್ಕ ಮಾತ್ರ ₹14 ಸಾವಿರ ಮೀರುತ್ತಿತ್ತು. ಅದನ್ನು ಸರ್ಕಾರ ವರ್ಷಕೊಮ್ಮೆ ಪಾವತಿಸುತ್ತಿತ್ತು. ಖಾಸಗಿ ಶಾಲೆಗಳ ಆರ್ಥಿಕ ಪ್ರಗತಿಗೂ ಅದು ದಾರಿ ಮಾಡಿತು. ಪಕ್ಕದಲ್ಲೇ ಸರ್ಕಾರಿ ಶಾಲೆಯಿದ್ದರೂ ಖಾಸಗಿ ಶಾಲೆಗೆ ಸರ್ಕಾರವೇ ಹಣ ನೀಡಿ ಕಳುಹಿಸುವಂತಾಯಿತು. ಈಗ ಆರ್‌ಟಿಇಗೆ ಮಕ್ಕಳ ಆಯ್ಕೆ ವಿಧಾನ ಬದಲಾಗಿದ್ದು, ಆಯ್ಕೆಯಾಗುವ ವಿದ್ಯಾರ್ಥಿಗಳ ಸಂಖ್ಯೆಯೂ ಕಡಿಮೆಯಾಗಿದೆ.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಹಿಜಾಬ್ ನಿಷೇಧಿಸಿ ಹೊರಡಿಸಲಾಗಿದ್ದ ಆದೇಶ ವಾಪಸ್ ಪಡೆಯುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿದ್ದ ಹೇಳಿಕೆಗೆ 'ಕೇಸರಿ ಪಡೆ' ತಿರುಗಿಬಿದ್ದಿದೆ. ಈ ಬೆನ್ನಲ್ಲೇ, ಚರ್ಚಿಸಿ ತೀರ್ಮಾನಿಸುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ. ಹಿಜಾಬ್ ನಿಷೇಧದಿಂದಾಗಿ ಶಿಕ್ಷಣ ವಂಚಿತರಾಗಿದ್ದ ಮುಸ್ಲಿಂ ವಿದ್ಯಾರ್ಥಿನಿಯರು, ವಿವಿಧ ಸಂಘಟನೆಗಳ ಪ್ರತಿನಿಧಿಗಳು ಸರ್ಕಾರದ ಆಲೋಚನೆಯನ್ನು ಸ್ವಾಗತಿಸಿದ್ದಾರೆ

ಹಿಜಾಬ್: ರಾಜಕೀಯ ಜಗಳ

ಶಾಲೆ- ಕಾಲೇಜುಗಳಲ್ಲಿ ಹಿಜಾಬ್ ಧರಿಸುವುದನ್ನು ನಿಷೇಧಿಸಿ ಹೊರಡಿಸಿರುವ ಆದೇಶವನ್ನು ಇನ್ನೂ ವಾಪಸ್ ಪಡೆದಿಲ್ಲ. ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳುತ್ತೇವೆ
ಸಿದ್ದರಾಮಯ್ಯ, ಮುಖ್ಯಮಂತ್ರಿ

ಮುಸ್ಲಿಂ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಅಡ್ಡಿಪಡಿಸಿದಾಗ ಧ್ವನಿ ಎತ್ತಿದ್ದಕ್ಕೆ ಪ್ರತಿಫಲ ದೊರೆತಿದೆ. ನನ್ನ ವಸ್ತ್ರ ನನ್ನ ಹಕ್ಕಾಗಿದ್ದು ಕಸಿದುಕೊಳ್ಳಲು ಯಾರಿಗೂ ಹಕ್ಕಿಲ್ಲ ಎಂಬುದನ್ನು ಸರ್ಕಾರ ತೋರಿಸಬೇಕು
ತೆಹ್ರೀನ್ ಬೇಗಂ, ಸುಪ್ರೀಂಕೋರ್ಟ್‌ನಲ್ಲಿ ಹೋರಾಟ ನಡೆಸುತ್ತಿರುವ ವಿದ್ಯಾರ್ಥಿನಿ, ಉಡುಪಿ

ಸರ್ಕಾರದ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಹಿಜಾಬ್ ವಿಷಯ ತೇಲಿಬಿಟ್ಟಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ತಮ್ಮ ಹುನ್ನಾರ ಬಯಲಾಗುತ್ತಿದ್ದಂತೆ ದಿಢೀರನೇ ಯೂಟರ್ನ್ ಹೊಡೆದಿದ್ದಾರೆ
ಆರ್. ಅಶೋಕ, ವಿರೋಧ ಪಕ್ಷದ ನಾಯಕ

ಅನ್ಯಾಯ ಸರಿಪಡಿಸುವ ಕೆಲಸ: ಎಚ್‌.ಕೆ. ಪಾಟೀಲ

ಬೆಂಗಳೂರು: 'ಹಿಜಾಬ್ ವಿಷಯದಲ್ಲಿ ಭಯ ಮೂಡಿಸುವಂಥ ನಿರ್ಣಯವನ್ನು ಹಿಂದಿನ ಸರ್ಕಾರ ಮಾಡಿತ್ತು. ಅದನ್ನು ಸರಿಪಡಿಸುವ ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತಿದೆ. ಆದಷ್ಟು ಬೇಗ ಸರ್ಕಾರ ಆದೇಶ ಹೊರಡಿಸಲಿದೆ' ಎಂದು ಕಾನೂನು ಸಚಿವ ಎಚ್‌.ಕೆ. ಪಾಟೀಲ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಇದು ನಮ್ಮ ಸರ್ಕಾರ, ಪಕ್ಷದ ಚಿಂತನೆಯಾಗಿದೆ. ಸಾರ್ವಜನಿಕರ ಒತ್ತಾಯದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಇದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಹಿಂದಿನ ಅವಧಿಯಲ್ಲಿ ಅನ್ಯಾಯವಾಗಿದೆ' ಎಂದು ಪ್ರತಿಪಾದಿಸಿದರು.

'ನಾವು ಏನು ತುಷ್ಟೀಕರಣ ಮಾಡಿದ್ದೇವೆ. ಸಂವಿಧಾನದ ಅನುಷ್ಠಾನಗೊಳಿಸುವುದು ತಪ್ಪೇ? ಸಂವಿಧಾನದ ಆಶಯಗಳನ್ನು ತಿರುಚುವ ಕೆಲಸವನ್ನು ಬಿಜೆಪಿಯವರು ಮಾಡುತ್ತಿದ್ದಾರೆ' ಎಂದು ಹೇಳಿದರು.

ಮರಳಿ ಕಾಲೇಜಿಗೆ ಹೋಗುವೆ: ಮುಸ್ಕಾನ್

ಪ್ರಜಾವಾಣಿ ವಾರ್ತೆ

ಮಂಡ್ಯ: 'ಹಿಜಾಬ್ ನಿಷೇಧ ಆದೇಶ ವಾಪಸ್ ಪಡೆಯುವ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೇಳಿಕೆಯನ್ನು ಇಲ್ಲಿನ ವಿದ್ಯಾರ್ಥಿನಿ ಬೀಬಿ ಮುಸ್ಕಾನ್ ಖಾನ್ ಸ್ವಾಗತಿಸಿದ್ದು, ಮತ್ತೆ ಓದು ಮುಂದುವರಿಸುವುದಾಗಿ ಹೇಳಿದ್ದಾರೆ.

ಕಳೆದ ವರ್ಷ ಮಂಡ್ಯದ ಪಿಇಎಸ್ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಗುಂಪೊಂದರ 'ಜೈ ಶ್ರೀರಾಮ್' ಘೋಷಣೆಗೆ ಪ್ರತಿಯಾಗಿ 'ಅಲ್ಲಾಹು ಅಕ್ಬರ್' ಘೋಷಣೆ ಕೂಗುವ ಮೂಲಕ ಅವರು ಗಮನ ಸೆಳೆದಿದ್ದರು. ಹಿಂದಿನ ಬಿಜೆಪಿ ಸರ್ಕಾರ ಶಾಲೆ–ಕಾಲೇಜುಗಳಲ್ಲಿ ಹಿಜಾಬ್ ಧರಿಸುವುದಕ್ಕೆ ನಿಷೇಧ ಹೇರಿದ್ದನ್ನು ಪ್ರತಿಭಟಿಸಿ ಕಾಲೇಜು ತೊರೆದಿದ್ದು, ಬಿ.ಕಾಂ. ಪರೀಕ್ಷೆಗೂ ಹಾಜರಾಗಿರಲಿಲ್ಲ.

6 ನೇ ಪುಟ ನೋಡಿ

ನಿರ್ದೇಶನ ನೀಡಲು ಸಾಧ್ಯವೇ: ವಿಜಯೇಂದ್ರ

ನವದೆಹಲಿ: 'ಹಿಜಾಬ್ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿದೆ. ಅಂತಹ ಸಂದರ್ಭದಲ್ಲಿ ಹಿಜಾಬ್ ನಿಷೇಧ ವಾಪಸ್ ಪಡೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ದೇಶನ ನೀಡಲು ಹೇಗೆ ಸಾಧ್ಯ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಪ್ರಶ್ನಿಸಿದರು.



ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಿದ್ದರಾಮಯ್ಯ ಬೇಜವಾಬ್ದಾರಿ ಹೇಳಿಕೆ ನೀಡಿದ್ದಾರೆ. ಶಿಕ್ಷಣ ಕ್ಷೇತ್ರವನ್ನು ಕಲುಷಿತ ಗೊಳಿಸುವ ಕೆಲಸಕ್ಕೆ ಸ್ವತಃ ಮುಖ್ಯಮಂತ್ರಿಯೇ ಕೈಹಾಕಿರುವುದು ಈ ನಾಡಿನ ದುರದೃಷ್ಟ' ಎಂದರು.

'ಕನಿಷ್ಠ ಪಕ್ಷ ಶಾಲಾ, ಕಾಲೇಜುಗಳಿಗೆ ಹೋಗುವ ಮಕ್ಕಳನ್ನಾದರೂ ರಾಜಕೀಯದಿಂದ ದೂರ ಇಡುವ ಕೆಲಸವನ್ನು ಸರ್ಕಾರ ಮಾಡಬೇಕಿತ್ತು. ಲೋಕಸಭಾ ಚುನಾವಣೆಯ ಸೋಲಿನ ಭೀತಿಯಲ್ಲಿ ಕಾಂಗ್ರೆಸ್ ಸರ್ಕಾರವು ತುಷ್ಟೀಕರಣದ ರಾಜಕಾರಣ ಮಾಡುತ್ತಿದೆ' ಎಂದು ಹೇಳಿದರು.

ಪದ್ಮಶ್ರೀ ವಾಪಸಿಗೆ ವೀರೇಂದರ್ ಸಿಂಗ್ ನಿರ್ಧಾರ

ನವದೆಹಲಿ (ಪಿಟಿಐ): 'ಗೂಂಗಾ ಪೈಲ್ವಾನ್' ಖ್ಯಾತಿಯ ಕುಸ್ತಿಪಟು, ಡೆಫ್‌ಲಿಂಪಿಕ್ಸ್ ಚಾಂಪಿಯನ್ ವೀರೇಂದರ್ ಸಿಂಗ್ ಯಾದವ್ ಅವರು ತಮ್ಮ ಪದ್ಮಶ್ರೀ ಪ್ರಶಸ್ತಿಯನ್ನು ಸರ್ಕಾರಕ್ಕೆ ಹಿಂದಿರುಗಿಸಲು ನಿರ್ಧರಿಸಿದ್ದಾರೆ.

ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪ ಎದುರಿಸುತ್ತಿರುವ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರ ಆಪ್ತ ಸಂಜಯ್ ಸಿಂಗ್ ಅವರು ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷರಾಗಿ ಆಯ್ಕೆಯಾಗಿರುವುದನ್ನು ವಿರೋಧಿಸಿ ಯಾದವ್ ಈ ನಿರ್ಧಾರ ಕೈಗೊಂಡಿದ್ದಾರೆ.

ಸಂಜಯ್ ಸಿಂಗ್ ಆಯ್ಕೆಯನ್ನು ಪ್ರತಿಭಟಿಸಿ ಕುಸ್ತಿಗೆ ಕಣ್ಣೀರ ವಿದಾಯ ಹೇಳಿರುವ ಸಾಕ್ಷಿ ಮಲಿಕ್ ಮತ್ತು ಪದ್ಮಶ್ರೀ ಮರಳಿಸಿರುವ ಬಜರಂಗ್ ಪೂನಿಯಾ ಅವರಿಗೆ ಯಾದವ್ ಬೆಂಬಲ ವ್ಯಕ್ತಪಡಿಸಿದ್ದಾರೆ.

ರಾಜ್ಯ ಬಿಜೆಪಿಗೆ ಹೊಸ ಪಡೆ; ಯಡಿಯೂರಪ್ಪ ವಿರೋಧಿಗಳಿಗಿಲ್ಲ ಅಧಿಕಾರ

ಆಪ್ತ ಬಣ ಕಟ್ಟಿದ ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ 40 ದಿನಗಳಲ್ಲೇ ಬಿ.ವೈ. ವಿಜಯೇಂದ್ರ ಅವರು ಪಕ್ಷದ ರಾಜ್ಯ ಘಟಕವನ್ನು ಪುನರ್ ರಚನೆ ಮಾಡಿದ್ದಾರೆ. ನೂತನ ಪದಾಧಿಕಾರಿಗಳ ಪಟ್ಟಿಯಲ್ಲಿ ಬಿ.ಎಸ್. ಯಡಿಯೂರಪ್ಪ ಹಾಗೂ ವಿಜಯೇಂದ್ರ ಬೆಂಬಲಿಗರಿಗೆ ಆದ್ಯತೆ ಸಿಕ್ಕಿದೆ.

ಕಳೆದ ಮೂರು ದಿನಗಳಿಂದ ನವದೆಹಲಿಯಲ್ಲಿರುವ ವಿಜಯೇಂದ್ರ ಅವರು ಪಕ್ಷದ ವರಿಷ್ಠರೊಂದಿಗೆ ಸಮಾಲೋಚಿಸಿ ನೂತನ ಪಟ್ಟಿಗೆ ಒಪ್ಪಿಗೆ ಪಡೆದಿದ್ದಾರೆ. ರಾಜ್ಯ ಉಪಾಧ್ಯಕ್ಷರು, ರಾಜ್ಯ ಪ್ರಧಾನ ಕಾರ್ಯದರ್ಶಿಗಳು,

ರಾಜ್ಯ ಪ್ರಧಾನ ಕಾರ್ಯದರ್ಶಿಗಳು

ವಿ.ಸುನಿಲ್ ಕುಮಾರ್

ಪಿ.ರಾಜೀವ್

ಎನ್‌.ಎಸ್. ನಂದೀಶ ರೆಡ್ಡಿ

ಜೆ.ಪ್ರೀತಮ್ ಗೌಡ

ರಾಜ್ಯ ಕಾರ್ಯದರ್ಶಿಗಳು ಹಾಗೂ ರಾಜ್ಯ ಖಜಾಂಚಿ ಹುದ್ದೆಗೆ ಹೊಸ ತಂಡವನ್ನು ನೇಮಿಸಲಾಗಿದೆ. ಮೋರ್ಚಾಗಳಿಗೆ ನೂತನ ಅಧ್ಯಕ್ಷರ ಹೆಸರುಗಳನ್ನೂ ಶನಿವಾರ ರಾತ್ರಿ ಪ್ರಕಟಿಸಲಾಗಿದೆ.

ವಿಜಯೇಂದ್ರ ನೇಮಕಕ್ಕೆ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬಹಿರಂಗ ಅಸಮಾಧಾನ ವ್ಯಕ್ತಪಡಿಸಿ ವಾಗ್ದಾಳಿ ನಡೆಸಿದ್ದರು. ಅಧ್ಯಕ್ಷ ಸ್ಥಾನ ಸಿಗದಿರುವುದಕ್ಕೆ ವಿ.ಸೋಮಣ್ಣ ಅತೃಪ್ತಿ ವ್ಯಕ್ತಪಡಿಸಿದ್ದರು. ಮಾಜಿ ಸಚಿವ ಅರವಿಂದ ಲಿಂಬಾವಳಿ ಸಹ ಮುನಿಸು ತೋರಿದ್ದರು. ಪಕ್ಷದ ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರು 'ನಾನು ಇನ್ನು ಸಾಮಾನ್ಯ ಕಾರ್ಯಕರ್ತ' ಎಂದು ಮಾರ್ಮಿಕವಾಗಿ ಹೇಳಿದ್ದರು. ಶಾಸಕ ಅರವಿಂದ ಬೆಲ್ಲದ ಅವರು ಬಹಿರಂಗವಾಗಿ ಏನೂ ಹೇಳದಿದ್ದರೂ ಅಂತರ ಕಾಯ್ದುಕೊಂಡಿದ್ದರು. ವಿಜಯೇಂದ್ರ ನೇಮಕದ ವಿರುದ್ಧ ಒಡಕು ಧ್ವನಿ ಎತ್ತಿದವರಿಗೆ ಹಾಗೂ ಅವರ ಪಾಳಯದಲ್ಲಿ ಗುರುತಿಸಿಕೊಂಡವರಿಗೆ ಈ ಪಟ್ಟಿಯಲ್ಲಿ ಜಾಗ ಸಿಕ್ಕಿಲ್ಲ. ಈ ವಿಷಯದಲ್ಲೂ ವಿಜಯೇಂದ್ರ ಮೇಲುಗೈ ಸಾಧಿಸಿದ್ದಾರೆ.

6ನೇ ಪುಟ ನೋಡಿ

ಅಂಜನಾದ್ರಿ ವೈಭವ

ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಅಂಜನಾದ್ರಿಯಲ್ಲಿ ಭಾನುವಾರ ಹನುಮಮಾಲೆ ವಿಸರ್ಜನೆ ನಡೆಯಲಿದ್ದು, ವಿದ್ಯುತ್ ದೀಪಾಲಂಕಾರದ ಸೊಬಗಿನಲ್ಲಿ ಶನಿವಾರ ರಾತ್ರಿ ಕಂಡ ಬೆಟ್ಟದ ಮೋಹಕ ನೋಟ
ಚಿತ್ರ: ವಿಶೇಷ ವ್ಯವಸ್ಥೆಯಿಡಿ ಪಡೆಯಲಾಗಿದೆ

ಒಳ ಪುಟಗಳು

ಹಿಂಸಾರೂಪಕ್ಕೆ ತಿರುಗಿದ ಪ್ರತಿಭಟನೆ 7
ಮಂಡ್ಯದಿಂದ ಎಚ್‌.ಡಿ. ಕುಮಾರಸ್ವಾಮಿ ಕಣಕ್ಕೆ? 6

ಫ್ರಾನ್ಸ್ ವಶದಲ್ಲಿ ವಿಮಾನ • ಪ್ರಯಾಣಿಕರ ವಿಚಾರಣೆ

ಮಾನವ ಕಳ್ಳಸಾಗಣೆ ಶಂಕೆ

ಪ್ಯಾರಿಸ್ (ಪಿಟಿಐ/ಎಎಫ್‌ಪಿ): ಮಾನವ ಕಳ್ಳಸಾಗಣೆ ಶಂಕೆಯಲ್ಲಿ ಫ್ರಾನ್ಸ್‌ನ ಅಧಿಕಾರಿಗಳು ವಶಕ್ಕೆ ತೆಗೆದುಕೊಂಡಿರುವ ವಿಮಾನದಲ್ಲಿದ್ದ ಭಾರತದ ಪ್ರಯಾಣಿಕರ ಜತೆ ಸಂಪರ್ಕದಲ್ಲಿರುವುದಾಗಿ ಇಲ್ಲಿನ ಭಾರತ ರಾಯಭಾರ ಕಚೇರಿ ಶನಿವಾರ ಹೇಳಿದೆ.

ದುಬೈನಿಂದ ನಿಕರಾಗುವಾಗೆ ತೆರಳುತ್ತಿದ್ದ ವಿಮಾನವನ್ನು ಮಾನವ ಕಳ್ಳಸಾಗಣೆ ಶಂಕೆಯ ಮೇರೆಗೆ ಫ್ರಾನ್ಸ್‌ನ ಅಧಿಕಾರಿಗಳು ಗುರುವಾರ ತುರ್ತು ಭೂಸ್ಪರ್ಶ ಮಾಡಿಸಿದ್ದರು. ಪ್ಯಾರಿಸ್‌ನ ಪೂರ್ವಕ್ಕೆ 150 ಕಿ.ಮೀ. ದೂರದಲ್ಲಿರುವ ವಾಟ್ರಿ ನಿಲ್ದಾಣದಲ್ಲಿ ಇಳಿದ ವಿಮಾನದಲ್ಲಿದ್ದ 303 ಪ್ರಯಾಣಿಕರಲ್ಲಿ ಹೆಚ್ಚಿನವರು ಭಾರತದವರು.

'ವಾಟ್ರಿ ನಿಲ್ದಾಣದಲ್ಲಿ ಇಳಿದ ವಿಮಾನವನ್ನು ವಶಕ್ಕೆ ತೆಗೆದುಕೊಂಡಿರುವುದಾಗಿ ಫ್ರಾನ್ಸ್‌ನ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಕಾನ್ಸುಲ್ ಕಚೇರಿಯ ಅಧಿಕಾರಿಗಳು ಸ್ಥಳಕ್ಕೆ ತಲುಪಿದ್ದು, ಪ್ರಯಾಣಿಕರ ಯೋಗ–ಕ್ಷೇಮದ ಬಗ್ಗೆ ಗಮನ ಹರಿಸಿದ್ದಾರೆ' ಎಂದು ಭಾರತ ರಾಯಭಾರ ಕಚೇರಿ ತನ್ನ 'ಎಕ್ಸ್' ಖಾತೆಯಲ್ಲಿ ತಿಳಿಸಿದೆ.

ಇಬ್ಬರ ವಿಚಾರಣೆ: 'ಫ್ರಾನ್ಸ್‌ನ ಸಂಘಟಿತ ಅಪರಾಧ ತಡೆ ಘಟಕವು ತನಿಖೆಯನ್ನು ಕೈಗೆತ್ತಿಕೊಂಡಿದೆ. ವಿಶೇಷ ತನಿಖಾ ತಂಡದ ಅಧಿಕಾರಿಗಳು ಎಲ್ಲ ಪ್ರಯಾಣಿಕರನ್ನೂ ವಿಚಾರಣೆಗೆ ಒಳಪಡಿಸಿದ್ದಾರೆ.

5ನೇ ಪುಟ ನೋಡಿ

ಸ್ವಚ್ಛತೆ ಅನುದಾನ ಹೆಚ್ಚಳ: ಬಿಡುಗಡೆ ವಿಳಂಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ ಸ್ವಚ್ಛತೆ, ಕುಡಿಯುವ ನೀರಿಗೆ ನೀಡುವ ಮೊತ್ತವನ್ನು ಪ್ರಸಕ್ತ ಶೈಕ್ಷಣಿಕ ಸಾಲಿನಿಂದ ಮೂರುಪಟ್ಟು ಹೆಚ್ಚಿಸಲಾಗಿದ್ದರೂ ಸಮಯಕ್ಕೆ ಸರಿಯಾಗಿ ಹಣ ದೊರೆಯದೇ, ಶಾಲೆಗಳಲ್ಲಿ ಶೌಚಾಲಯ ಸ್ವಚ್ಛತೆಗೆ ಪರದಾಡುವಂತಾಗಿದೆ.

2022–23ನೇ ಸಾಲಿನವರೆಗೂ ಪ್ರತಿ ಶಾಲೆಗೆ ಕನಿಷ್ಠ ₹6,350ರಿಂದ ಗರಿಷ್ಠ ₹9 ಸಾವಿರ ನೀಡಲಾಗುತ್ತಿತ್ತು. ಇದರಲ್ಲೇ ಕುಡಿಯುವ ನೀರು ಹಾಗೂ ಶೌಚಾಲಯಗಳ ಸ್ವಚ್ಛತಾ ಕಾರ್ಯ ಮಾಡಬೇಕಿತ್ತು. 2023–24ನೇ ಬಜೆಟ್‌ನಲ್ಲೇ ಮೂರುಪಟ್ಟು ಅನುದಾನ ಹೆಚ್ಚಿಸಲಾಗಿದೆ. ಪ್ರತಿ ಶಾಲೆಗೆ ₹20 ಸಾವಿರದಿಂದ ₹45 ಸಾವಿರ ನಿಗದಿ ಮಾಡಲಾಗಿದೆ.

'ಪ್ರಸಕ್ತ ಬಜೆಟ್‌ನಿಂದ ಶಾಲಾ ಸ್ವಚ್ಛತೆ, ಕುಡಿಯುವ ನೀರಿಗೆ ನೀಡುವ ಮೊತ್ತವನ್ನು ಮೂರು ಪಟ್ಟು ಹೆಚ್ಚಳ ಮಾಡಲಾಗಿದೆ. ಸರ್ಕಾರ ಈಗ 1ರಿಂದ 50 ವಿದ್ಯಾರ್ಥಿಗಳಿಗೆ ₹20 ಸಾವಿರ, 500ಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದರೆ ₹45 ಸಾವಿರ ನಿಗದಿ ಮಾಡಿದೆ. ಈಗಾಗಲೇ ಎರಡು ಕಂತುಗಳಲ್ಲಿ ಹಣ ನೀಡಲಾಗಿದೆ. ಉಳಿದ ಹಣವನ್ನು ಮಾರ್ಚ್ ಒಳಗೆ ನೀಡಲಾಗುವುದು. ಹೆಚ್ಚಳದ ಸೌಲಭ್ಯ ಬಳಸಿಕೊಂಡು ಸ್ವಚ್ಛತೆಗೆ ಗಮನ ಹರಿಸಬೇಕು' ಎನ್ನುತ್ತಾರೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಆಯುಕ್ತೆ ಬಿ.ಬಿ.ಕಾವೇರಿ.

'ಇದುವರೆಗೂ ಕಡಿಮೆ ಮೊತ್ತ ಸಿಗುತ್ತಿದ್ದ ಕಾರಣ ಶೌಚಾಲಯ ಸ್ವಚ್ಛತೆಗೆ ಕೆಲಸಗಾರರು ಬರುತ್ತಿರಲಿಲ್ಲ. ಹಾಗಾಗಿ, ಬಹುತೇಕ ಶಾಲೆಗಳಲ್ಲಿ ಶಿಕ್ಷಕರೇ ನಿರ್ವಹಿಸುತ್ತಿದ್ದೆವು. ಗ್ರಾಮೀಣ ಪ್ರದೇಶದಲ್ಲಿ ಹೇಗೋ ಅನುಸರಿಸಿಕೊಂಡು ನಿರ್ವಹಣೆ ಮಾಡಬಹುದು. ಆದರೆ, ಬೆಂಗಳೂರಿನಂತಹ ನಗರದಲ್ಲಿ ಸ್ವಚ್ಛತಾ ಕಾರ್ಯಕ್ಕೆ ಹೆಚ್ಚಿನ ಹಣ ಬೇಕಾಗುತ್ತದೆ. ಹೆಚ್ಚಳ ಮಾಡಿದ ಹಣವನ್ನು ಶೈಕ್ಷಣಿಕ ವರ್ಷದ ಆರಂಭದಲ್ಲೇ ಬಿಡುಗಡೆ ಮಾಡಬೇಕು. ನಗರ ಪ್ರದೇಶಗಳಿಗೆ ಸ್ವಲ್ಪ ಹೆಚ್ಚು ಮಾಡಿದರೆ ಅನುಕೂಲವಾಗಲಿದೆ ಎನ್ನುತ್ತಾರೆ' ಬೆಂಗಳೂರು ದಕ್ಷಿಣ ಜಿಲ್ಲೆಯ ಶಾಲೆಯೊಂದರ ಮುಖ್ಯ ಶಿಕ್ಷಕ.

4ನೇ ಪುಟ ನೋಡಿ

ಮುಖ್ಯ ಶಿಕ್ಷಕಿ ಬಂಧನ

ಬೆಂಗಳೂರು: ಅಂದ್ರಹಳ್ಳಿ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಶೌಚಾಲಯವನ್ನು ಮಕ್ಕಳಿಂದ ಸ್ವಚ್ಛಗೊಳಿಸಿದ್ದ ಆರೋಪದಡಿ ಶಾಲೆಯ ಮುಖ್ಯ ಶಿಕ್ಷಕಿ ಟಿ.ಲಕ್ಷ್ಮಿದೇವಮ್ಮ ಅವರನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. 4

ಚಿನಕುರಳಿ
ಪ್ರಕಾಶ್ ಶೆಟ್ಟಿ

ಅಂಗನವಾಡಿ ಅಕ್ರಮ: ಲೋಕಾ ತನಿಖೆ

• ಚಂದ್ರಹಾಸ ಹಿರೇಮಳಲಿ

ಪ್ರಜಾವಾಣಿ ವಿಶೇಷ

ಬೆಂಗಳೂರು: ಮಾರ್ಗಸೂಚಿಗೆ ವಿರುದ್ಧವಾಗಿ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರ ನೇಮಕ ಮಾಡಿದ್ದ ಇಬ್ಬರು ಉಪ ನಿರ್ದೇಶಕರೂ ಸೇರಿ ಐವರು ಅಧಿಕಾರಿಗಳ ವಿರುದ್ಧದ ಪ್ರಕರಣದ ತನಿಖೆಯನ್ನು ಸರ್ಕಾರ ಲೋಕಾಯುಕ್ತಕ್ಕೆ ಒಪ್ಪಿಸಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕೋಲಾರ ಜಿಲ್ಲೆಯ ಉಪ ನಿರ್ದೇಶಕ ಎನ್.ನಾರಾಯಣಸ್ವಾಮಿ, ಬೆಂಗಳೂರು ನಗರ ಜಿಲ್ಲೆ ಉಪ ನಿರ್ದೇಶಕ ಎಸ್. ಸಿದ್ದರಾಮಣ್ಣ, ನಿವೃತ್ತ ಉಪ ನಿರ್ದೇಶಕ ಮಹೇಶ್ವರಪ್ಪ, ಕೊಡಗಿನ ಜಿಲ್ಲಾ ನಿರೂಪಣಾಧಿಕಾರಿ ಬಿ.ಈರಾಸ್ವಾಮಿ, ಬೆಂಗಳೂರು ನಗರ ಜಿಲ್ಲೆ ಉಪ ನಿರ್ದೇಶಕರ ಕಚೇರಿ ಅಧೀಕ್ಷಕ ಮಹಾಲಿಂಗೇಶ್ ಆರೋಪಿಗಳು.

9ನೇ ಪುಟ ನೋಡಿ

ಒಬ್ಬ ಅಧಿಕಾರಿ ಹೆಸರು ಕಣ್ಮರೆ!

ನೇಮಕಾತಿ ಭ್ರಷ್ಟಾಚಾರದ ಆರೋಪ ಹೊತ್ತವರಲ್ಲಿ ಆರು ಅಧಿಕಾರಿಗಳ ಹೆಸರು ಇದ್ದರೂ, ಲೋಕಾಯುಕ್ತ ತನಿಖೆಗೆ ನೀಡಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹೊರಡಿಸಿದ ಆದೇಶದಲ್ಲಿ ಒಬ್ಬರ ಹೆಸರನ್ನು ಕೈಬಿಡಲಾಗಿದೆ.

ಅಂತಿಮ ಹಂತದಲ್ಲಿ ಯಾವಕಾರಣಕ್ಕೆ ಹೆಸರು ಬಿಡಲಾಗಿದೆ ಎಂಬ ಕುರಿತು ಆದೇಶದಲ್ಲಿ ಯಾವ ಉಲ್ಲೇಖವೂ ಇಲ್ಲ. ಮೂವರು ಅಧಿಕಾರಿಗಳು ನೀಡಿದ ವರದಿ, ಲೋಕಾಯುಕ್ತ ವಿಚಾರಣೆಗೆ ನೀಡಲು ಅನುಮತಿ ಕೋರಿ ಸಲ್ಲಿಸಿದ ಪ್ರಸ್ತಾವನೆಯಲ್ಲೂ ಇದ್ದ ಬೆಂಗಳೂರು ಉತ್ತರ ತಾಲ್ಲೂಕು ಯಲಹಂಕದ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಪ್ರಕಾಶ್ ಕುಮಾರ್ ಹೆಸರು ಅಂತಿಮ ಆದೇಶದಲ್ಲಿ ಕಣ್ಮರೆಯಾಗಿದೆ.

ಮಂಗಳೂರಿಗೆ ಕಚ್ಚಾ ತೈಲ ಹೊತ್ತು ತರುತ್ತಿದ್ದ ಹಡಗಿಗೆ ಬೆಂಕಿ

ಸರಕು ಹಡಗಿನ ಮೇಲೆ ಡ್ರೋನ್ ದಾಳಿ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಸೌದಿ ಅರೇಬಿಯಾದಿಂದ ಮಂಗಳೂರಿಗೆ ಕಚ್ಚಾ ತೈಲ ಹೊತ್ತು ತರುತ್ತಿದ್ದ ಸರಕು ಸಾಗಣೆ ಹಡಗು ಎಂವಿ ಚೆಮ್ ಪ್ಲುಟೊದಲ್ಲಿ ಶನಿವಾರ ಸ್ಫೋಟ ಸಂಭವಿಸಿದೆ. ಡ್ರೋನ್ ದಾಳಿಯೇ ಸ್ಫೋಟಕ್ಕೆ ಕಾರಣ ಎಂದು ವರದಿಯಾಗಿದೆ.

ಭಾರತದ 21 ಸಿಬ್ಬಂದಿ ಸೇರಿ 22 ಮಂದಿ ಹಡಗಿನಲ್ಲಿದ್ದರು. ಅವರೆಲ್ಲರೂ ಸುರಕ್ಷಿತವಾಗಿದ್ದಾರೆ ಎಂದು ಭಾರತೀಯ ಸೇನೆಯ ಮೂಲಗಳು ತಿಳಿಸಿವೆ.

ಗುಜರಾತ್‌ನ ವೆರಾವಲ್ ಕರಾವಳಿಯಿಂದ 200 ನಾಟಿಕಲ್ ಮೈಲಿ ದೂರದಲ್ಲಿ ಈ ಘಟನೆ ಸಂಭವಿಸಿದೆ. ಭಾರತೀಯ ಕರಾವಳಿ ಕಾವಲು ಪಡೆ ಮತ್ತು ನೌಕಾಪಡೆ ತಮ್ಮ ನೌಕೆಗಳು ಮತ್ತು ಯುದ್ಧ ವಿಮಾನಗಳನ್ನು ರಕ್ಷಣಾ ಕಾರ್ಯಕ್ಕೆ ನಿಯೋಜಿಸಿವೆ.

ಹಡಗೊಂದರ ಮೇಲೆ ಮಾನವ ರಹಿತ ವೈಮಾನಿಕ ವ್ಯವಸ್ಥೆಯಿಂದ (ಯುಎಎಸ್) ದಾಳಿ ನಡೆದಿದೆ. ಸದ್ಯ ಬೆಂಕಿ ನಂದಿಸಲಾಗಿದೆ ಎಂದು ಬ್ರಿಟನ್‌ನ ಯುನೈಟೆಡ್ ಕಿಂಗ್‌ಡಮ್ ಮೇರಿಟೈಮ್ ಟ್ರೇಡ್ ಆಪರೇಷನ್ಸ್ ಸಂಸ್ಥೆ (ಯುಕೆಎಂಟಿಒ) ಮೊದಲಿಗೆ ಭಾರತೀಯ ನೌಕಾಪಡೆಗೆ ಮಾಹಿತಿ ನೀಡಿತು. ಬಳಿಕ ಭಾರತೀಯ ನೌಕಾಪಡೆಯು ಪಿ–8ಐ ಕರಾವಳಿ ಗಸ್ತು ಯುದ್ಧ ವಿಮಾನವನ್ನು ರಕ್ಷಣಾ ಕಾರ್ಯಾಚರಣೆಗೆ ನಿಯೋಜಿಸಿತು ಎಂದು ನೌಕಾಪಡೆಯ ಅಧಿಕಾರಿಗಳು ತಿಳಿಸಿದ್ದಾರೆ.

ಪಿ–8ಐ ಯುದ್ಧವಿಮಾನವು ದಾಳಿಗೊಳಗಾದ ಹಡಗಿನ ಮೇಲೆ ಹಾರಾಟ ನಡೆಸಿ, ಅದರ ಜೊತೆ ಸಂಪರ್ಕ ಸಾಧಿಸಿತು. ಹಡಗು ಮತ್ತು ಅದರಲ್ಲಿದ್ದ ಸಿಬ್ಬಂದಿಯ ಸುರಕ್ಷತೆ ಕುರಿತು ಖಾತ್ರಿಪಡಿಸಿಕೊಂಡಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರತೀಯ ಕರಾವಳಿ ಕಾವಲು ಪಡೆಯು ತನ್ನ ಐಸಿಜಿಎಸ್ ವಿಕ್ರಂ ನೌಕೆಯನ್ನು ದುರಂತ ಸಂಭವಿಸಿದ ಸ್ಥಳಕ್ಕೆ ಕಳುಹಿಸಿದೆ ಎಂದು ಮೂಲಗಳು ತಿಳಿಸಿವೆ.

ದಾಳಿ ನಡೆಸಿದ ಡ್ರೋನ್‌ನ ಗುರುತು ಪತ್ತೆಯಾಗಿಲ್ಲ. ಯೆಮನ್‌ನ ಹೌತಿ ಬಂಡುಕೋರರು ಕೆಂಪು ಸಮುದ್ರದ ನೌಕಾಪಥದ ಮೇಲೆ ದಾಳಿ ನಡೆಸುತ್ತಿರುವ ವೇಳೆಯೇ ಈ ಘಟನೆ ಸಂಭವಿಸಿದೆ. ಹಡಗು ಲೈಬೀರಿಯಾದ ಧ್ವಜ ಹೊತ್ತು ಸಾಗುತ್ತಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬೆಂಕಿ ಆರಿಸಲಾಗಿದ್ದರೂ, ಹಡಗಿನ ಕಾರ್ಯನಿರ್ವಹಣೆಗೆ ತೊಂದರೆಯಾಗಿದೆ. ಘಟನೆ ಕುರಿತು ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ.

2ನೇ ಪುಟ ನೋಡಿ

ಮುಖ್ಯಾಂಶಗಳು

- ಬ್ರಿಟನ್ ಸಂಸ್ಥೆಯಿಂದ ಭಾರತೀಯ ನೌಕಾಪಡೆಗೆ ಸಂದೇಶ ರವಾನೆ
- ಕರಾವಳಿ ಕಾವಲು ಪಡೆ, ನೌಕಾಪಡೆಯಿಂದ ಕಾರ್ಯಾಚರಣೆ

20 ಭಾರತೀಯರು ಮತ್ತು ವಿಯೆಟ್ನಾಂನ ಒಬ್ಬ ಸಿಬ್ಬಂದಿ ಇದ್ದ ತೈಲ ಸಾಗಣೆ ಹಡಗಿನ ಮೇಲೆ ಶಂಕಿತ ಡ್ರೋನ್ ದಾಳಿ ನಡೆದಿರುವ ಬಗ್ಗೆ ವರದಿಯಾಗಿದೆ
ಕಮಾಂಡೆಂಟ್ ನಿರಂಜನ್ ಪ್ರತಾಪ್ ಸಿಂಗ್, ಭಾರತೀಯ ಕರಾವಳಿ ರಕ್ಷಣಾ ಪಡೆ ವಕ್ತಾರ

ಸರಕು ಹಡಗಿನ ಮೇಲೆ ಡ್ರೋನ್ ದಾಳಿ

ಒಂದನೇ ಪುಟದಿಂದ

ಎಚ್ಚರಿಕೆಯಿಂದ ಹಡಗು ಚಲಾಯಿಸಬೇಕು ಮತ್ತು ಸಂಶಯಾಸ್ಪದ ಚಟುವಟಿಕೆಗಳು ಕಂಡುಬಂದರೆ ಕೂಡಲೇ ಯುಕೆಎಂಟಿಒಗೆ ಮಾಹಿತಿ ರವಾನಿಸಬೇಕು ಎಂದು ಹಡಗುಗಳ ಮೇಲ್ವಿಚಾರಕರಿಗೆ ಸೂಚಿಸಲಾಗಿದೆ.

ಸೌದಿಯ ಜುಬೈಲ್‌ನಿಂದ ಹಡಗು ಹೊರಡುವ ಮುನ್ನ ಎಲ್ಲಾ ರೀತಿಯ ಭದ್ರತಾ ತಪಾಸಣೆಗಳನ್ನು ಕೈಗೊಳ್ಳಲಾಗಿತ್ತು ಎಂದು ಎಎನ್‌ಐ ಸುದ್ದಿಸಂಸ್ಥೆ ವರದಿ ಮಾಡಿದೆ.

BOOK YOUR TICKETS NOW

PVR - INOX CINEMAS {DIRECTORS CUT, FORUM REX WALK | NEXUS FORUM MALL, KORMANGALA | ORION MALL, YESHWANTPUR | VAISHNAVI SAPPHIRE MALL, TUMKUR ROAD | VEGA CITY MALL | MSR REGALIA | PHOENIX MARKET CITY, K.R. PURAM | BHARTIYA CITY | GT WORLD MALL | AURA PARK SQUARE, WHITEFIELD ROAD | SPIRIT MALL | VR MALL, WHITEFIELD ROAD | GLOBAL MALL, NAYANDALLI | UPTOWN OMR MALL | SUPERPLEX FALCON CITY | MANTRI MALL | CENTRAL MALL, J.P.NAGAR | GARUDA MALL | SWAGATH MALL | FORUM NEIGHBOURHOOD MALL | BROOKFIELD MALL | LIDO | GALLERIA MALL, RMZ YELAHANKA, | GARUDA, YELAHANKA | SBR HORIZON, SEEGEHALLI} | CINEPOLIS CINEMAS {ROYAL MEENAKSHI MALL | ETA MALL, BINNY MILL | EAST ORION MALL | SHANTINIKETAN | SJR SPECTRUM MALL | LULU MALL (TRD) | LULU MALL (VIP)} | GOPALAN CINEMAS {ARCADE MALL | LEGACY MALL | GRAND MALL | SIGNATURE MALL | INNOVATION MALL} | INNOVATIVE {MARATHHALLI} | KINO CINEMA {SEEGEHALLI} | CINEPHILE {HSR LAYOUT} | ROCKLINE CINEMA MALL {JALAHALLI CROSS} | MIRAJ CINEMAS {SUNKADAKATTE} | CINE GALAXY {SURATKAL} | MOVIE TIME {DAVANGERE | BELLARY} | ABHINAY {K.G.ROAD} | URVASHI THEATRE {BANGALORE} | VEERESH THEATRE {MAGADI ROAD} | SWAGATH SHANKARNAG {M.G.RAOD} | SWAGATH POORNIMA {J.C.RAOD} | AMRUTH THEATRE {LINGARAJPURAM} | HMT THEATRE {JALAHALLI} | PUSHAPANJALI THEATRE {SULTANPALYA} | VENKATESHWARA THEATRE {GOLLARATTI} | GALAXY PARADISE {HONGASANDRA} | VAIBHAV {SANJAYNAGAR} | VAIBHAVI VAISHNAVI {UTTARAHALLI} | LAKSHMI {TAVAREKERE} | VINAYAKA THEATRE {MARATHHALLI} | SHARADA THEATRE {SP ROAD} | PRASANNA THEATRE {MAGADI ROAD} | ROBIN {KENGERI} | PRUTHVI {NAGAWARA} | MANASA {KONANKUNTE} | VINAYAKA {VARTHUR} | VINAYAKA THEATRE {DJ HALLI} | SANTOSH THEATRE {RPC LAYOUT} | VINAYAKA THEATRE {HARINAGARA} | SIDDALINGESHWARA THEATRE {JP NAGAR} | GOVARDHAN THEATRE {YESHWANTHPURA} | VAIBHAV THEATRE {DODDABALLAPURA} | NIRMAL THEATRE {MAGADI} | SREE RAMA THEATRE {RAMANAGARA} | GOWRISHANKARA THEATRE {ATTIBELE} | LAKSHMINARASIMHA THEATRE {ANEKAL} | JAI BHARATH THEATRE {TUMKUR} | SAPTAGIRI THEATRE {SIRA} | LAKSHMI THEATRE {TIPTUR} | SHANKAR THEATRE {MADHUGIRI} | AKASH THEATRE {KUNIGAL} | ADARSHA THEATRE {CHINTHAMANI} | SHARADA THEATRE {KOLAR} | VIJAYA THEATRE {BANGARPET} | LAKSHMI THEATRE {KGF} | KRISHNA THEATRE {CHIKKABALLAPURA} | PVR - INOX CINEMAS {FIZA MALL, MANGALORE | FORUM MALL, MYSORE | GARUDA MALL, MYSORE | CENTRAL, MANIPAL | SATYAM MALL, MYSORE | S MALL, TUMKUR | CENTRO MALL MYSORE} | CINEPOLIS {CITY CENTRE MALL, MANGALORE} | BHARATH CINEMAS {MANGALORE | MANIPAL | KUNDAPUR | PADUBIDRE | PUTTUR | SHIMOGA} | DRC CINEMAS {MYSORE} | VISION CINEMAS {MYSORE} | SANGAM THEATRE {MYSORE} | BALAJI DELUXE THEATRE {MYSORE} | JAYALAKSHMI THEATRE {MANDYA} | BALAJI THEATRE {CHENNARAYAPATTANA} | SLN THEATRE {HOLENARASIPURA} | MAHALAKSHMI THEATRE {MALAVALLI} | VENKATESHWARA THEATRE {SATHANURU} | SRI GURU THEATRE {HASSAN} | BASAWESHWARA {CHAMARAJANAGARA} | MAHAVEER THEATRE {MADDUR} | LAKSHMI THEATRE {CHENNAPATTANA} | MANJUNATHA THEATRE {SHIMOGA} | SP CINEMAS {MANGALORE} | ROOPAVANI THEATRE {MANGALORE} | SRI LEKHA THEATRE {CHIKAMAGALORE} | NETHRAVATHI THEATRE {BHADRAVATHI} | DIANA THEATRE {UDUPI} | TRINETRA THEATRE {DAVANGERE} | BASAVESHWARA THEATRE {CHITRADURGA} | SMART MOVIES {CHITRADURGA} | PUSHPANJALI THEATRE {HIRIYURU} | RAGHAVENDRA THEATRE {BELLARY} | R R MULTIPLEX {BELLARY} | SARASWATHI THEATRE {HOSPET} | KRISHNA PICTURE PALACE HAGARI {BOMMANA HALLI} | BHARAT THEATRE {KAMPLI}.

FARNAZ

ಭಕ್ತಿ ಭಾವದಿಂದ ವೈಕುಂಠ ಏಕಾದಶಿ ಆಚರಣೆ

ರಾಜಾಜಿನಗರ 5ನೇ ಹಂತದಲ್ಲಿ ಇರುವ ಕೈಲಾಸ ವೈಕುಂಠ ಮಹಾಕ್ಷೇತ್ರದಲ್ಲಿ ಭಕ್ತರು ದೇವರ ದರ್ಶನ ಪಡೆದರು —ಪ್ರಜಾವಾಣಿ ಚಿತ್ರ

ವಿವಿಧ ದೇವಸ್ಥಾನಗಳಲ್ಲಿ ಸರದಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ಪುನೀತರಾದ ಭಕ್ತರು

ನರಸೀಪುರ ತೋಪಿನ ಆತ್ಮಾರಾಮ ದೇವರಿಗೆ ವೆಂಕಟೇಶ್ವರ ಅಲಂಕಾರ ಮಾಡಲಾಯಿತು.

ರಾಜರಾಜೇಶ್ವರಿನಗರದ ನಾಗದೇವನಹಳ್ಳಿಯ ಮೂಡಲಗಿರಿ ತಿಮ್ಮಪ್ಪ ದೇವರಿಗೆ ವಿವಿಧ ಬಗೆಯ ಹೂವು, ಹಣ್ಣು, ತರಕಾರಿಗಳಿಂದ ವಿಶೇಷ ಅಲಂಕಾರ ಮಾಡಲಾಯಿತು.

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧ ದೇವಸ್ಥಾನಗಳಲ್ಲಿ ಶನಿವಾರ ವೈಕುಂಠ ಏಕಾದಶಿಯನ್ನು ಭಕ್ತಿಭಾವದಿಂದ ಆಚರಿಸಲಾಯಿತು.

ಬೆಳಗಿನ ಜಾವದಿಂದಲೇ ಮಕ್ಕಳು, ಮಹಿಳೆಯರು, ಹಿರಿಯರು ದೇವಸ್ಥಾನಗಳಿಗೆ ತಂಡೋಪತಂಡವಾಗಿ ಬಂದು ವಿವಿಧ ಬಗೆಯ ಅಭಿಷೇಕಗಳನ್ನು ಮಾಡಿಸಿ, ದೇವರ ದರ್ಶನ ಪಡೆದರು. ಉಪವಾಸ ವ್ರತ ಆಚರಿಸಿದ ಮಹಿಳೆಯರು ಹಾಗೂ ಪುರುಷರ ದೇವಸ್ಥಾನಗಳಲ್ಲಿ ನೈವೇದ್ಯ ಸಲ್ಲಿಸಿದರು. ದೇವಾಲಯಗಳಲ್ಲಿ ವಿವಿಧ ಭಜನಾ ಮಂಡಳಿಗಳಿಂದ ಭಜನೆ ನಡೆಯಿತು. ಲೋಕ ಕಲ್ಯಾಣಾರ್ಥವಾಗಿ ವಿಷ್ಣು ಸಹಸ್ರನಾಮ ಪಾರಾಯಣ, ನಾರಾಯಣ ಹವನಗಳನ್ನು ನಡೆಸಲಾಯಿತು.

ರಾಜಾಜಿನಗರದಲ್ಲಿರವ ಇಸ್ಕಾನ್ ದೇವಾಲಯದಲ್ಲಿ ಭಾರಿ ಸಂಖ್ಯೆಯಲ್ಲಿ ಭಕ್ತರು ಸರದಿ ಸಾಲಿನಲ್ಲಿ ನಿಂತು ವೈಕುಂಠ ದ್ವಾರ ದರ್ಶನ ಪಡೆದರು. ರಾಜಾಜಿನಗರ 5ನೇ ಹಂತದಲ್ಲಿ ಇರುವ ಕೈಲಾಸ ವೈಕುಂಠ ಮಹಾಕ್ಷೇತ್ರದಲ್ಲಿ ಶೇಷ ಶಯನರಾಗಿರುವ ದೇವರ ದರ್ಶನ ಪಡೆದು ಪುನೀತರಾದರು.

ವೈಯಾಲಿಕಾವಲ್‌ನಲ್ಲಿರುವ ತಿರುಪತಿ ತಿರುಮಲ ದೇವಸ್ಥಾನ, ಉಲ್ಲಾಳು ಮುನೇಶ್ವರ ನಗರದ ಲಕ್ಷ್ಮೀವೆಂಕಟೇಶ್ವರ ದೇವಸ್ಥಾನ, ಜೆಪಿ ನಗರದ ವೆಂಕಟೇಶ್ವರ ದೇವಾಲಯ ಸೇರಿದಂತೆ ನಗರದ ಬಹುತೇಕ ದೇವಸ್ಥಾನಗಳಲ್ಲಿ ಭಕ್ತರು ವೈಕುಂಠ ಏಕಾದಶಿಯ ಪ್ರಾರ್ಥನೆ ಸಲ್ಲಿಸಿದರು.

ಕೆಂಗೇರಿಯ ಮರಿಯಪ್ಪನಪಾಳ್ಯದಲ್ಲಿರುವ ಶನೈಶ್ಚರಸ್ವಾಮಿ ದೇವಸ್ಥಾನದಲ್ಲಿ ನಡೆದ ಶ್ರೀನಿವಾಸ ಕಲ್ಯಾಣ ಮಹೋತ್ಸವವನ್ನು ಭಕ್ತರು ಕಣ್ತುಂಬಿಕೊಂಡರು. ವೈಕುಂಠ ಏಕಾದಶಿ ಪ್ರಯುಕ್ತ ನಡೆದ ರಕ್ತದಾನ ಶಿಬಿರದಲ್ಲಿ ರಕ್ತದಾನ ಮಾಡಿದವರಿಗೆ ಆರ್ಯ ಈಡಿಗ ಸಂಘದ ಅಧ್ಯಕ್ಷ ತಿಮ್ಮೇಗೌಡ ಪಾನೀಯ ನೀಡಿದರು.

ಸುಪ್ರಭಾತ: ಜೆ.ಪಿ ನಗರದ ತಿರುಮಲಗಿರಿ ವೆಂಕಟೇಶ್ವರಸ್ವಾಮಿ ದೇವಾಲಯದಲ್ಲಿ ಎಂ.ಎಸ್. ಸುಬ್ಬುಲಕ್ಷ್ಮಿ ಅವರ ಮೊಮ್ಮಕ್ಕಳಾದ ಎಸ್. ಐಶ್ವರ್ಯ ಮತ್ತು ಎಸ್. ಸೌಂದರ್ಯ ಸಹೋದರಿಯರು ಸುಶ್ರಾವ್ಯವಾಗಿ ಸುಪ್ರಭಾತ ಗೀತೆಗಳನ್ನು ಹಾಡಿ ಭಕ್ತರನ್ನು ಭಾವಪರವಶರಾಗುವಂತೆ ಮಾಡಿದರು.

ದೇವಾಲಯದ ಆವರಣದಲ್ಲಿ ಎ2 ಕ್ಲಾಸಿಕಲ್ ಮ್ಯೂಸಿಕ್ ಸಂಸ್ಥೆಯ ಸಂಸ್ಥಾಪಕ ಪಿ. ಕೃಷ್ಣಪ್ರಸಾದ್ ಅವರ ಸಂಸ್ಥೆಯ ಮಾಲೀಕತ್ವದ ‘ವೆಂಕಟೇಶ್ವರ ಸುಬ್ರಹ್ಮಣ್ಯ” ಭಕ್ತಿ ಸಂಗೀತದ ಸಿಡಿಯನ್ನು ಈ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು.

ದಾಬಸ್‌ಪೇಟೆಯ ಸೋಂಪುರ ಹೋಬಳಿಯ ದೇವಾಲಯಗಳಲ್ಲಿ ಶನಿವಾರ ವಿಶೇಷ ಪೂಜಾ ಕೈಂಕರ್ಯಗಳು ನಡೆದವು.

ನಿಡವಂದದ ಲಕ್ಷ್ಮೀ ವೆಂಕಟೇಶ್ವರ, ಗೋವಿಂದಪುರದ ಕಲ್ಯಾಣ ವೆಂಕಟೇಶ್ವರ ಸ್ವಾಮಿ, ಇಮಚೇನಹಳ್ಳಿಯ ಸಿದ್ದೇಶ್ವರ-ವೆಂಕಟೇಶ್ವರ, ಕೆಂಗಲ್ ಗೊಲ್ಲರ ಹಟ್ಟಿಯ ಲಕ್ಷ್ಮೀ ವೆಂಕಟೇಶ್ವರ ಹಾಗೂ ನರಸೀಪುರ ತೋಪಿನ ಆತ್ಮಾರಾಮ ದೇವಾಲಯಗಳಲ್ಲಿ ದೇವರನ್ನು ಹೂ, ಹಣ್ಣು ಇತರ ವಸ್ತುಗಳಿಂದ, ದೇವಾಲಯವನ್ನು ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಲಾಗಿತ್ತು.

ಗೋವಿಂದಪುರದ ಕಲ್ಯಾಣ ವೆಂಕಟೇಶ್ವರ ಸ್ವಾಮಿ ಉತ್ಸವ ಮೂರ್ತಿಯನ್ನು ಡೊಳ್ಳು ಕುಣಿತ, ಮಂಗಳ ವಾದ್ಯ, ಕಂಸಾಳೆ ವೃತ್ತದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ಕೆ.ಆರ್. ಪುರದ ಎ.ನಾರಾಯಣಪುರದ ವೆಂಕಟೇಶ್ವರ ಸ್ವಾಮಿಯ ದೇವಾಲಯದಲ್ಲಿ ವೈಕುಂಠ ಏಕಾದಶಿ ಪ್ರಯುಕ್ತ ವಿಶೇಷ ಪೂಜಾ ಕೈಂಕರ್ಯಗಳು ಜರುಗಿದವು.

ರಾಜಾಜಿನಗರದ ಇಸ್ಕಾನ್ ದೇವಾಲಯದಲ್ಲಿ ಶನಿವಾರ ವೈಕುಂಠ ಏಕಾದಶಿ ಪ್ರಯುಕ್ತ ಭಕ್ತರು ದೇವರ ದರ್ಶನಕ್ಕಾಗಿ ಕಾಯುತ್ತಿದ್ದರು —ಪ್ರಜಾವಾಣಿ ಚಿತ್ರ

ವೈಕುಂಠ ಏಕಾದಶಿ ಪ್ರಯುಕ್ತ ವಸತಿ ಸಚಿವ ಜಮೀರ್ ಅಹಮದ್ ಖಾನ್ ಬೆಂಗಳೂರಿನ ಕೋಟೆ ವೆಂಕಟರಾಮಣ ದೇವಾಲಯದಲ್ಲಿ ಪೂಜೆ ಸಲ್ಲಿಸಿದರು

9 ವರ್ಷಗಳಿಂದ ಬಳಕೆಯಾಗದ ಪೀಣ್ಯದ ನಿಲ್ದಾಣ ಇನ್ನು 'ಕಾರ್ಗೊ ನಿಲ್ದಾಣ'

ಬಸ್ ನಿಲ್ದಾಣ ಕೊನೆಗೂ ಬಳಕೆ!

● ಬಾಲಕೃಷ್ಣ ಪಿ.ಎಚ್.

ಪೀಣ್ಯದ ಬಸವೇಶ್ವರ ಬಸ್ ನಿಲ್ದಾಣ

ಬೆಂಗಳೂರು: ಕೆಎಸ್ಆರ್‌ಟಿಸಿ ವತಿಯಿಂದ ಪೀಣ್ಯದಲ್ಲಿ 9 ವರ್ಷಗಳ ಹಿಂದೆ ನಿರ್ಮಾಣಗೊಂಡಿದ್ದ ಸುಸಜ್ಜಿತ ಬಸ್ ನಿಲ್ದಾಣ ಕೊನೆಗೂ ಬಳಕೆಯಾಗುವ ಕಾಲ ಸನ್ನಿಹಿತವಾಗಿದೆ. ಆದರೆ, ಬಸ್ ನಿಲ್ದಾಣದ ಬದಲು 'ಕಾರ್ಗೊ' ನಿಲ್ದಾಣವಾಗಿ ಉಪಯೋಗಕ್ಕೆ ಬರಲಿದೆ.

ಕೆಎಸ್ಆರ್‌ಟಿಸಿ 'ನಮ್ಮ ಕಾರ್ಗೊ ಟ್ರಕ್ ಸೇವೆ' ಯೋಜನೆಗೆ ಶನಿವಾರ ಚಾಲನೆ ನೀಡಿದೆ. ಬೆಂಗಳೂರಿನಿಂದ ಕಾರ್ಯಾಚರಣೆ ಮಾಡುವ ಟ್ರಕ್‌ಗಳಿಗೆ ಪೀಣ್ಯದ ಬಸವೇಶ್ವರ ನಿಲ್ದಾಣವನ್ನು ನಿಲುಗಡೆ ತಾಣವನ್ನಾಗಿ ಬಳಸಲು ಕೆಎಸ್ಆರ್‌ಟಿಸಿ ನಿರ್ಧರಿಸಿದೆ.

₹44 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡಿದ್ದ ನಿಲ್ದಾಣವನ್ನು 2014ರಲ್ಲಿ ಉದ್ಘಾಟಿಸಲಾಗಿತ್ತು. ಮೂರು ಅಂತಸ್ತಿನ ನಿಲ್ದಾಣದ ನೆಲ ಮಹಡಿಯ ಪ್ಲಾಟ್‌ಫಾರಂನಿಂದ ಉತ್ತರ ಕರ್ನಾಟಕ ಜಿಲ್ಲೆಗಳಿಗೆ, ಮೊದಲ ಮಹಡಿಯಲ್ಲಿ ದಕ್ಷಿಣ ಕರ್ನಾಟಕದ ಜಿಲ್ಲೆಗಳಿಗೆ ತೆರಳುವ ಬಸ್‌ಗಳಿಗೆ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿತ್ತು. ಎರಡನೇ ಮಹಡಿಯಲ್ಲಿ ವಸತಿಗೃಹ, ಹೋಟೆಲ್ ಹಾಗೂ ಅಂಗಡಿಗಳಿಗೆ ಮೀಸಲಾಗಿದ್ದವು. ಗಂಗಮ್ಮನಗುಡಿ ಹೊರ ಠಾಣೆ, ಸುಸಜ್ಜಿತ ಆಸನ ವ್ಯವಸ್ಥೆ, ಲಿಫ್ಟ್, ಕುಡಿಯುವ ನೀರು, ಶೌಚಾಲಯ, ಭದ್ರತೆ, ವೈಫೈ ಸೇರಿದಂತೆ ಎಲ್ಲ ಸೌಲಭ್ಯಗಳನ್ನು ಕಲ್ಪಿಸಲಾಗಿತ್ತು.

20ಕ್ಕೂ ಹೆಚ್ಚು ಜಿಲ್ಲೆಗಳಿಗೆ ಮೆಜೆಸ್ಟಿಕ್ ಬದಲು ಇಲ್ಲಿಂದಲೇ ಬಸ್ ಸಂಚರಿಸುವಂತೆ ಮಾಡಿ, ಜಿಲ್ಲೆಗಳಿಂದ ಬರುವ ಬಸ್‌ಗಳಿಗೆ ಇದೇ ಕೊನೇ ನಿಲ್ದಾಣವನ್ನಾಗಿ ಮಾಡಿ ನಗರದ ವಾಹನ ದಟ್ಟಣೆಯನ್ನು ಕಡಿಮೆ ಮಾಡಬೇಕು ಎಂಬುದು ಉದ್ದೇಶವಾಗಿತ್ತು. ಹೆದ್ದಾರಿಯಿಂದ 1 ಕಿ.ಮೀ. ಒಳಗೆ ಇರುವ ಈ ಬಸ್ ನಿಲ್ದಾಣದಿಂದ ಕೆಲವೇ ವಾರ ಬಸ್‌ಗಳು ಸಂಚರಿಸಿದ್ದವು. ಪ್ರಯಾಣಿಕರ ನೀರಸ ಸ್ಪಂದನೆ ಮತ್ತು ಖಾಸಗಿ ಬಸ್ ಮಾಲೀಕರ ಒತ್ತಡದಿಂದಾಗಿ ಬಳಿಕ ಸ್ಥಗಿತಗೊಂಡಿತ್ತು.

2018ರ ಏಪ್ರಿಲ್‌ನಲ್ಲಿ ಮತ್ತೆ ಬಸ್ ಸಂಚಾರ ಆರಂಭಿಸಲಾಗಿತ್ತು. ಆರಂಭಿಕ ಹಂತದಲ್ಲಿ 60 ಬಸ್‌ಗಳು ಬಸವೇಶ್ವರ ಬಸ್ ನಿಲ್ದಾಣದಿಂದ ಕಾರ್ಯಾಚರಣೆ ಶುರು ಮಾಡಿದ್ದವು. ಹಂತ ಹಂತವಾಗಿ ಹೆಚ್ಚಿಸಲಾಗುವುದು ಎಂದು ಕೆಎಸ್ಆರ್‌ಟಿಸಿ ಅಧಿಕಾರಿಗಳು ಹೇಳಿಕೊಂಡಿದ್ದರು. ಆದರೆ, ದೂರದ ಊರಿಗೆ ಪ್ರಯಾಣ ಬೆಳೆಸುವವರು ಮೆಜೆಸ್ಟಿಕ್‌ಗೆ ಬರುವುದನ್ನು ನಿಲ್ಲಿಸಲಿಲ್ಲ. ಪೀಣ್ಯ ಬಸ್ ನಿಲ್ದಾಣಕ್ಕೆ ತೆರಳಲಿಲ್ಲ. ಅಲ್ಲಿಂದ ಸಂಚರಿಸಿದ ಬಸ್‌ಗಳಲ್ಲಿ ಪ್ರಯಾಣಿಕರಿಲ್ಲದೆ ನಷ್ಟವಾಗಿ, 6 ತಿಂಗಳಲ್ಲಿ ಸಂಚಾರ ಸ್ಥಗಿತಗೊಳಿಸಿದ್ದವು. 2018ರ ಅಕ್ಟೋಬರ್ ನಂತರ ಯಾವುದೇ ಬಸ್‌ಗಳು ಬಸವೇಶ್ವರ ನಿಲ್ದಾಣದಿಂದ ಸಂಚರಿಸುತ್ತಿರಲಿಲ್ಲ.

'ಈ ಬಸ್ ನಿಲ್ದಾಣ ಬಳಕೆ ಯಾಗಿದ್ದರೆ ನಗರದೊಳಗೆ ವಾಹನದಟ್ಟಣೆ ಬಹಳಷ್ಟು ಕಡಿಮೆಯಾಗುತ್ತಿತ್ತು. ಬೆಳಗಾವಿ, ಹುಬ್ಬಳ್ಳಿ ಕಲಬುರಗಿ, ಬಳ್ಳಾರಿ, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು, ಮಂಗಳೂರು ಸೇರಿದಂತೆ 20ಕ್ಕೂ ಅಧಿಕ ಜಿಲ್ಲೆಗಳು, ತಿರುಪತಿ ಸೇರಿದಂತೆ ಬೇರೆ ರಾಜ್ಯಗಳ ಪ್ರಮುಖ ಪ್ರದೇಶಗಳಿಗೆ 2,200ಕ್ಕೂ ಅಧಿಕ ಬಸ್‌ಗಳು ಪ್ರತಿ ದಿನ ಸಂಚರಿಸುತ್ತವೆ. ಅವೆಲ್ಲ ಪೀಣ್ಯಕ್ಕೆ ಬಂದು, ಅಲ್ಲಿಂದಲೇ ವಾಪಸ್ ಆಗುತ್ತಿದ್ದವು. ಈಗ ಕಾರ್ಗೊ ಸೇವೆ ನೀಡುವ ಟ್ರಕ್‌ಗಳಿಗಾದರೂ ಬಳಕೆ ಮಾಡಲು ಉದ್ದೇಶಿಸಿರುವುದು ಉತ್ತಮ ನಿರ್ಧಾರ' ಎಂದು ಕೆಎಸ್ಆರ್‌ಟಿಸಿ ಅಧಿಕಾರಿಯೊಬ್ಬರು ತಿಳಿಸಿದರು.

'ಚಟುವಟಿಕೆ ಕಾಣಲು ಸಾಧ್ಯ'

ಪೀಣ್ಯದಲ್ಲಿ ಡಿಪೊ ಮಾಡುವ ಬದಲು ಬಸ್ ನಿಲ್ದಾಣ ಮಾಡಿದ್ದರಿಂದ ಸಮಸ್ಯೆಯಾಯಿತು. ಜಯನಗರ, ಎಲೆಕ್ಟ್ರಾನಿಕ್ ಸಿಟಿ ಸೇರಿದಂತೆ ನಗರದ ವಿವಿಧ ಭಾಗಗಳಿಂದ ಪೀಣ್ಯ ಬಸ್ ನಿಲ್ದಾಣಕ್ಕೆ ಹೋಗುವುದೇ ಸಮಸ್ಯೆಯಾಗಿತ್ತು. ಪ್ರಯಾಣಿಕರು ಮೆಜೆಸ್ಟಿಕ್ ಬಸ್ ನಿಲ್ದಾಣಕ್ಕೇ ಬರುತ್ತಿದ್ದರು. ಈಗ ಪೀಣ್ಯ ಬಸವೇಶ್ವರ ಬಸ್ ನಿಲ್ದಾಣವನ್ನು ಕಾರ್ಗೊ ಟ್ರಕ್ ನಿಲ್ದಾಣವಾಗಿ ಬಳಸಲು ನಿರ್ಧರಿಸಿದ್ದೇವೆ. ಈ ನಿಲ್ದಾಣದಲ್ಲಿ ಇನ್ನು ಚಟುವಟಿಕೆಗಳನ್ನು ಕಾಣಲು ಸಾಧ್ಯ ಎಂದು ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಲೋಕಸಭೆಗೆ ಸ್ಪರ್ಧೆ ಇಲ್ಲ: ರಾಮಲಿಂಗಾರೆಡ್ಡಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಲೋಕಸಭೆ ಚುನಾವಣೆಗೆ ನಾನು ಸ್ಪರ್ಧಿಸಲ್ಲ. ಸ್ಪರ್ಧಿಸುವಂತೆ ಹೈಕಮಾಂಡ್ ಕೂಡಾ ಸೂಚಿಸಿಲ್ಲ. ಯುವಕರು ಸ್ಪರ್ಧಿಸಲಿ ಎನ್ನುವುದು ನನ್ನ ಆಶಯ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಮಗಳು (ಸೌಮ್ಯಾ ರೆಡ್ಡಿ) ಕೂಡಾ ಸ್ಪರ್ಧಿಸುವ ಬಗ್ಗೆ ಯಾವುದೇ ತೀರ್ಮಾನ ಆಗಿಲ್ಲ. ಮುಂದೆ ಪಕ್ಷದ ವರಿಷ್ಠರು ಏನು ಹೇಳುತ್ತಾರೋ ನೋಡೋಣ' ಎಂದರು.

'ಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ಮತ ಎಣಿಕೆ ಸರಿಯಾಗಿ ಆಗಿಲ್ಲ. ಈ ವಿಚಾರ ಕೋರ್ಟ್‌ನಲ್ಲಿದೆ. ಮಗಳ ಪರವಾಗಿ ತೀರ್ಪು ಬರಬಹುದೆಂಬ ವಿಶ್ವಾಸವಿದೆ ಎಂದರು.

ಲೋಕಸಭಾ ಚುನಾವಣೆಯಲ್ಲಿ 20 ಸ್ಥಾನಗಳನ್ನು ಗೆಲ್ಲುವ ಗುರಿ ಹೊಂದಿದ್ದೇವೆ. ಅದಕ್ಕಿಂತಲೂ ಹೆಚ್ಚಿನ ಸ್ಥಾನಗಳಲ್ಲಿ ಗೆಲ್ಲಬಹುದು' ಎಂದೂ ಹೇಳಿದರು.

'ಮನೆ ನಿರ್ಮಿಸುವವರಿಗೆ ತಾತ್ಕಾಲಿಕ ವ್ಯವಸ್ಥೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಹಂಚಿಕೆಯಾಗಿರುವ ನಿವೇಶನ ದಾರರಿಗೆ ಅಗತ್ಯ ಸೌಲಭ್ಯ ಕಲ್ಪಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಬದ್ಧವಾಗಿದೆ' ಎಂದು ಪ್ರಾಧಿಕಾರದ ಎಂಜಿನಿಯರ್ ಸದಸ್ಯ ಶಾಂತ ರಾಜಣ್ಣ ತಿಳಿಸಿದ್ದಾರೆ.

'ಬಡಾವಣೆಯಲ್ಲಿ ಭೂಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟಿರುವ ಬಹುತೇಕ ಜಮೀನಿನ ಭೂಮಾಲೀಕರು ನ್ಯಾಯಾಲಯದಲ್ಲಿ ವಿವಿಧ ಕಾರಣಗಳಿಂದ ದಾವೆ ಹೂಡಿದ್ದು, ನ್ಯಾಯಾಲಯದಲ್ಲಿ ಪ್ರಾಧಿಕಾರದಿಂದ ವಕೀಲರನ್ನು ನೇಮಿಸಿ ಪರಿಣಾಮಕಾರಿ ವಾದ ಮಂಡಿಸಲಾಗಿದೆ. ನ್ಯಾಯಾಲಯದಲ್ಲಿ ಈ ಎಲ್ಲ ಪ್ರಕರಣಗಳ ತೀರ್ಪು ಕಾಯ್ದಿರಿಸಲಾಗಿದ್ದು, ಪ್ರಾಧಿಕಾರವು ತೊಡಕು ನಿವಾರಣೆಗೆ ಈಗಾಗಲೇ ಕಾರ್ಯಪ್ರವೃತ್ತವಾಗಿದೆ' ಎಂದು ಹೇಳಿದ್ದಾರೆ.

'ಭೂವ್ಯಾಜ್ಯದಿಂದ ಪ್ರಾಧಿಕಾರಕ್ಕೆ ಲಭ್ಯವಿದ್ದ ಪ್ರದೇಶದಲ್ಲಿ ರಚಿಸಿರುವ ಪ್ರದೇಶವು ಚದುರಿದ ಪ್ರದೇಶ ವಾಗಿದ್ದು, ಈ ಕಾರಣದಿಂದ ಅಳವಡಿಸಿರುವ ಕುಡಿಯುವ ನೀರಿನ ಕೊಳವೆ ಹಾಗೂ ಒಳ ಚರಂಡಿ ಮಾರ್ಗಗಳಲ್ಲಿ ನಿರಂತರತೆ ಕಾಯ್ದುಕೊಳ್ಳಲು ಸಾಧ್ಯ ವಾಗಿರುವುದಿಲ್ಲ.

ಈ ರೀತಿ ಕೊಳವೆ ಸಂಪರ್ಕದ ಜಾಲಗಳಲ್ಲಿ ನಿರಂತರತೆ ಕೊರತೆಯಿಂದ ಬಡಾವಣೆಯ ಕೆಲವು ಬ್ಲಾಕ್‌ಗಳಲ್ಲಿ ಒಳಚರಂಡಿ ವ್ಯವಸ್ಥೆಯಡಿ ಬರುವ ಕೊಳಚೆ ನೀರನ್ನು ಈಗಾಗಲೇ ನಿರ್ಮಿಸಲಾಗಿರುವ ಸಂಸ್ಕರಣಾ ಘಟಕಗಳಿಗೆ ಸಂಪರ್ಕಿಸಲು ಕಷ್ಟಸಾಧ್ಯ ವಾಗಿದೆ' ಎಂದಿದ್ದಾರೆ.

'ಲಭ್ಯ ಸಂಪನ್ಮೂಲ ಬಳಸಿಕೊಂಡು, ಪರ್ಯಾಯ ವ್ಯವಸ್ಥೆಯನ್ನು ತಾತ್ಕಾಲಿಕವಾಗಿ ಒದಗಿಸಲು ಪ್ರಾಧಿಕಾರವು ಬದ್ಧವಾಗಿದೆ. ಸಮಸ್ಯೆಯಿರುವ ಪ್ರದೇಶಗಳಲ್ಲಿ ಮನೆ ನಿರ್ಮಾಣ ಕೈಗೊಂಡಿರುವ ಸಾರ್ವಜನಿಕರು ಕೆಂಪೇಗೌಡ ಬಡಾವಣೆಯ ಕುಡಿಯುವ ನೀರು ಮತ್ತು ಒಳಚರಂಡಿ ವಿಭಾಗದ ಕಾರ್ಯಪಾಲಕ ಎಂಜಿನಿಯರ್‌ರನ್ನು ಸಂಪರ್ಕಿಸಿ ತಾತ್ಕಾಲಿಕ ವ್ಯವಸ್ಥೆ ಪಡೆಯಬಹುದು' ಎಂದು ಶಾಂತ ರಾಜಣ್ಣ ಕೋರಿದ್ದಾರೆ.

'ಬಡಾವಣೆಯಲ್ಲಿ ವಿದ್ಯುತ್ ಜಾಲಗಳಲ್ಲಿ ಭೂಗರ್ಭ ಕೇಬಲ್ ಅಳವಡಿಸಲಾಗಿದೆ. ಬಡಾವಣೆಯಲ್ಲಿ ಯಾವುದೇ ಅಪಾಯಕಾರಿ ವಿದ್ಯುತ್ ಮಾರ್ಗ ಇಲ್ಲ. ವಿದ್ಯುತ್ ಜಾಲಗಳ ನಿರ್ವಹಣೆಯನ್ನು ಬೆಸ್ಕಾಂ ನಿರ್ವಹಿಸುತ್ತಿದೆ' ಎಂದರು

ಭೂಗರ್ಭ ಕೇಬಲ್‌ಗಳಿಗೆ ವಿದ್ಯುತ್ ಜಾಲದ ನಿರಂತರತೆ ಸಮಸ್ಯೆಯಿಂದ ಬಡಾವಣೆಯ ಎಲ್ಲ ನಿವೇಶನಗಳಿಗೆ ಸಂಪರ್ಕ ಕಲ್ಪಿಸಲು ಸಾಧ್ಯವಾಗಿರುವುದಿಲ್ಲ. ಸದ್ಯ ಮನೆ ನಿರ್ಮಾಣಕ್ಕೆ ಮುಂದಾಗಿರುವವರು ವಿದ್ಯುತ್ ಸಂಪರ್ಕದ ಅಗತ್ಯವಿದ್ದರೆ, ಬಿಡಿಎ ಎಂಜಿನಿಯರ್‌ಗಳನ್ನು ಸಂಪರ್ಕಿಸಬಹುದು' ಎಂದು ತಿಳಿಸಿದ್ದಾರೆ.

'ಪ್ರಜಾವಾಣಿ'ಯಲ್ಲಿ ಡಿ.11ರಂದು ಪ್ರಕಟವಾಗಿದ್ದ 'ಬಿಡಿಎ ಎಂಜಿನಿಯರ್‌ಗಳ ವಿರುದ್ಧ ನಿವೇಶನದಾರರ ಆಕ್ರೋಶ' ವರದಿಗೆ ಶಾಂತ ರಾಜಣ್ಣ ಪ್ರತಿಕ್ರಿಯಿಸಿದ್ದಾರೆ.

ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ರಜತಮಹೋತ್ಸವ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ಇದೇ ಭಾನುವಾರ ಬೆಳಿಗ್ಗೆ 10.30ಕ್ಕೆ ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್‌ನಲ್ಲಿ ರಜತ ಮಹೋತ್ಸವ ಸಮಾರಂಭ ಹಮ್ಮಿಕೊಂಡಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬ್ಯಾಂಕ್ ಅಧ್ಯಕ್ಷ ಸದಾಶಿವರೆಡ್ಡಿ, 'ಸಮಾರಂಭವನ್ನು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಉದ್ಘಾಟಿಸುತ್ತಾರೆ. ಭಾರತೀಯ ರಿಸರ್ವ್ ಬ್ಯಾಂಕ್‌ನ ಬೆಂಗಳೂರು ವಿಭಾಗೀಯ ಕಚೇರಿಯ ಪ್ರಧಾನ ವ್ಯವಸ್ಥಾಪಕಿ ಮೀನಾಕ್ಷಿ ಗಾಡ್, ಬ್ಯಾಂಕಿನ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಎಂ. ವೆಂಕಟರೆಡ್ಡಿ ಹಾಗೂ ನಿವೃತ್ತ ಪೊಲೀಸ್ ಸೂಪರಿಂಟೆಂಡೆಂಟ್ ರಾಮಸುಬ್ಬ ಮುಖ್ಯ ಅತಿಥಿಗಳಾಗಿ ಭಾಗವಹಿಸುತ್ತಾರೆ. ಬ್ಯಾಂಕ್ ವರ್ಷದಿಂದ ವರ್ಷಕ್ಕೆ ಆರ್ಥಿಕ ಪ್ರಗತಿ ಕಾಣುತ್ತಿದ್ದು, 2022–23ನೇ ಸಾಲಿನಲ್ಲಿ ₹ 9.18 ಕೋಟಿ ನಿವ್ವಳ ಲಾಭಗಳಿಸಿದೆ' ಎಂದು ಹೇಳಿದರು.

'ಬ್ಯಾಂಕ್ ಕೇವಲ ಲಾಭಗಳಿಸುವುದಕ್ಕೆ ಮಾತ್ರ ಆದ್ಯತೆ ನೀಡದೆ, ಸಾಮಾಜಿಕ ಕಳಕಳಿಯನ್ನೂ ಇಟ್ಟುಕೊಂಡಿದೆ. 2009ರಲ್ಲಿ ನೆರೆ ಸಂತ್ರಸ್ತರಿಗೆ ₹ 2 ಲಕ್ಷ, 2020ರಲ್ಲಿ ಕೋವಿಡ್ ಪರಿಹಾರಕ್ಕೆ ₹ 5 ಲಕ್ಷ ದೇಣಿಗೆಯನ್ನು ಮುಖ್ಯಮಂತ್ರಿ ಪರಿಹಾರ ನಿಧಿಗೆ ನೀಡಿದೆ' ಎಂದು ತಿಳಿಸಿದರು.

ಕಾಣೆಯಾಗಿದ್ದಾರೆ

ವಯಸ್ಸು: 55, ಎತ್ತರ: 5', ಬೂದಿಬಣ್ಣ, ಸಾಧಾರಣ ಮೈಕಟ್ಟು. ಇವರು ಕಪ್ಪು ಬಣ್ಣದ ಅರ್ಧ ತೋಳಿನ ಶರ್ಟ್, ಕಂದು ಬಣ್ಣದ ಪ್ಯಾಂಟ್ ಧರಿಸಿದ್ದು ಕನ್ನಡ, ತೆಲುಗು ಹಾಗೂ ಹಿಂದಿ ಮಾತನಾಡುತ್ತಾರೆ.

ಗಂಗಾಧರ್

ದೊಡ್ಡಬಳ್ಳಾಪುರ ತಾ||., ಗೂಳ್ಯ ಗ್ರಾಮದಿಂದ ಕಾಣೆಯಾಗಿದ್ದಾರೆ. ಇವರ ಬಗ್ಗೆ ಮಾಹಿತಿ ಸಿಕ್ಕರೆ ಹತ್ತಿರದ ಪೊಲೀಸ್ ಠಾಣೆಗೆ ಅಥವಾ ಕೆಳಗಿನ ಮೊಬೈಲ್‌ಗೆ ಕರೆ ಮಾಡಿ:

8553666634 / 8861660196

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ

ಶ್ರೀ ಡಿ ಕೆ ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ರಸ್ತೆ ಸುರಕ್ಷತಾ ಅಭಿಯಾನ

- ಅಜಾಗರೂಕತೆಯಿಂದ ವಾಹನ ಚಲಾಯಿಸದಿರಿ
- ನಿಮ್ಮ ವಾಹನ ಚಾಲನೆ ಬೇರೆ ಚಾಲಕರಿಗೆ ಅಡ್ಡಿಯಾಗದಿರಲಿ
- ಅನಗತ್ಯವಾಗಿ ಓವರ್‌ಟೇಕ್ ಮಾಡದಿರಿ
- ಸಾರ್ವಜನಿಕ ರಸ್ತೆಗಳಲ್ಲಿ ಸಾಹಸ ಮಾಡಬೇಡಿ
- ದ್ವಿಚಕ್ರ ವಾಹನ ಚಲಾಯಿಸುವಾಗ ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ
- ನಾಲ್ಕು ಚಕ್ರದ ವಾಹನ ಚಲಾಯಿಸುವಾಗ ಕಡ್ಡಾಯವಾಗಿ ಸೀಟ್ ಬೆಲ್ಟ್ ಧರಿಸಿ
- ಚಾಲನೆಯಲ್ಲಿ ಮೊಬೈಲ್ ಮತ್ತು ಇಯರ್‌ಫೋನ್ ಬಳಸದಿರಿ

ಕರ್ನಾಟಕದಲ್ಲಿ ಪ್ರತಿ ದಿನ ಸರಾಸರಿ **109 ಅಪಘಾತಗಳು** ಮತ್ತು **32 ಸಾವುಗಳು** ಸಂಭವಿಸುತ್ತಿವೆ. ಅಂದರೆ ಪ್ರತಿ ಗಂಟೆಗೆ ಸುಮಾರು **4 ರಿಂದ 5 ಅಪಘಾತಗಳು** ಮತ್ತು **ಒಂದು ಸಾವು** ಸಂಭವಿಸುತ್ತಿದೆ.

#(2022, https:/ksp.karnataka.gov.in/storage/pdf-filed,road Accident_Report_2022.pdf)

ಮಾನ್ಯ ಸಾರಿಗೆ ಹಾಗೂ ಮುಜರಾಯಿ ಸಚಿವರಾದ **ಶ್ರೀ ರಾಮಲಿಂಗಾರೆಡ್ಡಿ** ರವರು ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುತ್ತಿರುವುದು

ನಿಮ್ಮ ವೇಗದ ಚಾಲನೆಯು ಒಂದು ಕುಟುಂಬದ ಭವಿಷ್ಯವನ್ನು ಶಾಶ್ವತವಾಗಿ ಕತ್ತಲಿಗೆ ತಳ್ಳಬಹುದು.

ರಸ್ತೆ ಅಪಘಾತದಲ್ಲಿ ಸಂಕಷ್ಟಕ್ಕೆ ಒಳಗಾದ ತುಮಕೂರು ಜಿಲ್ಲೆಯವರಾದ ಶ್ರೀ ಪುರುಷೋತ್ತಮ್ ಹಾಗೂ ಕುಟುಂಬದವರ ಚಿತ್ರ ಇದಾಗಿದ್ದು, ಬೆಂಗಳೂರಿನಲ್ಲಿ ಸಂದರ್ಶನಕ್ಕೆಂದು ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದಾಗ, ಅತೀ ವೇಗವಾಗಿ ಚಾಲನೆ ಮಾಡುತ್ತಾ ಬಂದ ವಾಹನವೊಂದು ಡಿಕ್ಕಿ ಹೊಡೆದುದ್ದರಿಂದ ಸಂಭವಿಸಿದ ಅಪಘಾತವು ಇಡೀ ಕುಟುಂಬವನ್ನು ಸಂಕಷ್ಟಕ್ಕೆ ಸಿಲುಕಿಸಿತು.

ನಿಧಾನವಾಗಿ ಚಾಲನೆ ಮಾಡಿ

ಚಾಲನೆ ಮಾಡುವಾಗ ವೇಗದ ಮಿತಿಯನ್ನು ಅನುಸರಿಸಿ

ರಸ್ತೆ ಅಪಘಾತ ಮುಕ್ತ ರಾಜ್ಯಕ್ಕಾಗಿ ಶ್ರಮಿಸೋಣ

ಸಾರ್ವಜನಿಕ ಆಸ್ತಿಯನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತಡೆಯುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯವಾಗಿದೆ.

ಡಾ. ಎನ್.ವಿ. ಪ್ರಸಾದ್ ಭಾ.ಆ.ಸೇ
ಕಾರ್ಯದರ್ಶಿಗಳು, ಸಾರಿಗೆ ಇಲಾಖೆ

ಎ.ಎಂ. ಯೋಗೀಶ್ ಭಾ.ಆ.ಸೇ
ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ

ಜೆ. ಪುರುಷೋತ್ತಮ್
ಅಪರ ಆಯುಕ್ತರು ಮತ್ತು ಸದಸ್ಯ ಕಾರ್ಯದರ್ಶಿ
ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ

ಶಾಲೆಗಳಲ್ಲಿ ಮಕ್ಕಳ ದಾಖಲಾತಿ

ವರ್ಷ	ಸರ್ಕಾರಿ	ಖಾಸಗಿ
2023-24	42,90,948	46,43,225
2022-23	45,45,432	45,13,902
2021-22	47,04,038	42,99,819
2020-21	43,87,974	44,37,669
2019-20	42,89,442	45,14,893

(ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಮಾಹಿತಿ)

ಸಂಪೂರ್ಣ ಮಾಹಿತಿ ಸಂಗ್ರಹಿಸಿ ಕ್ರಮ

ಸರ್ಕಾರಿ ಶಾಲೆಗಳಿಂದ ಹೊರಗುಳಿಯುವ ಮಕ್ಕಳು ಹಾಗೂ ಶೂನ್ಯ ದಾಖಲಾತಿ ಶಾಲೆಗಳಿರುವ ಪ್ರದೇಶದ ಸಂಪೂರ್ಣ ಮಾಹಿತಿ ಕಲೆ ಹಾಕಲಾಗುತ್ತಿದೆ. ಎಲ್ಲ ಕಡೆಯೂ ಅಂತಹ ಸಮಸ್ಯೆ ಇಲ್ಲ. ಮಲೆನಾಡು ಸೇರಿದಂತೆ ಮಕ್ಕಳ ಸಂಖ್ಯೆ ಕ್ಷೀಣಿಸುತ್ತಿರುವ ಭಾಗಗಳಲ್ಲಿ ಇರುವ ಸಮಸ್ಯೆಗಳನ್ನು ಪಟ್ಟಿ ಮಾಡಿ ಕ್ರಮ ಕೈಗೊಳ್ಳಲಾಗುವುದು. ಕೆಪಿಎಸ್ ಶಾಲೆಗಳ ಆರಂಭದ ನಂತರ ಆ ಭಾಗಗಳಲ್ಲಿ ಮಕ್ಕಳ ದಾಖಲಾತಿಯಲ್ಲಿ ಏರಿಕೆಯಾಗಿದೆ. ಹಾಗಾಗಿ, ಕೆಪಿಎಸ್ ಸಂಖ್ಯೆಇನ್ನಷ್ಟು ಹೆಚ್ಚಿಸಲಾಗುವುದು. ಶಾಲಾ ಸೌಕರ್ಯಗಳ ಹೆಚ್ಚಳ ಮಾಡಲಾಗುತ್ತಿದ್ದು, ಮುಂದಿನ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಶಲೆಗಳಲ್ಲಿ ಮಕ್ಕಳ ಸಂಖ್ಯೆಯಲ್ಲಿ ಏರಿಕೆಯಾಗುವ ನಿರೀಕ್ಷೆ ಇದೆ.

ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ

ಶೂನ್ಯ ದಾಖಲೆ ‘ಸಾಧನೆ’

ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕು ಮೋರಟಗಿಯ ಶತಮಾನ ಕಂಡ ಶಾಲೆಯಲ್ಲಿ ಶೂನ್ಯ ದಾಖಲಾತಿ ಹಿನ್ನೆಲೆಯಲ್ಲಿ ಬಾಗಿಲು ಮುಚ್ಚಲಾಗಿದೆ

ನಾವು ಕಲಿಯುತ್ತಿದ್ದಾಗ ಮಕ್ಕಳಿದ್ದರು. ಈಗ ಸ್ವಂತ ಕಟ್ಟಡವಿದ್ದರೂ ಪಾಳು ಬಿದ್ದಿದೆ. ಪಾಲಕರ ವಿಶ್ವಾಸ ಗಳಿಸುವಲ್ಲಿ ಶಿಕ್ಷಣ ಇಲಾಖೆ ವಿಫಲವಾಗಿದೆ.

ಈರಪ್ಪ ಕಾಡೇಶನವರ, ಹಳೆಯ ವಿದ್ಯಾರ್ಥಿ, ಸರ್ಕಾರಿ ಪ್ರಾಥಮಿಕ ಶಾಲೆ ನಂ–2, ಬೈಲಹೊಂಗಲ

ನಾವು ಇದೇ ಸರ್ಕಾರಿ ಶಾಲೆಯಲ್ಲಿ ಕಲಿತೆವು. ಈಗ ಮಕ್ಕಳಿಗೆ ಶ್ರದ್ದೆಯಿಂದ ಕಲಿಸುವ ಪ್ರಯತ್ನ ಕಡಿಮೆಯಾಗಿದೆ. ಶಾಲೆ ಬಿಕೋ ಎನ್ನುತ್ತಿದೆ.

ರಮೇಶ್, ಕಿರಿಸೊಡ್ಲು, ಹುಣಸೂರು ತಾಲ್ಲೂಕು

ಶಾಲೆಗಳನ್ನು ಮುಚ್ಚಬಾರದೆಂಬ ಉದ್ದೇಶದಿಂದ ಪಂಚಾಯಿತಿ ಮಟ್ಟದಲ್ಲಿ ಹೈಟೆಕ್ ಸರ್ಕಾರಿ ಶಾಲೆ ನಿರ್ಮಾಣಕ್ಕೆ ಮುಂದಾಗಿದ್ದೇವೆ.

ಎಚ್.ಎ. ಇಕ್ಬಾಲ್ ಹುಸೇನ್, ಶಾಸಕ, ರಾಮನಗರ

ಒಂದನೇ ಪುಟದಿಂದ...

ಈ ಶೈಕ್ಷಣಿಕ ವರ್ಷದಲ್ಲಿ ಮೂರೂವರೆ ಸಾವಿರಕ್ಕೂ ಹೆಚ್ಚು ಶಾಲೆಗಳಲ್ಲಿ ಹತ್ತಕ್ಕಿಂತ ಕಡಿಮೆ ಮಕ್ಕಳಿದ್ದಾರೆ.

ಇಂಥ ದುರ್ಗತಿ ಶಾಲೆಗಳಿಗೆ ಈ ವರ್ಷ ದಿಢೀರನೇ ಎದುರಾಗಿಲ್ಲ. ಮೂರ್ನಾಲ್ಕು ವರ್ಷಗಳಲ್ಲಿ ಈ ಬದಲಾವಣೆಯಾಗಿದೆ. ಒಂದರಿಂದ ಐದನೇ ತರಗತಿವರೆಗಿನ ಪ್ರಾಥಮಿಕ ಶಾಲೆಗಳಲ್ಲಿ ಒಂದನೇ ತರಗತಿಗೆ ಶೂನ್ಯ ದಾಖಲಾತಿ ಕಂಡು ಬರುವ ಮುಂಚೆ ಎರಡು ಮತ್ತು ಮೂರನೇ ತರಗತಿಯಲ್ಲಿ ಮಕ್ಕಳಿಲ್ಲದ ಪರಿಸ್ಥಿತಿ ಎದುರಾದ ವರ್ಷವೇ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಎಚ್ಚೆತ್ತುಕೊಳ್ಳಲಿಲ್ಲವೇಕೆ ಎಂಬ ಪ್ರಶ್ನೆಯೂ ಮೂಡುತ್ತದೆ.

ಕಾರಣಗಳು ಹಲವು: ‘ಸರ್ಕಾರಿ ಶಾಲೆಗಳ ಈ ದುಸ್ಥಿತಿಗೆ ನೀವು ಗುರುತಿಸಿರುವ ಕಾರಣಗಳೇನು’ ಎಂದು ಕೇಳಿದರೆ, ಮೈಸೂರು ಹಾಗೂ ಬೆಳಗಾವಿ ಭಾಗದ ಶಿಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ‘ಪೋಷಕರ ವಲಸೆಯಿಂದ ಮಕ್ಕಳು ನಗರ, ಪಟ್ಟಣ ಸೇರಿದ್ದಾರೆ. ಜೊತೆಗೆ ಕೆಲವು ಹಳ್ಳಿಗಳಲ್ಲಿ ಒಂದನೇ ತರಗತಿಗೆ ಸೇರುವ ವಯಸ್ಸಿನ ಮಕ್ಕಳೇ ಇಲ್ಲ’ ಎಂಬ ಕಾರಣವನ್ನು ನೀಡುತ್ತಾರೆ.

ಆದರೆ, ‘ಅಂಥ ವಲಸೆ ಹೋದ ಕುಟುಂಬಗಳೆಷ್ಟು’ ಎಂಬ ಬಗ್ಗೆ ಅವರ ಬಳಿ ನಿಖರ ಅಂಕಿ ಅಂಶಗಳಿಲ್ಲ. ಆ ಬಗ್ಗೆ ಸಮೀಕ್ಷೆಯಾಗಲೀ, ಪರಿಸ್ಥಿತಿಯ ಕುರಿತು ಸ್ಥಳೀಯ ಆಡಳಿತ ಸಂಸ್ಥೆಗಳೊಂದಿಗೆ ಚರ್ಚೆಗಳಾಗಲೀ ನಡೆದಿಲ್ಲ.

ಶಾಲಾ ಶಿಕ್ಷಣ ವ್ಯವಸ್ಥೆಯ ಭಾಗೀದಾರರಾದ ಪೋಷಕರು, ಶಿಕ್ಷಕರು, ಅಧಿಕಾರಿಗಳು, ಜನಪ್ರತಿನಿಧಿಗಳು, ಸ್ಥಳೀಯ ಆಡಳಿತ ಸಂಸ್ಥೆಗಳ ನಡುವೆ ಶೈಕ್ಷಣಿಕ ಸಂವಾದ ಸ್ಥಗಿತಗೊಂಡಿದೆ ಎಂಬುದಕ್ಕೂ ಇದು ಸಾಕ್ಷಿಯಂತೆ ಕಾಣುತ್ತಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳೊಂದಿಗೆ ಮಾತ್ರ ಇವರೆಲ್ಲರ ಬಾಂಧವ್ಯ ಗಟ್ಟಿಯಾಗಿದೆ ಎಂಬುದು, ಖಾಸಗಿ ಶಾಲೆಗಳಲ್ಲಿ ತುಂಬಿತುಳುಕುವ ಮಕ್ಕಳನ್ನು ನೋಡಿದರೆ ಗೊತ್ತಾಗುತ್ತದೆ.

‘ಮಕ್ಕಳಿಲ್ಲವೆಂದು ಶಾಲೆಯನ್ನು ತಾತ್ಕಾಲಿಕವಾಗಿ ಮುಚ್ಚಲಾಗಿದೆ ಅಷ್ಟೇ. ಶಿಕ್ಷಕರನ್ನು, ಸಿಬ್ಬಂದಿಯನ್ನು ಹತ್ತಿರದ ಶಾಲೆಗೆ ನಿಯೋಜಿಸಲಾಗಿದೆ. ಮಕ್ಕಳು ಬಂದರೆ ಖಂಡಿತಾ ಮತ್ತೆ ಶಾಲೆ ಆರಂಭಿಸಲಾಗುವುದು. ನಿಯಮಗಳ ಪ್ರಕಾರ, ಈ ಶಾಲೆಗಳನ್ನು 3 ವರ್ಷ ಹಾಗೆಯೇ ಉಳಿಸಿಕೊಳ್ಳಲಾಗುತ್ತದೆ. ಈ ಅವಧಿಯಲ್ಲಿ ಪೋಷಕರು ಮುಂದೆ ಬಂದರೆ ಶಾಲೆಗೆ ಮಕ್ಕಳನ್ನು ದಾಖಲಿಸುವ ಪ್ರಯತ್ನ ನಡೆಯುತ್ತದೆ’ ಎಂಬುದು ಅಧಿಕಾರಿಗಳ ನಿರುಮ್ಮಳ ನುಡಿ.

‘ಸರ್ಕಾರಿ ಶಾಲೆಗೆ ಮಕ್ಕಳು ಬೇಕಾಗಿದ್ದಾರೆ’ ಎಂದು ಅವರು ಕಾಯುತ್ತಿದ್ದಾರೆ. ಶಾಲೆ ಮುಚ್ಚಿರುವ ಯಾವ ಊರಿಗೇ ಹೋದರೂ ಇದೇ ಸನ್ನಿವೇಶ. ತಲೆಮಾರುಗಳಿಗೆ ಪಾಠ ಹೇಳಿದ ಶಾಲೆಗಳು ಮಾತ್ರ ಒಂಟಿಯಾಗಿ ನಿಂತಿವೆ. ಪಾಳು ಬಿದ್ದಿವೆ.

ಅಧಿಕಾರಿಗಳ ಈ ಮಾತುಗಳಿಗಿಂತ ಭಿನ್ನವಾಗಿ ಪೋಷಕರ ವಾದ ಗಮನ ಸೆಳೆಯುತ್ತದೆ. ‘ಸೌಕರ್ಯವಿರಲಿ, ಇಲ್ಲದಿರಲಿ, ನಮಗೆ ಸರ್ಕಾರಿ ಶಾಲೆ ಬೇಡ’ ಎನ್ನುವ ಹೊಸ ಕಾಲಮಾನದ ಸುಶಿಕ್ಷಿತ ಪೋಷಕರ ನಡುವೆ, ‘ಸೌಕರ್ಯವಿದ್ದಿದ್ದರೆ ಮಕ್ಕಳನ್ನು ಸರ್ಕಾರಿ ಶಾಲೆಗೇ ಸೇರಿಸುತ್ತಿದ್ದೆವು’ ಎನ್ನುವ ಜಾಣ ಪೋಷಕರೂ ಕಾಣುತ್ತಾರೆ. ತಾವು ಓದುವಾಗ ಮಕ್ಕಳಿಂದ ತುಂಬಿ ತುಳುಕುತ್ತಿದ್ದ ಶಾಲೆಗಳು ಈಗ ಕಣ್ಣುಮುಚ್ಚುತ್ತಿರುವ ಬಗ್ಗೆ ಹಲವರಲ್ಲಿ ದಟ್ಟ ವಿಷಾದವೂ ಇದೆ. ಅಸಹಾಯಕತೆಯೂ ಇದೆ.

ಡಿಸಿಎಂ ತವರಲ್ಲೂ ಶೂನ್ಯ ದಾಖಲೆ

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿನಿಧಿಸುವ ಕನಕಪುರ ತಾಲ್ಲೂಕಿನಲ್ಲಿ 13, ಮಾಗಡಿ 9, ರಾಮನಗರ ಮತ್ತು ಚನ್ನಪಟ್ಟಣದಲ್ಲಿ ತಲಾ 6 ಶಾಲೆಗಳಿಗೆ ಬೀಗ ಬಿದ್ದಿದೆ. ತಲಾ 3 ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳೂ ಬಂದ್ ಆಗಿವೆ. ಕೆಲವು ವರ್ಷಗಳಿಂದ ಬೆರಳೆಣಿಕೆಯ ದಾಖಲಾತಿ ಕಂಡು, ಕಡೆಗೆ ಶೂನ್ಯ ತಲುಪಿವೆ.

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕು ಕೇಂದ್ರದಿಂದ 8 ಕಿಮೀ ದೂರದಲ್ಲಿರುವ ಕಿರಿಸೊಡ್ಲು ಗ್ರಾಮದಲ್ಲಿ, ‘ಕಟ್ಟಡವಿದ್ದರೂ ಇಬ್ಬರು ಶಿಕ್ಷಕರ ನಡುವಿನ ಸಮನ್ವಯದ ಕೊರತೆ, ಅಶಿಸ್ತಿನ ಕಾರಣಕ್ಕೆ ಮಕ್ಕಳನ್ನು ಖಾಸಗಿ ಶಾಲೆಗೆ ಸೇರಿಸಿದೆವು’ ಎನ್ನುತ್ತಾರೆ ಪೋಷಕರು. ‘ನಮ್ಮ ದೂರುಗಳನ್ನು ಇಲಾಖೆ ಗಂಭೀರವಾಗಿ ಪರಿಗಣಿಸಲಿಲ್ಲ’ ಎಂದೂ ಆರೋಪಿಸುತ್ತಾರೆ.

‘2-3 ವರ್ಷದಿಂದ ಮೂರ್ನಾಲ್ಕು ಮಕ್ಕಳಷ್ಟೇ ಇದ್ದರು. ಈ ವರ್ಷ ಯಾರೂ ಇಲ್ಲ. ಕ್ಷೇತ್ರ ಶಿಕ್ಷಣಾಧಿಕಾರಿ ಬಂದು ‘ಶಾಲೆ ಉಳಿಸಿಕೊಳ್ಳಿ’ ಎಂದರು. ‘ನಾವು ಹೇಗೆ ಉಳಿಸಿಕೊಳ್ಳುವುದು’ ಎಂಬುದು ಅವರ ಪ್ರಶ್ನೆ.

ಇಂಗ್ಲಿಷ್ ಮಾಧ್ಯಮ ವ್ಯಾಮೋಹ: ಶಾಲೆ ಮುಚ್ಚಿರುವ ಊರುಗಳಲ್ಲಿ ಇಂಗ್ಲಿಷ್ ಮಾಧ್ಯಮ ಅನಿವಾರ್ಯವೆಂಬ ಒತ್ತಾಸೆ, ಸೌಕರ್ಯಗಳ ಕೊರತೆಯೇ ಮುಂದೆ ಬರುತ್ತವೆ. ಆಯಾ ಶಾಲೆಗಳಲ್ಲಿ ಕೊರತೆಗಳನ್ನು ನೀಗಿಸುವಲ್ಲಿ ಕೈಗೊಂಡ ಕ್ರಮಗಳೇನು ಎಂಬ ಬಗ್ಗೆಯೂ ಇಲಾಖೆಯಲ್ಲಿ ನಿಖರ ಮಾಹಿತಿಗಳಿಲ್ಲ.

ಆರಂಭದಲ್ಲೇ ಉಲ್ಲೇಖವಾದ ರಾಮನಗರದ್ದು ಏಕಶಿಕ್ಷಕ ಶಾಲೆ. ‘ನಮ್ಮೂರ ಶಾಲೆಯಲ್ಲಿ ಒಬ್ಬರೇ ಶಿಕ್ಷಕರಿದ್ದರು. ಅವರಿಗೋ ನೂರೆಂಟು ಜವಾಬ್ದಾರಿ. ಈಗಿನ ಖಾಸಗಿ ಶಾಲೆಯಲ್ಲಿ ವಿಷಯವಾರು ಶಿಕ್ಷಕರು, ಪಿ.ಟಿ ಮೇಷ್ಟ್ರು ಇದ್ದಾರೆ. ಸೌಕರ್ಯವಿದೆ. ಪ್ರತಿ ಮಗುವಿನ ಕಲಿಕಾ ಪ್ರಗತಿ ಪರಿಶೀಲನೆಗೆ ಪ್ರತ್ಯೇಕ ವ್ಯವಸ್ಥೆ ಇದೆ. ನಮ್ಮೂರ ಶಾಲೆಯಲ್ಲೇ ಇವೆಲ್ಲ ಇದ್ದಿದ್ದರೆ, ನಾವ್ಯಾಕೆ ಡೊನೇಶನ್ ಕೊಟ್ಟು ಪ್ರೈವೇಟ್ ಶಾಲೆಗೆ ಸೇರಿಸುತ್ತಿದ್ದೆವು’ –ಪೋಷಕರ ಈ ಪ್ರಶ್ನೆ, ಸರ್ಕಾರಿ ಶಾಲೆಯ ‘ನಲಿ–ಕಲಿ’ ಪರಿಕಲ್ಪನೆಯನ್ನೇ ಅಣಕ ಮಾಡುವಂತಿದೆ.

‘ಮಕ್ಕಳನ್ನು ಯಾವ ಶಾಲೆಗೆ ಸೇರಿಸಬೇಕೆಂದು ನಿರ್ಧರಿಸುವುದು ಪೋಷಕರ ಹಕ್ಕು. ಅದನ್ನು ಕಸಿದುಕೊಳ್ಳಲಾಗದು’ ಎಂದೂ ಕೆಲವು ಅಧಿಕಾರಿಗಳು ಹೇಳುತ್ತಾರೆ. ಆದರೆ, ‘ಆ ಹಕ್ಕು ಚಲಾವಣೆಗೆ ಕಾರಣವಾದ ಪ್ರಮುಖ ಅಂಶಗಳೆಲ್ಲವೂ ನೇರವಾಗಿ ತಮ್ಮ ಇಲಾಖೆಗೇ ಸೇರುತ್ತವೆ’ ಎಂದು ಹೇಳುವುದನ್ನು ಮರೆಯುತ್ತಾರೆ.

ಮಕ್ಕಳು ಬಾರದಿರಲು ಆಯಾ ಪ್ರದೇಶಕ್ಕೆ ವಿಶಿಷ್ಟವಾದ ಕಾರಣಗಳೂ ಇರುತ್ತವೆ ಎಂಬುದನ್ನು ಮರೆಯುವಂತಿಲ್ಲ. ಅಂಥ ಕಾರಣಗಳನ್ನು ಕೆಲವೆಡೆ ಪಟ್ಟಿ ಮಾಡಿದ್ದರೂ ಪರಿಹಾರ ಹುಡುಕುವ ಪ್ರಯತ್ನಗಳೂ ನಡೆದಿಲ್ಲ.

ಬೆಳಗಾವಿ ಮತ್ತು ಖಾನಾಪುರ ತಾಲ್ಲೂಕಿನ ಕೆಲವು ಶಾಲೆಗಳನ್ನು ಗಮನಿಸಿದರೆ ಈ ಅಂಶ ಸ್ಪಷ್ಟವಾಗುತ್ತದೆ. ‘ಕೆಲವು ಕಾಡಿನ ನಡುವೆ ಇವೆ. ಮಳೆಗಾಲದಲ್ಲಿ ಶಾಲೆಗೆ ಹೋಗಲು ದಾರಿಯೇ ಇಲ್ಲ. ಕೆಲವು ತೋಟದ ಶಾಲೆಗಳಿದ್ದು, ಅಲ್ಲಿಗೆ ಬಸ್ ಸೌಕರ್ಯವಿಲ್ಲ. ಅದೇ ಕಾರಣಕ್ಕೆ ಆ ಶಾಲೆಗಳಿಗೆ ಮಕ್ಕಳು ದಾಖಲಾಗಿಲ್ಲ’ ಎನ್ನುತ್ತಾರೆ ಚಿಕ್ಕೋಡಿ ಡಿಡಿಪಿಐ ಮೋಹನಕುಮಾರ್ ಹಂಚಾಟೆ. ವಿವಿಧ ಇಲಾಖೆಗಳ ಸಮನ್ವಯ ಸಾಧಿಸಿ ಈ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಿದರೆ, ನಿರಾಶೆ ಎದುರಾಗುತ್ತದೆ.

ಪರಿಹಾರವೇನು?: ಶೂನ್ಯ ದಾಖಲಾತಿಯ ಸಮಸ್ಯೆಗೆ ಪರಿಹಾರವೇನು? ಎಂದರೆ, ‘ಹಳ್ಳಿಗಳ ಬಲವರ್ಧನೆ’ ಎನ್ನುತ್ತಾರೆ ನಂಜನಗೂಡು ಕ್ಷೇತ್ರ ಶಿಕ್ಷಣಾಧಿಕಾರಿ ಶಿವಲಿಂಗಯ್ಯ. ‘ಪೋಷಕರು ಹಳ್ಳಿಗಳನ್ನು ಬಿಟ್ಟು ಹೋಗಬಾರದು. ಇಲ್ಲಿಯೇ ಅವರ ಬದುಕು ಹಸನಾಗಿರಬೇಕು. ಆಗ ಅವರು ಇಲ್ಲಿಯೇ ಉಳಿಯುತ್ತಾರೆ. ಮಕ್ಕಳೂ ಹಳ್ಳಿಯ ಶಾಲೆಯಲ್ಲೇ ಓದುತ್ತಾರೆ’ ಎಂಬುದು ಅವರ ಪ್ರತಿಪಾದನೆ.

ಸೌಕರ್ಯಗಳ ಕೊರತೆ

ಶಾಲೆಗಳಲ್ಲಿ ಕುಡಿಯುವ ನೀರು ಮತ್ತು ಶೌಚಾಲಯದಂಥ ಮೂಲಸೌಕರ್ಯಗಳ ಕೊರತೆಯ ಸಮಸ್ಯೆ ಇಂದಿಗೂ ನೀಗಿಲ್ಲ. ಪ್ರಸಕ್ತ ಶೈಕ್ಷಣಿಕ ವರ್ಷದ ಆರಂಭದಲ್ಲೇ ಹೈಕೋರ್ಟ್ ಈ ಬಗ್ಗೆ ಅಸಮಾಧಾನವನ್ನೂ ವ್ಯಕ್ತಪಡಿಸಿತ್ತು.

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ಕರೆ ತರುವ ಸಂಬಂಧ ಹೈಕೋರ್ಟ್ ದಾಖಲಿಸಿಕೊಂಡಿರುವ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆಯ ವೇಳೆ, ಕಳೆದ ಅಕ್ಟೋಬರ್‌ನಲ್ಲೂ ಈ ಅಸಮಾಧಾನ ಮತ್ತೆ ಪ್ರಕಟವಾಗಿತ್ತು.

ಕಲ್ಯಾಣ ಕರ್ನಾಟಕದ ವಿವಿಧ ಜಿಲ್ಲೆಗಳ ಸರ್ಕಾರಿ ಶಾಲೆಗಳಲ್ಲಿ ಅಗತ್ಯವಿರುವಷ್ಟು ಕೊಠಡಿ ನಿರ್ಮಾಣವೂ ನಡೆದಿಲ್ಲ. ಹಿಂದಿನ ಬಿಜೆಪಿ ಸರ್ಕಾರ ‘ವಿವೇಕ’ ಯೋಜನೆ ಅಡಿ ಕೊಠಡಿಗಳ ನಿರ್ಮಾಣಕ್ಕೆ ಮುಂದಾಗಿತ್ತು. ನಂತರ, ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಯೋಜನೆಯನ್ನು ಪಕ್ಕಕ್ಕೆ ಇಟ್ಟಿದ್ದು, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ನಿಧಿಯಡಿ ಕೊಠಡಿಗಳನ್ನು ನಿರ್ಮಿಸಲು ಪ್ರಸ್ತಾವ ಸಿದ್ಧಪಡಿಸಿದೆ. ಆದರೆ ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ.

‘ಪ್ರಾಥಮಿಕ ಹಂತದ ಕಲಿಯುವ ವ್ಯವಸ್ಥೆ, ಅಂದರೆ, ಸರ್ಕಾರಿ ಶಾಲೆಗಳ ಉಳಿವು, ಹಳ್ಳಿಯ ಬಲವರ್ಧನೆಯನ್ನು ಅವಲಂಬಿಸಿದೆ’ ಎಂಬ ಅವರ ಮಾತು, ‘ವಲಸೆಯನ್ನು ಆಧರಿಸಿದ ಬದುಕು ತಪ್ಪಬೇಕು. ಹಳ್ಳಿಯ ಶಾಲೆಯಲ್ಲೇ ಹೊಸ ಕಾಲ ಬಯಸುವ ಎಲ್ಲ ಕಲಿಕೆಗಳಿಗೂ ಅವಕಾಶವಿರಬೇಕು’ ಎಂದು ಪ್ರತಿಪಾದಿಸುತ್ತದೆ.

‘ಸದ್ಯ, ಆ ಕಲಿಕೆಯ ಮಾದರಿಗಳನ್ನು ಖಾಸಗಿ ಶಾಲೆಗಳು ಕೊಡುತ್ತಿವೆ’ ಎಂಬ ಜನಪ್ರಿಯ ಹೇಳಿಕೆಯನ್ನು ವಿಶ್ಲೇಷಿಸಿದರೆ, ಈ ಅಭಿಪ್ರಾಯ ಪೂರ್ಣ ಸತ್ಯವಲ್ಲ ಎನಿಸುತ್ತದೆ. ಏಕೆಂದರೆ, ಬಹುತೇಕ ಖಾಸಗಿ ಶಾಲೆಗಳಲ್ಲಿ ತರಬೇತಿ ಪಡೆಯದ, ಅನುಭವವಿಲ್ಲದ ಶಿಕ್ಷಕರೇ ಹೆಚ್ಚು. ಚೆನ್ನಾಗಿರುವಂತೆ ಕಂಡರೂ, ಅಲ್ಲಿಯೂ ಹುಳುಕುಗಳಿವೆ ಎಂಬ ದೂರು, ಅಸಮಾಧಾನ ಪೋಷಕರಲ್ಲಿವೆ ಎನ್ನುವುದು ಹಲವರನ್ನು ಮಾತನಾಡಿಸಿದಾಗ ಅರಿವಾಗುತ್ತದೆ.

‘ಸೌಲಭ್ಯಗಳ ಸದ್ಬಳಕೆ’ ಕುರಿತು ಮಾತನಾಡುವ ಸರ್ಕಾರವು ಅಗತ್ಯವಿದ್ದ ಕಡೆ ಮುಚ್ಚಿದ ಶಾಲೆಗಳನ್ನು ತೆರೆಯುವ ದಾರಿಗಳ ಕಡೆಗೆ ಹೆಚ್ಚು ಗಮನ ಕೊಡಬೇಕಾಗಿದೆ. ಶೂನ್ಯ ದಾಖಲಾತಿಯುಳ್ಳ ಶಾಲೆಯ ಪರಿಸ್ಥಿತಿಯನ್ನು ಪ್ರತ್ಯೇಕವಾಗಿಯೇ ಅಧ್ಯಯನ ಮಾಡಿ, ಸಮಸ್ಯೆಗಳನ್ನು ಕಂಡು ಹಿಡಿದು ಪರಿಹರಿಸುವ ಪ್ರಯತ್ನವೂ ಶುರುವಾಗಬೇಕಾಗಿದೆ. ಅದಕ್ಕಾಗಿ ಶಾಲಾ ಶಿಕ್ಷಣ ವ್ಯವಸ್ಥೆಯ ಎಲ್ಲ ಭಾಗೀದಾರರನ್ನೂ ಒಳಗು ಮಾಡಿಕೊಳ್ಳುವುದು ಅತ್ಯವಶ್ಯ. ಇಲ್ಲದಿದ್ದರೆ, ಸರ್ಕಾರಿ ಶಾಲೆಗಳೇ ಕಾಣೆಯಾಗುವ ಪರಿಸ್ಥಿತಿಗೆ ದಾರಿಗಳು ತೆರೆದುಕೊಳ್ಳುತ್ತವೆ.

ಪೂರಕ ಮಾಹಿತಿ: ಚಂದ್ರಹಾಸ ಹಿರೇಮಳಲಿ, ಓದೇಶ ಸಕಲೇಶಪುರ, ವಿಕ್ರಂ ಕಾಂತಿಕೆರೆ, ಸಂತೋಷ ಈ. ಚಿನಗುಡಿ, ಮನೋಜ್‌ಕುಮಾರ್ ಗುದ್ದಿ, ಬಸವರಾಜ ಸಂಪಳ್ಳಿ, ಜಿ.ಎಚ್.ವೆಂಕಟೇಶ್, ಜಿ.ಬಿ.ನಾಗರಾಜ್, ಅನಿತಾ ಎಚ್., ಶಿವಪ್ರಸಾದ್ ರೈ. ಎಚ್.ಎಸ್.ಸಚ್ಚಿತ್.

ಪಾಳುಬಿದ್ದ ಬೈಲಹೊಂಗಲ ಪಟ್ಟಣದ ಕನ್ನಡ ಗಂಡು ಮಕ್ಕಳ ಶಾಲೆ

ಮಕ್ಕಳಿಂದ ಸ್ವಚ್ಛತೆ ಮುಖ್ಯ ಶಿಕ್ಷಕಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂದ್ರಹಳ್ಳಿ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಶೌಚಾಲಯವನ್ನು ಮಕ್ಕಳಿಂದ ಸ್ವಚ್ಛಗೊಳಿಸಿದ್ದ ಆರೋಪದಡಿ ಶಾಲೆಯ ಮುಖ್ಯ ಶಿಕ್ಷಕಿ ಟಿ.ಲಕ್ಷ್ಮಿದೇವಮ್ಮ ಅವರನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಶಾಲೆಯ ಶೌಚಾಲಯವನ್ನು ಮಕ್ಕಳು ಸ್ವಚ್ಛಗೊಳಿಸಿದ್ದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಈ ಬಗ್ಗೆ ವಿಚಾರಣೆ ನಡೆಸಿದ್ದ ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಜಿ. ಆಂಜನಪ್ಪ, ಮುಖ್ಯ ಶಿಕ್ಷಕಿ ವಿರುದ್ಧ ಉಪ ನಿರ್ದೇಶಕರಿಗೆ ವರದಿ ನೀಡಿದ್ದರು. ನಂತರ, ಮುಖ್ಯ ಶಿಕ್ಷಕಿಯನ್ನು ಸೇವೆಯಿಂದ ಅಮಾನತು ಮಾಡಲಾಗಿತ್ತು.

ಘಟನೆಗೆ ಸಂಬಂಧಪಟ್ಟಂತೆ, ಮುಖ್ಯ ಶಿಕ್ಷಕಿ ಲಕ್ಷ್ಮಿದೇವಮ್ಮ ವಿರುದ್ಧ ಕೆ.ಜಿ. ಆಂಜನಪ್ಪ ಅವರು ಬ್ಯಾಡರಹಳ್ಳಿ ಠಾಣೆಗೆ ದೂರು ನೀಡಿದ್ದರು. ಬಾಲ ನ್ಯಾಯ ಕಾಯ್ದೆ ಹಾಗೂ ಮನುಷ್ಯರನ್ನು ಮಲ ಸ್ವಚ್ಛಗೊಳಿಸಲು ನಿಯೋಜಿಸಿಕೊಳ್ಳುವ ಹಾಗೂ ಪುನರ್ವಸತಿ ಕಾಯ್ದೆಯಡಿ ಎಫ್‌ಐಆರ್ ದಾಖಲಾಗಿತ್ತು.

‘ಪ್ರಕರಣ ದಾಖಲಾಗುತ್ತಿದ್ದಂತೆ ಮುಖ್ಯ ಶಿಕ್ಷಕಿಯನ್ನು ವಶಕ್ಕೆ ಪಡೆಯಲಾಗಿತ್ತು. ಶನಿವಾರ ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಮುಖ್ಯ ಶಿಕ್ಷಕಿ ಸೂಚನೆ ಮೇರೆಗೆ ಮಕ್ಕಳಿಬ್ಬರು ಶೌಚಾಲಯ ಸ್ವಚ್ಛಗೊಳಿಸಿದ್ದರು ಎಂಬುದಾಗಿ ಬಿಇಒ ದೂರಿನಲ್ಲಿ ತಿಳಿಸಿದ್ದಾರೆ. ಇಬ್ಬರು ಮಕ್ಕಳ ಪೈಕಿ, ಒಬ್ಬನ ಹೇಳಿಕೆ ಪಡೆದುಕೊಂಡಿದ್ದಾರೆ. ಪ್ರಕರಣಕ್ಕೆ ಸಂಬಂಧಪಟ್ಟಂತೆ ಪ್ರತಿಯೊಬ್ಬರನ್ನೂ ವಿಚಾರಣೆ ನಡೆಸಿ ಪುನಃ ಹೇಳಿಕೆ ಪಡೆಯಲಾಗುವುದು’ ಎಂದರು.

‘ಶಾಲೆ ಶಿಕ್ಷಕರ ಪಾತ್ರದ ಬಗ್ಗೆ ದೂರಿನಲ್ಲಿ ಉಲ್ಲೇಖವಿಲ್ಲ. ಮಕ್ಕಳು ನೀಡುವ ಹೇಳಿಕೆ ಆಧರಿಸಿ ಕ್ರಮ ಕೈಗೊಳ್ಳಲಾಗುವುದು. ಈ ಹಿಂದೆಯೂ ಮಕ್ಕಳು ಶೌಚಾಲಯ ಸ್ವಚ್ಛಗೊಳಿಸಿದ್ದ ಬಗ್ಗೆ ಮಾಹಿತಿ ಇದೆ. ಆ ಮಕ್ಕಳಿಂದಲೂ ಹೇಳಿಕೆ ಪಡೆಯಲಾಗುವುದು’ ಎಂದು ಹೇಳಿದರು.

ಅನುದಾನ ಹೆಚ್ಚಳ: ಬಿಡುಗಡೆ ವಿಳಂಬ

ಒಂದನೇ ಪುಟದಿಂದ

ಹಣ ಉಳಿಸಲಿದೆ ಉಚಿತ ನೀರು: ‘ನೀರು ಹಾಗೂ ವಿದ್ಯುತ್ ಉಚಿತ ಆದೇಶ ಹೊರಡಿಸಿರುವುದರಿಂದ ಶಾಲೆಗಳಿಗೆ ಹೊರೆ ಕಡಿಮೆಯಾಗಲಿದೆ. ಈಗ ನೀಡುತ್ತಿರುವ ಹಣವು ನೀರು ಹಾಗೂ ಸ್ವಚ್ಛತೆಗೆ ಬಳಕೆಯಾಗುತ್ತಿತ್ತು. ಅದರಲ್ಲಿ ದೊಡ್ಡಪಾಲು ಶುದ್ಧ ನೀರಿಗೆ ಖರ್ಚಾಗುತ್ತಿತ್ತು. ಈಗ ಆ ಹಣ ಉಳಿಯುವುದರಿಂದ ಶೌಚಾಲಯಗಳ ಸ್ವಚ್ಛತೆಗೆ ಬಳಸಿಕೊಳ್ಳಬಹುದು’ ಎನ್ನುತ್ತಾರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯೊಂದರ ಶಿಕ್ಷಕಿ.

ಸರ್ಕಾರವೇ ಅಪರಾಧಿ: ಎಚ್‌ಡಿಕೆ

ಸ್ವಚ್ಛತೆಯೂ ಸೇರಿ ಸರ್ಕಾರಿ ಶಾಲೆಗಳ ನಿರ್ವಹಣೆಗೆ ಸರಿಯಾಗಿ ಅನುದಾನವನ್ನು ಬಿಡುಗಡೆ ಮಾಡುತ್ತಿಲ್ಲ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ.ಕುಮಾರಸ್ವಾಮಿ ಆರೋಪಿಸಿದ್ದಾರೆ.

ಈ ಕುರಿತು ತಮ್ಮ ಎಕ್ಸ್ ಖಾತೆಯಲ್ಲಿ ಅವರು, ‘ಅಂದ್ರಹಳ್ಳಿ ಹಾಗೂ ಮಾಲೂರಿನ ಘಟನೆಗಳು ಆಘಾತ ಉಂಟು ಮಾಡಿವೆ. ನಮ್ಮ ವ್ಯವಸ್ಥೆ, ಮನಸ್ಸುಗಳು ಎಷ್ಟು ಮಲಿನವಾಗಿವೆ ಎನ್ನುವುದಕ್ಕೆ ಎರಡೂ ಘಟನೆಗಳು ಸಾಕ್ಷಿ. ಶಾಲೆಗಳಿಗೆ ಸರಿಯಾಗಿ ಹಣ ನೀಡದೇ, ಶಿಕ್ಷಕರು, ಪ್ರಾಂಶುಪಾಲರನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತಿದೆ. ಹಾಗೆ ನೋಡಿದರೆ ಎರಡೂ ಘಟನೆಗಳಲ್ಲಿ ಮುಖ್ಯಮಂತ್ರಿ ಹಾಗೂ ಶಿಕ್ಷಣ ಸಚಿವರು ಮೊದಲ ಅಪರಾಧಿ’ ಎಂದಿದ್ದಾರೆ.

ಮಕ್ಕಳ ಭವಿಷ್ಯ ರೂಪಿಸುವ ಶಿಕ್ಷಕರು ಸೂಕ್ಷ್ಮ ಮನಸ್ಸಿನಿಂದ ವರ್ತಿಸಬೇಕಿತ್ತು. ಮುಖ್ಯ ಶಿಕ್ಷಕರು, ಬೋಧಕರು, ಶಾಲಾ ಸಿಬ್ಬಂದಿ ಕೂಡ ಇಂಥ ಘಟನೆಗಳಿಗೆ ಅವಕಾಶ ಕೊಡಬಾರದು ಎಂದು ಕಿವಿಮಾತು ಹೇಳಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಸೆಲೆಬ್ರಿಟಿ PREMIERE
ಶ್ರಾವ್ಯಾ ರಾವ್
ನಟಿ

ಪ್ರಜಾವಾಣಿ ಜೊತೆ ಶ್ರಾವ್ಯಾ ರಾವ್
ಸಂಜೆ 5 ಗಂಟೆಗೆ
ಯುಟ್ಯೂಬ್‌ನಲ್ಲಿ:
ನ್ಯೂಸ್ ಎಕ್ಸ್‌ಪ್ರೆಸ್: ರಾತ್ರಿ 8ಕ್ಕೆ
ಪಾಡ್‌ಕಾಸ್ಟ್
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8 ಕ್ಕೆ

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 24-12-1998

● ಜಯಪ್ರಕಾಶ ನಾರಾಯಣ್‌ಗೆ ಭಾರತ ರತ್ನ

ನವದೆಹಲಿ ಡಿ.23 (ಪಿಟಿಐ)– ಲೋಕನಾಯಕ ಜಯಪ್ರಕಾಶ್ ನಾರಾಯಣ್ ಅವರಿಗೆ ದೇಶದ ಅತ್ಯುನ್ನತ ನಾಗರಿಕ ಪುರಸ್ಕಾರವಾದ ಭಾರತ ರತ್ನವನ್ನು ನೀಡಿ ಗೌರವಿಸಲಾಗಿದೆ.

ಈ ಬಗ್ಗೆ ಇಂದು ಅಧಿಕೃತ ಪ್ರಕಟಣೆ ಹೊರಡಿಸಲಾಗಿದೆ. ರಾಷ್ಟ್ರಪತಿ ಭವನದಲ್ಲೇ ಶೀಘ್ರ ಪುರಸ್ಕಾರ ಪ್ರದಾನ ಸಮಾರಂಭವೊಂದು ನಡೆಯಲಿದ್ದು, ರಾಷ್ಟ್ರಪತಿ ಕೆ.ಆರ್ ನಾರಾಯಣನ್ ಅವರು ಮರಣೋತ್ತರವಾಗಿ ಜಯಪ್ರಕಾಶ್ ನಾರಾಯಣ್ ಅವರಿಗೆ ಪುರಸ್ಕಾರ ನೀಡಿ ಗೌರವಿಸುವರು.

50 ವರ್ಷಗಳ ಹಿಂದೆ

ಸೋಮವಾರ, 24-12-1973

● ಕಚ್ಚಾ ಎಣ್ಣೆ ಬೆಲೆ ದ್ವಿಗುಣ: ಪರ್ಷಿಯಾ ಖಾರಿ ರಾಷ್ಟ್ರಗಳ ನಿರ್ಧಾರ

ಟೆಹರಾನ್, ಡಿ.23 – ಕಚ್ಚಾ ಎಣ್ಣೆ ಬೆಲೆಯನ್ನು ಒಂದಕ್ಕೆ ಎರಡರಷ್ಟು ಏರಿಸಲು ಪರ್ಷಿಯಾ ಖಾರಿ ತೈಲೋತ್ಪಾದಕ ರಾಷ್ಟ್ರಗಳು ನಿರ್ಧರಿಸಿವೆ ಎಂದು ಇರಾನಿನ ದೊರೆ ಮಹಮದ್ ರೆಣಪೆಹ್ಲವಿ ಇಂದು ಘೋಷಿಸಿದರು.

ಜನವರಿ 1ರಿಂದ ಈ ಹೊಸ ಬೆಲೆಗಳು ಜಾರಿಗೆ ಬರಲಿವೆ ಎಂದು ಹೇಳಿದ ದೊರೆ ಸ್ಥಳದಲ್ಲಿ ಬ್ಯಾರಲ್‌ಗೆ 5.11 ಡಾಲರುಗಳ ಬೆಲೆ ಇದ್ದಿದ್ದನ್ನು 11.60 ಡಾಲರುಗಳಿಗೆ ಏರಿಸಲು ಆರು ಎಣ್ಣೆ ಉತ್ಪಾದಕ ರಾಷ್ಟ್ರಗಳು ನಿರ್ಧರಿಸಿವೆ ಎಂದು ಸುದ್ದಿಗಾರರಿಗೆ ತಿಳಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಡಿಸೆಂಬರ್ 24, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ತ್ರಯೋದಶಿ ಗಂ. 29-56 ನಕ್ಷತ್ರ: ಕೃತ್ತಿಕಾ ಗಂ. 21-19 **ಯೋಗ:** ಸಿದ್ಧ ಗಂ 07-17 ನಂತರ ಸಾಧ್ಯಾ ಗಂ. 29-42 ಕರಣ: ಕೌಲವ ಗಂ. 18-08, ಧನು ಮಾಸದ 08 ನೇ ದಿನ,
ಮಳೆನಕ್ಷತ್ರ: ಮೂಲಾ 3, ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 06-53 ಸೂರ್ಯಾಸ್ತ : 06-06
ಮುಸ್ಲಿಂ ದಿನಾಂಕ : 10ಜುಮಾದುಸ್ಸಾನಿ
ದಿನ ವಿಶೇಷ : ಕ್ರಿಸ್‌ಮಸ್ ಹಿಂದಿನ ದಿನ, ಅದೃಷ್ಟ ಸಂಖ್ಯೆ : 4, 6

ಮೇಷ: ಸ್ನೇಹಿತರೊಂದಿಗಿನ ಕಳೆದುಕೊಂಡ ವಿಶ್ವಾಸವನ್ನು ಪುನಃ ಪಡೆದುಕೊಳ್ಳುವ ಅವಕಾಶವಿರಲಿದೆ. ಹಿರಿಯ ಅಧಿಕಾರಿಗಳಿಗೆ ಬೇಡಿಕೆಗಳನ್ನು ಸ್ಪಷ್ಟವಾಗಿ ತಿಳಿಸಿ. ಅಧ್ಯಯನಕ್ಕಾಗಿ ವಿದೇಶ ಪ್ರಯಾಣದ ಯೋಗವಿದೆ.

ವೃಷಭ: ಅತಿಯಾದ ಆಲಸ್ಯವು ನಿಮ್ಮ ಕೆಲಸಕ್ಕೆ ಅಡ್ಡಿಯನ್ನು ಮಾಡಲಿದೆ ಹಾಗೂ ಅದರ ಪರಿಣಾಮವಾಗಿ ಜನರ ಅಪಹಾಸ್ಯಕ್ಕೆ ಕಾರಣರಾಗುವಿರಿ. ಕ್ಯಾಟರಿಂಗ್ ನಡೆಸುವವರಿಗೆ ಬಿಡುವಿಲ್ಲದ ವಾತಾವರಣ ಎದುರಾಗುವುದು.

ಮಿಥುನ: ಸೋದರರು ನಿಮ್ಮ ಕೆಲಸದಲ್ಲಿ ದೈಹಿಕ ಹಾಗೂ ಆರ್ಥಿಕವಾಗಿ ಹೆಚ್ಚಿನ ನೆರವಿಗೆ ಬರಲಿದ್ದಾರೆ. ಸಾಹಸ ಕೃತ್ಯಗಳನ್ನು ಕೈಗೊಳ್ಳುವ ನಿಮ್ಮ ಮನೋಭಿಲಾಷೆ ಇಂದು ನಿಮ್ಮನ್ನು ಕಾಡಲಿದ್ದು ಅದಕ್ಕೆ ಪ್ರಯತ್ನಿಸುವಿರಿ.

ಕರ್ಕಾಟಕ: ವಿವಾದಾಸ್ಪದ ವಿಷಯಗಳ ಕಡೆ ಗಮನ ಕೊಡದೆ ನಿಮ್ಮ ಕೆಲಸಗಳನ್ನು ಮಾಡಿಕೊಂಡಲ್ಲಿ ಲಾಭ ದೊರಕುವುದು. ಮನೆಯ ನವೀಕರಣಗೊಳಿಸಲು ಮುಂದಾದ ವ್ಯಕ್ತಿಗಳು ವಾಸ್ತುಶಾಸ್ತ್ರದ ಬಗ್ಗೆ ಗಮನಹರಿಸಿ.

ಸಿಂಹ: ಕೆಲವೊಂದು ವಿಷಯಗಳನ್ನು ಹಾಗೂ ಅದರಿಂದಾಗುವ ಲಾಭ ನಷ್ಟಗಳ ಬಗ್ಗೆ ಪುನರವಲೋಕನವನ್ನು ಮಾಡುವುದು ಉತ್ತಮ. ತುರ್ತು ಕೆಲಸವಾದರೂ ಅವಸರವನ್ನು ಮಾಡಿಕೊಳ್ಳದೇ ಆಲೋಚಿಸಿ ಕೆಲಸವನ್ನು ನಿರ್ವಹಿಸಿ.

ಕನ್ಯಾ: ವಸ್ತ್ರಗಳ ಖರೀದಿಯಲ್ಲಿ ವಿಶೇಷ ರಿಯಾಯಿತಿ ಮಾರಾಟಗಳಿಂದ ಹೆಚ್ಚಿನ ಲಾಭ ಪಡೆಯುವಿರಿ. ಸಂಶೋಧನಾ ಕ್ಷೇತ್ರದಲ್ಲಿ ಹೆಚ್ಚಿನ ಪ್ರಗತಿ ಸಾಧಿಸುವಿರಿ. ನಿಮ್ಮ ಮನದ ಇಚ್ಛೆ ಈಡೇರಲು ಲಕ್ಷ್ಮೀರಮಣನನ್ನು ಆರಾಧಿಸಿ.

ತುಲಾ: ನಿಮ್ಮ ಮಾತುಗಳಿಗೆ ವಿರುದ್ಧವಾದ ಮಾತನ್ನು ನಿಮ್ಮ ಮಕ್ಕಳಿಂದ ಕೇಳಬಹುದು. ನ್ಯಾಯಾಲಯದ ಕೆಲಸಗಳಲ್ಲಿ ಮುನ್ನಡೆಗಾಗಿ ಓಡಾಟ ನಡೆಸಬೇಕಾಗುತ್ತದೆ. ಖರ್ಚಿನ ವಿಚಾರದಲ್ಲಿ ಎಚ್ಚರ ವಹಿಸುವುದು ಉತ್ತಮ.

ವೃಶ್ಚಿಕ: ಜಮೀನಿನ ತಕರಾರು ವಿಷಯಗಳು ಇತ್ಯರ್ಥಗೊಳ್ಳುವುದು. ಕೆಲಸವು ಮೊದಲ ಪ್ರಯತ್ನದಲ್ಲೇ ಸಫಲವಾಗಿದ್ದರಿಂದ ಉತ್ಸಾಹ ಗರಿಗೆದರಲಿದೆ. ನಾಯಕತ್ವ ಹೊಂದಿರುವ ನಿಮಗೆ ಜನಬಲ ಕಡಿಮೆಯಾಗಲಿದೆ.

ಧನು: ಹೊಸ ಆಕಾಂಕ್ಷೆಗಳನ್ನು ಹಾಗೂ ಜೀವನದ ಗುರಿಗಳನ್ನು ಚೆನ್ನಾಗಿ ಅರಿತುಕೊಂಡು ಬದುಕಿನಲ್ಲಿ ನಿಮ್ಮ ಮುಂದಿನ ಹೆಜ್ಜೆ ಇಡುವುದು ಉತ್ತಮ. ನಿಮ್ಮ ಮಕ್ಕಳ ನಡವಳಿಕೆಯಿಂದ ನಿಮ್ಮ ಗೌರವಕ್ಕೆ ಧಕ್ಕೆ ಉಂಟಾಗಬಹುದು.

ಮಕರ: ಉದಾಸೀನತೆಯನ್ನು ದೂರ ಮಾಡುವುದರಿಂದ ಹೆಚ್ಚಿನ ಯಶಸ್ಸನ್ನು ಪಡೆಯಬಹುದು. ಅನಾರೋಗ್ಯದ ಪರಿಸ್ಥಿತಿಯಲ್ಲಿ ಸ್ವಂತ ನಿರ್ಧಾರದಿಂದ ಔಷಧಿಯನ್ನು ತೆಗೆದುಕೊಳ್ಳಬೇಡಿ. ಅಡ್ಡ ಪರಿಣಾಮ ಬೀರುವ ಸಾಧ್ಯತೆಗಳಿದೆ.

ಕುಂಭ: ಮನೆಯವರ ವಿಚಾರದಲ್ಲಿ ದೃಢ ನಿಲುವು ತಾಳಬೇಕಾಗುವುದು. ಅರ್ಥಪೂರ್ಣ ಮಾತುಕತೆಗಳಿಂದ ವೈವಾಹಿಕ ಸಮಸ್ಯೆಗಳಿಗೆ ಪರಿಹಾರ ಪಡೆಯುವಿರಿ. ಹಣದ ವಿಚಾರದಲ್ಲಿ ಮಿತವ್ಯಯಿಗಳಾಗಿರಿ.

ಮೀನ: ಕೆಲಸ ಆರಂಭಿಸುವ ಮುನ್ನ ಆಮೂಲಾಗ್ರ ಚಿಂತನೆ ಅಗತ್ಯ ಎಂಬುದು ತಿಳಿಯಲಿದೆ. ಯುವ ಕಲಾವಿದರಿಗೆ ಪ್ರೋತ್ಸಾಹ ಅವಕಾಶಗಳು ಲಭಿಸುವುದು. ಗೋ ಸೇವೆಯಿಂದ ನೆಮ್ಮದಿ ಸಂಪಾದಿಸಬಹುದು.

ಪದಬಂಧ 5539

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಗುಟ್ಟಾದ ಬಾಗಿಲು (4)
3.ಒಂದು ಸಲ ಕುಡಿಯುವಷ್ಟು ದ್ರವ (3)
5.ಕರುವಿಗೆ ತೋರಿದ ಅನುಕಂಪ (3)
7.ಉಯ್ಯಾಲೆ ಮೇಲಿರಿಸಿದ ಮೃತ್ಯುಪತ್ರ (3)
8.ಸಮಯವನ್ನು ವ್ಯರ್ಥವಾಗಿ ಕಳೆಯುವುದು (5)
11.ನೆಲವನ್ನು ಗೋಮಯದಿಂದ ಸಾರಿಸುವಿಕೆ (3)
12.ಓಬವ್ವನ ಆಯುಧ (3)
15.ಆದರ ತೋರಿದಾಗ ಈ ಸಲಿಗೆ (3)
16.ಹುಡುಕುವವನು ಇಲ್ಲಿದ್ದಾನೆ (4)

ಮೇಲಿಂದ ಕೆಳಕ್ಕೆ
1.ಗುಲಾಬಿ ಹಿಡಿದಿರುವ ಸೇವಕ (3)
2.ಮನೋರಥದಲ್ಲಿ ಕಾಣಿಸಿದ ತೇರು (2)
3.ಗೂರಲು ಇದ್ದವ ಎರಚಿದ ಕೆಂಪು ಬಣ್ಣ (3)
4.ಕೂಸಿನ ತಲೆಗೆ ಕಟ್ಟುವ ಟೋಪಿ (3)
6.ಕಾಯ ಬಗ್ಗಿಸಿ ಮಾಡಿದ್ದು ಉಲ್ಟಾ ಕೆಲಸ ! (3)
7.ದಾಹವಿದ್ದಾಗ ಎತ್ತಿ ಹೇಳಿದ ನುಡಿ! (5)
9.ಒಡೆಯನು ನೀಡಿದ ಡಾಬು ತಿರುವುಮುರುವಾಗಿದೆ (3)
10.ಪ್ರಯಾಸದಿಂದ ಕೈಗೊಂಡಿರುವ ಸಂಚಾರ (3)
11.ಈತ ಓದು ಬರಹ ಬಲ್ಲವನು (3)
13.ಕೇಡನ್ನು ಉಂಟುಮಾಡುವವ (3)
14.ಮಾವನ ಹೆಂಡತಿಯಿಲ್ಲಿ ತಿರುಗಿದ್ದಾಳೆ (2)



5538ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಹಣಾಹಣಿ 3.ಉಯ್ಯಾಲೆ
4.ಲಂಗೋಟಿ 6.ದಂಡನೆ
8.ಪರಿತಾಪ 10.ನಗುಮುಖ
12.ತಿರುಪು 14.ಸಂಪುಟ
15.ಉರಗ
16.ಅಂತರ್ಯಾಮಿ

ಮೇಲಿಂದ ಕೆಳಕ್ಕೆ:
1.ಬಲೆ 2.ಹಳವಂಡ
3.ಉಪದ್ವ್ಯಾಪ 5.ಗೋದಾಮು
6.ದಂಪತಿ 7.ನೆನಪು
9.ರಿಕಾಪು 11.ಖಡ್ಗಮೃಗ
13.ರುದ್ರಭೂಮಿ 15.ಉಕಿ

ಸುಡೊಕು 5924

				5		7		2
		3	6		7			
8	5	7		3		6		9
	6			1		8		7
7		9	5				1	
	8			9		3		5
	7		3		1			
5				2			7	3
	3		9		5		6	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5923 ಸುಡೊಕು

5	6	1	8	7	4	2	9	3
3	7	2	6	1	9	8	5	4
9	8	4	5	2	3	1	6	7
1	2	5	7	3	6	4	8	9
4	3	8	2	9	5	6	7	1
6	9	7	4	8	1	3	2	5
8	1	9	3	5	2	7	4	6
7	4	3	9	6	8	5	1	2
2	5	6	1	4	7	9	3	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

24ನೇ ವೀರಶೈವ–ಲಿಂಗಾಯತ ಮಹಾ ಅಧಿವೇಶನದಲ್ಲಿ ಒಕ್ಕೊರಲ ಆಗ್ರಹ

ಹೊಸದಾಗಿ ಜಾತಿಗಣತಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ವೈಜ್ಞಾನಿಕ ಹಾಗೂ ವಾಸ್ತವದ ನೆಲೆಗಟ್ಟಿನಲ್ಲಿ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯನ್ನು (ಜಾತಿ ಗಣತಿ) ಪುನಃ ಮಾಡಬೇಕು. ವೀರಶೈವ–ಲಿಂಗಾಯತ ಸಮುದಾಯದ ಎಲ್ಲಾ ಒಳಪಂಗಡಗಳನ್ನು ಕೇಂದ್ರದ ಒಬಿಸಿ ಪಟ್ಟಿಗೆ ಸೇರಿಸಬೇಕು...'

ಇಲ್ಲಿ ಶನಿವಾರ ಶುರುವಾದ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾದ 24ನೇ ಮಹಾ ಅಧಿವೇಶನದಲ್ಲಿ ಕೇಳಿಬಂದ ಒಕ್ಕೊರಲ ಆಗ್ರಹವಿದು.

'ವೀರಶೈವ–ಲಿಂಗಾಯತ ಸಮುದಾಯದಲ್ಲಿ 90ರಿಂದ 100 ಒಳಪಂಗಡಗಳಿವೆ. ವಾಸ್ತವಾಂಶದ ಆಧಾರದಲ್ಲಿ ಹೊಸದಾಗಿ ಜಾತಿ ಗಣತಿ ನಡೆಸಬೇಕು ಎಂಬುದು ನಮ್ಮ ಬೇಡಿಕೆ. ಇದಕ್ಕೆ ಸಮುದಾಯದ ಎಲ್ಲಾ ಶಾಸಕರು ಪಕ್ಷಾತೀತವಾಗಿ ಸಮ್ಮತಿ ಸೂಚಿಸಿದ್ದಾರೆ. ನಾವು ಯಾರ ಹಕ್ಕನ್ನೂ ಕಸಿಯುತ್ತಿಲ್ಲ' ಎಂದು ಮಹಾಸಭಾದ ಕಾರ್ಯದರ್ಶಿಯೂ ಆಗಿರುವ ಸಚಿವ ಈಶ್ವರ ಖಂಡ್ರೆ ಹೇಳಿದರು.

'ರಾಜ್ಯದ ಒಬಿಸಿ ಪಟ್ಟಿಯಲ್ಲಿ ವೀರಶೈವ ಲಿಂಗಾಯತರಿಗೆ ಶೇ 5ರಷ್ಟು ಮೀಸಲಾತಿ ಇದೆ. ಸಮುದಾಯದ ಎಲ್ಲಾ ಒಳಪಂಗಡಗಳನ್ನು ಕೇಂದ್ರದ ಒಬಿಸಿ ಪಟ್ಟಿಗೆ ಸೇರಿಸಬೇಕು. ರಾಜ್ಯ ಸರ್ಕಾರ ಈ ಸಂಬಂಧ ಕೇಂದ್ರಕ್ಕೆ ಶಿಫಾರಸು ಮಾಡಬೇಕು' ಎಂದು ಒತ್ತಾಯಿಸಿದರು.

'ಸಮಾಜ ಅಭಿವೃದ್ಧಿ ಹೊಂದಿದ್ದರೂ, ಅನೇಕ ಜ್ವಲಂತ ಸಮಸ್ಯೆಗಳನ್ನು ಎದುರಿಸುತ್ತಿದೆ. ಮೊದಲ ಬಾರಿಗೆ ಜಾತಿ ಗಣತಿಯ ಪರವಾಗಿ ಧ್ವನಿ ಎತ್ತಿದ್ದೇ ವೀರಶೈವ ಮಹಾಸಭಾ. ಜಾತಿ ಗಣತಿ ವೈಜ್ಞಾನಿಕ ನೆಲೆಗಟ್ಟಿನಲ್ಲಿ ನಡೆಯಬೇಕು. ಈ ಕಾರಣಕ್ಕಾಗಿಯೇ ಹೊಸದಾಗಿ ಜಾತಿ ಗಣತಿ ನಡೆಸುವಂತೆ ಆಗ್ರಹಿಸುತ್ತಿದ್ದೇವೆ. ಇದಕ್ಕೆ ವಿಶೇಷ ಅರ್ಥ ಕಲ್ಪಿಸುವುದು ಬೇಡ' ಎಂದು ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

'ಒಳಪಂಗಡಗಳ ಆಧಾರದಲ್ಲಿ ಮೀಸಲಾತಿ ನೀಡುತ್ತಾ ಹೋದರೆ ಸಮಾಜವನ್ನು ಒಡೆದಂತಾಗುತ್ತದೆ. ಎಲ್ಲಾ ಒಳಪಂಗಡಗಳನ್ನು ಒಟ್ಟುಗೂಡಿಸಿ ಮೀಸಲಾತಿ ಒದಗಿಸುವುದರಿಂದ ನಾವೆಲ್ಲಾ ಒಂದೇ ಎಂಬ ಭಾವನೆ ಒಡಮೂಡುತ್ತದೆ. ರಾಜ್ಯದ 16 ಒಳಪಂಗಡಗಳು ಕೇಂದ್ರದ ಒಬಿಸಿ ಮೀಸಲಾತಿ ಪಟ್ಟಿಯಲ್ಲಿ ಸ್ಥಾನ ಹೊಂದಿವೆ. ಇತರ ಒಳಪಂಗಡಗಳನ್ನೂ ಆ ಪಟ್ಟಿಗೆ ಸೇರ್ಪಡೆ ಮಾಡಬೇಕು' ಎಂದು ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಆಗ್ರಹಿಸಿದರು.

'ಸಮುದಾಯದವರ ಜನಸಂಖ್ಯೆ ಕುಸಿಯುತ್ತಿದೆ ಎಂಬ ಮಾತು ಕೇಳಿ ಬರುತ್ತಿದೆ. ಮಿತ ಸಂತಾನ ಇದಕ್ಕೆ ಕಾರಣವಲ್ಲ. ಮಹಾಸಭಾದವರು ಆನ್‌ಲೈನ್ ಮೂಲಕ ಸಮುದಾಯದ ಜನ ಗಣತಿ ನಡೆಸಿ ಸರ್ಕಾರಕ್ಕೆ ಸಲ್ಲಿಸಲಿ' ಎಂದು ಸಿರಿಗೆರೆ ಬೃಹನ್ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ವ್ಯಕ್ತಿ ನಿಂದನೆಗೂ ಪ್ರಕರಣ ದಾಖಲಿಸುವಂತಾಗಲಿ: 'ಜಾತಿ ನಿಂದನೆ ಹಾಗೆ ವ್ಯಕ್ತಿ ನಿಂದನೆ ಮಾಡುವವರ ವಿರುದ್ಧವೂ ಪ್ರಕರಣ ದಾಖಲಿಸುವಂತಾಗಬೇಕು. ಇದಕ್ಕಾಗಿ ಕಾನೂನಿನಲ್ಲಿ ಮಾರ್ಪಾಡು ಮಾಡಬೇಕು' ಎಂದು ಸ್ವಾಮೀಜಿ ಸಲಹೆ ನೀಡಿದರು.

'856' ನಮ್ಮೆಲ್ಲರ ಕೋಡ್ ಆಗಲಿ: 'ಪ್ರತಿಯೊಂದು ಧರ್ಮಕ್ಕೂ ಒಂದೊಂದು ಕೋಡ್ ಇದೆ. ವೀರಶೈವ ಲಿಂಗಾಯತರು 856 ಸಂಖ್ಯೆಯನ್ನು ಕೋಡ್ ಆಗಿ ಬಳಸಬೇಕು. '8' ಅಷ್ಟಾವರಣಗಳನ್ನು, '5' ಪಂಚಾಚಾರ್ಯರನ್ನು ಹಾಗೂ '6' ಷಟ್‌ಸ್ಥಳಗಳನ್ನು ಸೂಚಿಸುತ್ತದೆ. ಇವು ನಮ್ಮ ಮೂಲತತ್ವಗಳಾಗಿವೆ' ಎಂದು ಶ್ರೀಶೈಲದ ಚನ್ನಸಿದ್ದರಾಮ ಪಂಡಿತಾರಾಧ್ಯ ಸ್ವಾಮೀಜಿ ಹೇಳಿದರು.

ದಾವಣಗೆರೆಯಲ್ಲಿ ಶನಿವಾರ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾದ 24ನೇ ಮಹಾ ಅಧಿವೇಶನಕ್ಕೆ ಚಾಲನೆ ನೀಡಲಾಯಿತು. (ಎಡದಿಂದ) ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷ ದೇವರಮನೆ ಶಿವಕುಮಾರ್, ಸಚಿವ ಮಲ್ಲಿಕಾರ್ಜುನ, ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿರಿಗೆರೆ ಬೃಹನ್ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಶ್ರೀಶೈಲ ಪೀಠದ ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ, ಪ್ರಧಾನ ಕಾರ್ಯದರ್ಶಿ ಈಶ್ವರ ಖಂಡ್ರೆ, ಉದ್ಯಮಿ ಅಥಣಿ ವೀರಣ್ಣ, ಶಾಸಕರಾದ ಬಿ.ಪಿ.ಹರೀಶ್, ಡಿ.ಜಿ.ಶಾಂತನಗೌಡ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

ಒಡಕು ಮೂಡಿಸಿ 'ಕೈ' ಸುಟ್ಟುಕೊಳ್ಳದಿರಿ

'ಈ ಹಿಂದೆ ಕೆಲವರು ವೀರಶೈವ–ಲಿಂಗಾಯತರ ನಡುವೆ ಒಡಕು ಮೂಡಿಸಲು ಹೋಗಿ ಕೈಸುಟ್ಟುಕೊಂಡರು. ಮತ್ತೊಮ್ಮೆ ಸಮಾಜದ ಜೊತೆ ಚೆಲ್ಲಾಟವಾಡಬೇಡಿ' ಎಂದು ಶ್ರೀಶೈಲ ಜಗದ್ಗುರು ಚನ್ನಸಿದ್ದರಾಮ ಪಂಡಿತಾರಾಧ್ಯ ಸ್ವಾಮೀಜಿ, ಪರೋಕ್ಷವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಎಚ್ಚರಿಸಿದರು.

'ರಾಜ್ಯದಲ್ಲಿ ವೀರಶೈವ–ಲಿಂಗಾಯತ ಸಮಾಜದ ಜನಸಂಖ್ಯೆ ಶೇ 17ರಷ್ಟಿದೆ ಎಂದು 1990ರಲ್ಲಿ ಚಿನ್ನಪ್ಪ ರೆಡ್ಡಿ ಆಯೋಗ ವರದಿ ಸಲ್ಲಿಸಿತ್ತು. ಇದು ಶೇ 10.68ಕ್ಕೆ ಕುಸಿದಿದೆ ಎಂದು ಈಗಿನ ಜಾತಿ ಗಣತಿ ವರದಿಯಲ್ಲಿ ಉಲ್ಲೇಖಿಸಲಾಗಿದೆ ಎಂಬ ಊಹಾಪೋಹಗಳು ಕೇಳಿಬಂದಿವೆ. ಜನಸಂಖ್ಯೆ ಕಡಿಮೆಯಾಗಲು ಹೇಗೆ ಸಾಧ್ಯ' ಎಂದು ಪ್ರಶ್ನಿಸಿದರು.

ತಾತ್ವಿಕ ವಿಚಾರಗಳಲ್ಲಿ ಭಿನ್ನಾಭಿಪ್ರಾಯ ಇರಬಹುದು. ದೊಡ್ಡವ, ಸಣ್ಣವ ಎಂಬ ಭಾವನೆ ಬಿಟ್ಟು ಮೊದಲು ನಾವು ಒಂದಾಗಬೇಕು. ಆಗ ಮಾತ್ರ ಸಮುದಾಯ ಒಗ್ಗೂಡಲಿದೆ
ವಚನಾನಂದ ಸ್ವಾಮೀಜಿ, ಹರಿಹರ ಪಂಚಮಸಾಲಿ ಪೀಠ

ವೀರಶೈವ ಲಿಂಗಾಯತರಿಗೆ ವೀರಶೈವ ಲಿಂಗಾಯತರೇ ಶತ್ರುಗಳು. ಸಮುದಾಯಕ್ಕೆ ಒಳಗಿನ ಶತ್ರುಗಳೇ ಹೆಚ್ಚು. ಸಮಾಜ ಅಧಃಪತನದತ್ತ ಸಾಗಲು ವೀರಶೈವರೇ ಕಾರಣ
ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಸಿರಿಗೆರೆ ಬೃಹನ್ಮಠ

ಮಾನವ ಕಳ್ಳಸಾಗಣೆ ಶಂಕೆ

ಒಂದನೇ ಪುಟದಿಂದ

ಹೆಚ್ಚಿನ ವಿಚಾರಣೆಗಾಗಿ ಇಬ್ಬರನ್ನು ವಶಕ್ಕೆ ತೆಗೆದುಕೊಂಡಿದ್ದಾರೆ' ಎಂದು ಪ್ಯಾರಿಸ್ ಪ್ರಾಸಿಕ್ಯೂಟರ್ ಕಚೇರಿಯ ಪ್ರಕಟಣೆ ತಿಳಿಸಿದೆ.

'ವಿಮಾನದಲ್ಲಿ 21 ತಿಂಗಳ ಮಗುವಿನಿಂದ ಹಿಡಿದು 17 ವರ್ಷದ ವರೆಗಿನ ಹಲವು ಅಪ್ರಾಪ್ತ ವಯಸ್ಸಿನವರೂ ಇದ್ದರು. ಅವರಲ್ಲಿ 13 ಮಕ್ಕಳ ಜತೆ ಪೋಷಕರು ಇರಲಿಲ್ಲ' ಎಂದು ಅಧಿಕಾರಿಗಳ ಹೇಳಿಕೆ ಉಲ್ಲೇಖಿಸಿ 'ಲಿ ಮಾಂಡ್' ದಿನಪತ್ರಿಕೆ ವರದಿ ಮಾಡಿದೆ.

'ಯುಎಇನಲ್ಲಿ ಕೆಲಸ ಮಾಡುತ್ತಿದ್ದ ಭಾರತದ ಪ್ರಜೆಗಳನ್ನು ನಿಕರಾಗುವಾಗೆ ಕರೆದೊಯ್ಯಲಾಗುತ್ತಿತ್ತು. ಮಾನವ ಕಳ್ಳಸಾಗಣೆಯ ಸುಳಿವು ಸಿಕ್ಕಿದ್ದರಿಂದ ವಶಕ್ಕೆ ತೆಗೆದುಕೊಳ್ಳಲಾಗಿದೆ. ನಿಕರಾಗುವಾಗೆ ತಲುಪಿದ ಬಳಿಕ ಅಲ್ಲಿಂದ ಅಮೆರಿಕ ಅಥವಾ ಕೆನಡಾಗೆ ಅಕ್ರಮವಾಗಿ ಪ್ರವೇಶಿಸುವ ಉದ್ದೇಶವನ್ನು ಪ್ರಯಾಣಿಕರು ಹೊಂದಿದ್ದರು ಎಂದು ಅಧಿಕಾರಿಗಳು ಶಂಕಿಸಿದ್ದಾರೆ' ಎಂದು ವರದಿ ತಿಳಿಸಿದೆ.

ರೊಮೇನಿಯದ ಲೆಜೆಂಡ್ಸ್ ಏರ್‌ಲೈನ್ಸ್ ಸಂಸ್ಥೆಗೆ ಸೇರಿದ ವಿಮಾನದ 15 ಸಿಬ್ಬಂದಿಯನ್ನು ವಿಚಾರಣೆ ಬಳಿಕ ಬಿಟ್ಟುಬಿಡಲಾಗಿದೆ ಎಂದು ಮೂಲಗಳು ಹೇಳಿವೆ.

ವಾಸ್ತವ್ಯಕ್ಕೆ ನಿಲ್ದಾಣದಲ್ಲೇ ವ್ಯವಸ್ಥೆ: 'ಫ್ರಾನ್ಸ್‌ನಲ್ಲಿ ವಿಮಾನ ಇಳಿದ ಬಳಿಕ ಪ್ರಯಾಣಿಕರನ್ನು ಕೆಲ ಸಮಯ ವಿಮಾನದಲ್ಲೇ ಇರಿಸಲಾಗಿತ್ತು. ಆ ಬಳಿಕ ಅವರಿಗೆ ಹೊರಗೆ ಬರಲು ಅವಕಾಶ ನೀಡಲಾಯಿತು. ನಿಲ್ದಾಣದ ಟರ್ಮಿನಲ್‌ನ ಕಟ್ಟಡದಲ್ಲಿ ವಾಸ್ತವ್ಯಕ್ಕೆ ಎಲ್ಲರಿಗೂ ಹಾಸಿಗೆ ಹಾಗೂ ಅಗತ್ಯ ಸೌಲಭ್ಯ ಕಲ್ಪಿಸಲಾಗಿದೆ. ನಿಲ್ದಾಣದ ಬಳಿ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿದೆ' ಎಂದು ಸ್ಥಳೀಯ ಅಧಿಕಾರಿಗಳು ಹೇಳಿದ್ದಾರೆ.

ಕಾರ್ಮಿಕ ಕಾನೂನು ವ್ಯಾಪ್ತಿಗೆ ಐಟಿ, ಬಿಟಿ

ಮುಖ್ಯಮಂತ್ರಿ ಜೊತೆ ಚರ್ಚೆ– ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕಂಪನಿಗಳನ್ನು (ಐಟಿ–ಬಿಟಿ) ಕಾರ್ಮಿಕ ಕಾನೂನು ವ್ಯಾಪ್ತಿಗೆ ತರುವ ಕುರಿತು ಮುಖ್ಯಮಂತ್ರಿ ಮತ್ತು ಕಂಪನಿಗಳ ಮುಖ್ಯಸ್ಥರ ಜೊತೆ ಚರ್ಚೆ ನಡೆಸಲಾಗುವುದು' ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ತಿಳಿಸಿದರು.

ಸಂತೋಷ್ ಲಾಡ್

ಸುದ್ದಿಗಾರರ ಜತೆ ಮಾತನಾಡಿದ ಅವರು, 'ರಾಜ್ಯದಲ್ಲಿ 7,500ಕ್ಕೂ ಹೆಚ್ಚು ಐಟಿ –ಬಿಟಿ ಕಂಪನಿಗಳಿದ್ದು, ಲಕ್ಷಾಂತರ ಉದ್ಯೋಗಿಗಳು ಕೆಲಸ ಮಾಡುತ್ತಿದ್ದಾರೆ. ಕಾರ್ಮಿಕ ಕಾನೂನು ವ್ಯಾಪ್ತಿಗೆ ಐಟಿ–ಬಿಟಿ ಕಂಪನಿಗಳು ಬಂದರೆ ಅಲ್ಲಿನ ನೌಕರರಿಗೆ ಸಹಾಯವಾಗಲಿದೆ' ಎಂದು ಅಭಿಪ್ರಾಯಪಟ್ಟರು.

'ಐಟಿ-ಬಿಟಿ ಕಂಪನಿಗಳಲ್ಲಿ ಕೆಲಸ ಮಾಡುವ ನೌಕರರನ್ನು ಕೆಲಸದಿಂದ ತೆಗೆದುಹಾಕುವುದು, ಲೈಂಗಿಕ ಕಿರುಕುಳ, ಮಾನಸಿಕ ಒತ್ತಡ, ಕೇವಲ ರಾತ್ರಿ ಪಾಳಿ ಕೆಲಸ ಸೇರಿದಂತೆ ಹಲವು ಸಮಸ್ಯೆಗಳನ್ನು ಎದುರಿಸುತ್ತಿರುವ ಬಗ್ಗೆ ದೂರುಗಳು ಬಂದಿವೆ. ಆದರೆ, ಈ ಕಂಪನಿಗಳು ಕಾರ್ಮಿಕ ಕಾನೂನಿಂದ ಹೊರಗಿರುವುದರಿಂದ, ಅಲ್ಲಿನ ನೌಕರರು ನೀಡುವ ದೂರುಗಳಿಗೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಿಕೊಳ್ಳಲು ಅವಕಾಶ ಇಲ್ಲ. ಹೀಗಾಗಿ, ಐಟಿ–ಬಿಟಿ ಕಂಪನಿಗಳನ್ನು ಕಾರ್ಮಿಕ ಕಾನೂನು ವ್ಯಾಪ್ತಿಗೆ ತರುವ ಬಗ್ಗೆ ಚರ್ಚೆ ಮಾಡಲಾಗುವುದು. ಈ ಹಿಂದೆಯೂ ಈ ಪ್ರಸ್ತಾಪ ಇತ್ತು. ಆದರೆ, ಯಾವುದೇ ಕ್ರಮ ಆಗಿಲ್ಲ' ಎಂದರು.

'ಹಾಗೆಂದು, ಐಟಿ–ಬಿಟಿ ಕಂಪನಿಗಳು ಒಳ್ಳೆಯ ಕೆಲಸ ಮಾಡುತ್ತಿಲ್ಲ ಎಂದರ್ಥವಲ್ಲ. ಕಂಪನಿಗಳಿಗೆ ತೊಂದರೆ ನೀಡುವ ಉದ್ದೇಶವೂ ಇಲ್ಲ. ಕಂಪನಿಯ ನೌಕರರಿಗೆ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಕಂಪನಿಗಳ ಮುಖ್ಯಸ್ಥರನ್ನು ಕರೆಸಿ ಮಾತುಕತೆ ನಡೆಸಲು ತೀರ್ಮಾನಿಸಲಾಗಿದೆ' ಎಂದೂ ಹೇಳಿದರು.

ಕನಿಷ್ಠ ವೇತನ ಚರ್ಚೆ: ಕುಶಲ ಹಾಗೂ ಕೌಶಲರಹಿತ ಕಾರ್ಮಿಕರಿಗೆ ನ್ಯಾಯಾಲಯದ ಮಾರ್ಗಸೂಚಿ ಪ್ರಕಾರ ಕನಿಷ್ಠ ವೇತನ ನಿಗದಿಪಡಿಸುವ ಕುರಿತು ಕೈಗಾರಿಕಾ ಸಂಘಟನೆಗಳು ಹಾಗೂ ಕಾರ್ಮಿಕ ಸಂಘಟನೆಗಳ ಜತೆ ಸಚಿವ ಲಾಡ್ ಸಭೆ ನಡೆಸಿದರು.

ಎಫ್‌ಕೆಸಿಸಿಐ, ಸಿಐಐ ಹಾಗೂ ಕಾಸಿಯಾದ ಪದಾಧಿಕಾರಿಗಳ ಜತೆ ಸಭೆ ನಡೆಸಿದ ಲಾಡ್, ಕನಿಷ್ಠ ವೇತನ ನಿಗದಿ ಮಾಡಲು ಇರುವ ಸಮಸ್ಯೆಗಳ ಕುರಿತು ಮಾಹಿತಿ ಪಡೆದರು.

ಅದಾದ ಬಳಿಕ, ಕಾರ್ಮಿಕ ಸಂಘಟನೆಗಳಾದ ಎಐಟಿಯುಸಿ, ಇಂಟಕ್, ಸಿಐಟಿಯು, ಟಿಯುಸಿಸಿ, ಎಚ್‌ಎಂಕೆಪಿ, ಗಾರ್ಮೆಂಟ್ಸ್ ನೌಕರರ ಸಂಘಟನೆಗಳ ಪದಾಧಿಕಾರಿಗಳ ಜತೆ ಚರ್ಚಿಸಿ, ಅವರ ಬೇಡಿಕೆಗಳನ್ನು ಸ್ವೀಕರಿಸಿದರು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ನರಗುಂದ ಜಿಲ್ಲಾ : ಗದಗ
ನರಗುಂದ–ಬನಹಟ್ಟಿ ರಸ್ತೆ, ನರಗುಂದ–582207 ಜಿಲ್ಲೆ : ಗದಗ
ಇ–ಮೇಲ್ : apmcnrd@gmail.com ದೂ : 08377-245228
ಕ್ರ.ಸಂ:ಕೃಮಾಇ:ಕೃಉಮಾಸ(ನ):ಅಭಿವೃದ್ಧಿ:750:2023–24 ದಿನಾಂಕ:21/12/2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ನರಗುಂದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ವತಿಯಿಂದ "CONSTRUCTION OF BT ROAD, RCC DRAIN & YARD ELECTRIFICATION AT MMY OF APMC NARAGUNDA UNDER RIDF-29 2023-24" ಕಾಮಗಾರಿಗೆ "KW-4" ರಡಿಯಲ್ಲಿ ಕರ್ನಾಟಕ ಸರ್ಕಾರದ ಹೊಸ ಆವೃತ್ತಿಯ **https://kppp.karnataka.gov.in** ಪೋರ್ಟಲ್‌ನಲ್ಲಿ ಇಂಡೆಂಟ್ ನಂ: APMC/2023-24/OW/WORK_INDENT180 ರ ಮೂಲಕ ಐಟಂವಾರು ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕರ್ನಾಟಕ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ ನೊಂದಾಯಿತ ಗುತ್ತಿಗೆದಾರರು ದಿನಾಂಕ : **08–01–2024** ರ ಸಾಯಂಕಾಲ 5–00 ಗಂಟೆಯ ಒಳಗಾಗಿ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಹೊಸ ಆವೃತ್ತಿಯ https://kppp.karnataka.gov.in ವೆಬ್‌ಸೈಟ್‌ನಲ್ಲಿ ಮತ್ತು ಕಚೇರಿ ವೇಳೆಯಲ್ಲಿ ಕಾರ್ಯದರ್ಶಿಯವರಿಂದ ಪಡೆಯಬಹುದಾಗಿದೆ.

ಸಹಿ/– ರಾಘವೇಂದ್ರ ಕಾ. ಸಜ್ಜನ, ಕಾರ್ಯದರ್ಶಿ, ಕೃ.ಉ.ಮಾ.ಸ, ನರಗುಂದ
ಸಹಿ/– ಶ್ರೀಶೈಲ ವಾಯ್. ತಳವಾರ, ಆಡಳಿತಾಧಿಕಾರಿಗಳು, ಕೃ.ಉ.ಮಾ.ಸ, ನರಗುಂದ

ನಗರಸಭಾ ಕಾರ್ಯಾಲಯ, ಪುತ್ತೂರು
ಕಿಲ್ಲೆ ಮೈದಾನ ಹತ್ತಿರ, ಕೋರ್ಟ್ ರಸ್ತೆ, ಪುತ್ತೂರು, ದಕ್ಷಿಣ ಕನ್ನಡ–574201
ಇ–ಮೇಲ್: co.puttur@gmail.com ವೆಬ್‌ಸೈಟ್: www.putturcity.mrc.gov.in
ಪು.ನ.ಸ/ವಿ.ನಿ/05/ಆ.ವಿ.ಸಿ.ಆರ್/267/23–24 ದಿನಾಂಕ: 22/12/2023

ಟೆಂಡರ್ ಪ್ರಕಟಣೆ CALL-3

(ಕರ್ನಾಟಕ ಸರಕಾರದ ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಪುತ್ತೂರು ನಗರಸಭೆ ಸ್ವಚ್ಛ ಭಾರತ ಮತ್ತು ನಗರಸಭಾ ನಿಧಿ ಅನುದಾನದಡಿ ಈ ಕೆಳಗಿನ ಕಾಮಗಾರಿಯನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಹಾಗೂ ಇ.ಪಿ.ಎಫ್ ಮತ್ತು ಇ.ಎಸ್.ಐ ನೋಂದಾವಣೆಯಾಗಿರುವ ಅರ್ಹ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ನಿರ್ದಿಷ್ಟ ಟೆಂಡರ್ ದಸ್ತಾವೇಜಿನಲ್ಲಿ **(tender document KW4)** ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ.

(1) ಟೆಂಡರ್ ಬಗ್ಗೆ ಮಾಹಿತಿಯನ್ನು **kppp.karnatata.gov.in** ನಲ್ಲಿ ದಿನಾಂಕ: 22/12/2023 ರಂದು ಪ್ರಕಟಿಸಿದ್ದು, ವೀಕ್ಷಿಸಬಹುದು/ಪಡೆಯಬಹುದು. (2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ಸಮಯ **ದಿನಾಂಕ: 06/01/2024 ಸಂಜೆ 5.00 ಗಂಟೆ** (3) ಸ್ವೀಕೃತವಾದ ಟೆಂಡರ್ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **08/01/2024 ಅಪರಾಹ್ನ 11.00 ಗಂಟೆ.** (4) ಹಣಕಾಸಿನ ಬಿಡ್ಡನ್ನು ತೆರೆಯುವ ದಿನಾಂಕ: ಅರ್ಹ ಬಿಡ್ಡದಾರರಿಗೆ ಪ್ರತ್ಯೇಕವಾಗಿ ತಿಳಿಸಲಾಗುವುದು. (5) ಜಿ.ಎಸ್.ಟಿ ತೆರಿಗೆ ಪ್ರತ್ಯೇಕ ಪಾವತಿಸಲಾಗುವುದು. ಗುತ್ತಿಗೆದಾರರು ಟೆಂಡರ್ ಶೆಡ್ಯೂಲ್ ನಲ್ಲಿ GST ಯನ್ನು ಹೊರತುಪಡಿಸಿದ ದರವನ್ನು ನಮೂದಿಸುವುದು. (6) ದಿನಾಂಕಗಳಲ್ಲಿನ ಯಾವುದೇ ಬದಲಾವಣೆಗಳು ಅಥವಾ ಟೆಂಡರ್ ನಲ್ಲಿನ ತಿದ್ದುಪಡಿಯನ್ನು ಕೊರಿಜೆಂಡಮ್ /ಅಡೆಂಡಮ್ ಮೂಲಕ ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್ ನಲ್ಲಿ ಪ್ರಕಟಿಸಲಾಗುವುದು.

ಕಾಮಗಾರಿಯ ಹೆಸರು: ಸ್ವಚ್ಛ ಭಾರತ ಮತ್ತು ನಗರಸಭಾ ನಿಧಿ (1) ಪುತ್ತೂರು ನಗರಸಭಾ ವ್ಯಾಪ್ತಿಯ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿನ ಪಾರಂಪರಿಕ ತ್ಯಾಜ್ಯ ವಿಲೇವಾರಿಗೊಳಿಸುವ ಕಾಮಗಾರಿ **DMA/2023-24/OW/WORK_INDENT 583/call-3** ಅಂದಾಜು ಮೊತ್ತ: **342.16 ಲಕ್ಷ,** ಕೆಲಸ ನಿರ್ವಹಿಸಲು ಅವಧಿ: **6 ತಿಂಗಳು,** ಇ.ಎಂ.ಡಿ E-procurement ನಂತೆ. ಹೆಚ್ಚಿನ ಮಾಹಿತಿಗಾಗಿ ನಗರಸಭೆಯ ವೆಬ್‌ಸೈಟ್ **www.putturcity.mrc.in** ನಲ್ಲಿ ವೀಕ್ಷಿಸಬಹುದು ಅಥವಾ ನಗರಸಭೆ ತಾಂತ್ರಿಕ ವಿಭಾಗವನ್ನು ಸಂಪರ್ಕಿಸಬಹುದಾಗಿದೆ.

ಸಹಿ/–, ಆಡಳಿತಾಧಿಕಾರಿಗಳು, ನಗರಸಭೆ, ಪುತ್ತೂರು
ಸಹಿ/–, ಪೌರಾಯುಕ್ತರು, ನಗರಸಭೆ, ಪುತ್ತೂರು
DIPR/ADM/KSMCA/933/23-24 Dt. 23.12.2023

ಹಿಜಾಬ್: ಪರ–ವಿರೋಧದ ಮೇಲಾಟ

ಶಾಲೆಗಳಲ್ಲಿ ಹಿಜಾಬ್ ನಿಷೇಧ ಹಿಂದಕ್ಕೆ ಪಡೆಯುವುದರಿಂದ ಮುಸ್ಲಿಂ ವಿದ್ಯಾರ್ಥಿನಿಯರ ಶಿಕ್ಷಣಕ್ಕೆ ಅನುಕೂಲವಾಗುತ್ತದೆ ಎಂದು ಕೆಲವು ಸಂಘಟನೆಗಳು ಮತ್ತು ಮುಸ್ಲಿಂ ವಿದ್ಯಾರ್ಥಿನಿಯರು ಅಭಿಪ್ರಾಯಪಟ್ಟಿದ್ದಾರೆ. ಆದರೆ, ಹಿಜಾಬ್‌ಗೆ ಅವಕಾಶ ಕೊಟ್ಟರೆ ಶಾಲೆ– ಕಾಲೇಜುಗಳು ಕೇಸರಿಮಯವಾಗಲಿವೆ ಎಂಬ ಎಚ್ಚರಿಕೆಯನ್ನು ಬಿಜೆಪಿ ಮತ್ತು ವಿಶ್ವ ಹಿಂದೂ ಪರಿಷತ್‌ನ ಕೆಲವು ಮುಖಂಡರು ನೀಡಿದ್ದಾರೆ. ಹಿಜಾಬ್ ನಿಷೇಧ ನಿರ್ಧಾರ ವಾಪಸ್ ಪಡೆಯುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದು ಮುಸ್ಲಿಂ ತುಷ್ಟೀಕರಣದ ಪರಮಾವಧಿ ಎಂದೂ ಕೆಲವು ಮುಖಂಡರು ಅಭಿಪ್ರಾಯಪಟ್ಟಿದ್ದಾರೆ

‘ಹಿಜಾಬ್ ವಿವಾದಕ್ಕೆ ತೆರೆ ಸ್ವಾಗತಾರ್ಹ’

ಬೆಂಗಳೂರು: ಸಾವಿರಾರು ಸಂಖ್ಯೆಯ ಮುಸ್ಲಿಂ ಹೆಣ್ಣುಮಕ್ಕಳನ್ನು ಶಿಕ್ಷಣದ ಕಕ್ಷೆಯಿಂದ ಹೊರತಳ್ಳಿದ ಹಿಜಾಬ್ ವಿವಾದಕ್ಕೆ ತೆರೆ ಎಳೆಯುವ ನಿಟ್ಟಿನಲ್ಲಿ ಹಿಜಾಬ್ ನಿಷೇಧ ವಾಪಸ್ ಪಡೆಯುವುದಾಗಿ ಮುಖ್ಯಮಂತ್ರಿ ಹೇಳಿಕೆ ನೀಡಿರುವುದು ಸ್ವಾಗತಾರ್ಹ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಕರ್ನಾಟಕ ರಾಜ್ಯ ಸಮಿತಿ ತಿಳಿಸಿದೆ.

ಮಹಿಳೆಯರ ಶಿಕ್ಷಣದ ಹಕ್ಕನ್ನು ಕಿತ್ತುಕೊಳ್ಳುವ, ವಸ್ತ್ರ ಸಂಹಿತೆಯೂ ಸೇರಿದಂತೆ ಮಹಿಳೆಯರ ಆಯ್ಕೆ ಸ್ವಾತಂತ್ರ್ಯಕ್ಕೆ ತಡೆಯೊಡ್ಡುವ ಕ್ರಮಗಳನ್ನು ಜನವಾದಿ ಮಹಿಳಾ ಸಂಘಟನೆ ಬೆಂಬಲಿಸುವುದಿಲ್ಲ. ಶಿಕ್ಷಣ ಪಡೆಯುವುದು ಆದ್ಯತೆಯಾಗಬೇಕು ಎಂದು ಸಂಘಟನೆಯ ಅಧ್ಯಕ್ಷೆ ಮೀನಾಕ್ಷಿ ಬಾಳಿ, ಕಾರ್ಯದರ್ಶಿ ದೇವಿ, ಉಪಾಧ್ಯಕ್ಷೆ ಕೆ.ಎಸ್. ವಿಮಲಾ ಪ್ರತಿಪಾದಿಸಿದ್ದಾರೆ.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಶಿಕ್ಷಣ ಸಂಸ್ಥೆಗಳಲ್ಲಿ ಮುಸ್ಲಿಂ ಸಮುದಾಯದ ಹೆಣ್ಣುಮಕ್ಕಳ ಶಿರವಸ್ತ್ರ ಕುರಿತು ವಿವಾದ ಎಬ್ಬಿಸಲಾಯಿತು. ಅದನ್ನು ಅಲ್ಲಿಯೇ ಪರಿಹರಿಸುವ ಬದಲು ಗದ್ದಲ ಮಾಡಲಾಯಿತು. ಲೋಡ್‌ಗಟ್ಟಲೆ ಕೇಸರಿ ಶಾಲುಗಳನ್ನು ಸರಬರಾಜು ಮಾಡಿ ರಾಜಕೀಯ ಲಾಭಕ್ಕಾಗಿ ಧರ್ಮಗಳ ನೆಲೆಯಲ್ಲಿ ವಿವಾದವನ್ನಾಗಿ ಪರಿವರ್ತಿಸಲಾಯಿತು. ಶಿಕ್ಷಣಕ್ಕೆ ತೆರೆದುಕೊಂಡ ಮೊದಲ ತಲೆಮಾರಿನ ಸಾವಿರಾರು ಯುವತಿಯರು ಆಧುನಿಕ ಆಲೋಚನಾ ಕ್ರಮಕ್ಕೆ ತೆರೆದುಕೊಳ್ಳುವ ಅವಕಾಶದಿಂದ ವಂಚಿತರಾಗಿ ಧರ್ಮದ ಕಟ್ಟು ಕಟ್ಟಳೆಯ ಒಳಗೆ ಇನ್ನಷ್ಟು ಸಿಲುಕಿಕೊಳ್ಳುವ ಸ್ಥಿತಿ ನಿರ್ಮಾಣವಾಯಿತು. ಈ ಹಿನ್ನೆಲೆಯಲ್ಲಿ ಈಗಿನ ಸರ್ಕಾರ ಉತ್ತಮ ನಿರ್ಧಾರ ತೆಗೆದುಕೊಂಡಿದೆ ಎಂದು ತಿಳಿಸಿದ್ದಾರೆ.

ಶಿಕ್ಷಣ ಇಲಾಖೆಯು ಈ ಮೊದಲು ಹೊರಡಿಸಿದ ಸಮವಸ್ತ್ರ ಕಡ್ಡಾಯದ ವಿವಾದಿತ ಸುತ್ತೋಲೆಯ ಬಗ್ಗೆ ಕೂಡ ಗಮನ ಹರಿಸಬೇಕು ಎಂದಿದ್ದಾರೆ.

ಹೆಣ್ಣುಮಕ್ಕಳ ಶಿಕ್ಷಣಕ್ಕೆ ಮುಕ್ತ ಅವಕಾಶ ಕೊಡಿ: ತೆಹ್ರೀನ್ ಬೇಗಂ ಮನವಿ

ಉಡುಪಿ: ಶಾಲಾ–ಕಾಲೇಜುಗಳಲ್ಲಿ ಹಿಜಾಬ್ ನಿಷೇಧ ಹಿಂಪಡೆದು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಅವಕಾಶ ಮಾಡಿಕೊಟ್ಟರೆ ರಾಜ್ಯ ಸರ್ಕಾರಕ್ಕೆ ಧನ್ಯವಾದ ಸಲ್ಲಿಸುವುದಾಗಿ ಹಿಜಾಬ್ ಪರವಾಗಿ ಸುಪ್ರಿಂಕೋರ್ಟ್‌ನಲ್ಲಿ ಕಾನೂನು ಹೋರಾಟ ಮಾಡುತ್ತಿರುವ ವಿದ್ಯಾರ್ಥಿನಿ ತೆಹ್ರೀನ್ ಬೇಗಂ ಹೇಳಿದ್ದಾರೆ.

‘ಮುಸ್ಲಿಂ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಅಡ್ಡಿಪಡಿಸಿದಾಗ ಸಮುದಾಯ ಧ್ವನಿ ಎತ್ತಿದ್ದಕ್ಕೆ ಪ್ರತಿಫಲ ದೊರೆತಿದೆ. ನನ್ನ ವಸ್ತ್ರ ನನ್ನ ಹಕ್ಕಾಗಿದ್ದು ಕಸಿದುಕೊಳ್ಳಲು ಯಾರಿಗೂ ಹಕ್ಕಿಲ್ಲ ಎಂಬುದನ್ನು ಸರ್ಕಾರ ತೋರಿಸಬೇಕು. ಮುಂದೆಯೂ ಸಂವಿಧಾನದ ಆಶಯಕ್ಕೆ ಬದ್ಧವಾಗಿ ಹೆಣ್ಣು ಮಕ್ಕಳ ಹಕ್ಕುಗಳನ್ನು ಎತ್ತಿ ಹಿಡಿದು ಶಿಕ್ಷಣದ ಮುಖಾಂತರ ಬದಲಾವಣೆ ತರಲು ಅವಕಾಶ ಮಾಡಿಕೊಡಬೇಕು’ ಎಂದು ಅವರು ಮನವಿ ಮಾಡಿದ್ದಾರೆ.

ಸ್ವಾಗತ: ‘ಸಂವಿಧಾನವನ್ನು ಪ್ರೀತಿಸುವವರೆಲ್ಲರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೇಳಿಕೆ ಸ್ವಾಗತ ಮಾಡುತ್ತಾರೆ. ಹಿಂದಿನ ಸರ್ಕಾರ ದುರುದ್ದೇಶ ಪೂರ್ವಕವಾಗಿ ಹಿಜಾಬ್ ನಿಷೇಧಿಸಿತ್ತು. ಈಗ ಕಾಂಗ್ರೆಸ್ ಸರ್ಕಾರ ಮೂಲಭೂತ ಹಕ್ಕನ್ನು ಮರುಸ್ಥಾಪಿಸುತ್ತಿದೆ’ ಎಂದು ಹಿಜಾಬ್ ಪರವಾಗಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿರುವ ಎಪಿಸಿಆರ್ ಸಂಘಟನೆ ಮುಖ್ಯಸ್ಥ ಹುಸೇನ್ ಕೋಡಿಬೆಂಗ್ರೆ ತಿಳಿಸಿದ್ದಾರೆ.

ಶಾಲಾ ಕಾಲೇಜುಗಳು ಕೇಸರಿಮಯ: ಎಚ್ಚರಿಕೆ

ಉಡುಪಿ/ಮಂಗಳೂರು: ತರಗತಿಗಳಲ್ಲಿ ಹಿಜಾಬ್ ನಿಷೇಧ ರದ್ದುಗೊಳಿಸಿದರೆ ರಾಜ್ಯದ ಶಾಲಾ ಕಾಲೇಜುಗಳು ಕೇಸರಿಮಯವಾಗಲಿವೆ ಎಂದು ವಿಶ್ವ ಹಿಂದೂ ಪರಿಷತ್ ಎಚ್ಚರಿಸಿದೆ. ಇದು ವಿದ್ಯಾರ್ಥಿಗಳ ಮಧ್ಯೆ ಸಂಘರ್ಷಕ್ಕೂ ಕಾರಣವಾಗಲಿದೆ ಎಂದು ಬಿಜೆಪಿ ಶಾಸಕರು ಹೇಳಿದ್ದಾರೆ.

‘ಮಾನ್ಯ ಮುಖ್ಯಮಂತ್ರಿಗಳೇ, ವಾರ್ಷಿಕ ಪರೀಕ್ಷೆ ಹತ್ತಿರ ಬರುತ್ತಿದೆ. ಈ ಸಂಧರ್ಭದಲ್ಲಿ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಮತಾಂಧತೆಯ ವಿಷ ಬೀಜ ಬಿತ್ತಬೇಡಿ’ ಎಂದು ವಿಎಚ್‌ಪಿ ರಾಜ್ಯದ ದಕ್ಷಿಣ ಪ್ರಾಂತ ಸಹ ಕಾರ್ಯದರ್ಶಿ ಶರಣ್ ಪಂಪ್‌ವೆಲ್ ಹೇಳಿದ್ದಾರೆ.

‘ತರಗತಿ ಒಳಗೆ ಹಿಜಾಬ್ ಧರಿಸಲು ಅನುಮತಿ ನೀಡುವುದಾದರೆ ಕೇಸರಿ ಶಾಲು ಧರಿಸಿ ಹಿಂದೂ ವಿದ್ಯಾರ್ಥಿಗಳು ಹೋಗುವುದರಲ್ಲಿ ಯಾವುದೇ ತಪ್ಪಿಲ್ಲ. ಕೇಸರಿ ಶಾಲು ಧರಿಸುವ ಆಯ್ಕೆ, ಸ್ವಾತಂತ್ರ್ಯ ಹಿಂದೂ ವಿದ್ಯಾರ್ಥಿಗಳಿಗೂ ಇದೆ’ ಎಂದು ಮಂಗಳೂರು ಉತ್ತರ ಕ್ಷೇತ್ರದ ಶಾಸಕ ಡಾ.ಭರತ್ ಶೆಟ್ಟಿ ವೈ. ಹೇಳಿದ್ದಾರೆ.

‘ರಾಜ್ಯ ಸರ್ಕಾರ ಹಿಜಾಬ್ ನಿಷೇಧ ವಾಪಸ್ ಪಡೆದರೆ ಮತ್ತೆ ಶಿಕ್ಷಣ ವ್ಯವಸ್ಥೆ ಹಾಳುಗೆಡವಿ, ಸಂಘರ್ಷಕ್ಕೆ ಎಡೆಮಾಡಿಕೊಟ್ಟಂತಾಗುತ್ತದೆ. ವಿದ್ಯಾರ್ಥಿಗಳ ಜೀವನದಲ್ಲಿ ಚೆಲ್ಲಾಟವಾಡುವ ಕೆಲಸಕ್ಕೆ ಸರ್ಕಾರ ಮುಂದಾಗಬಾರದು’ ಎಂದು ಉಡುಪಿ ಯಶ್‌ಪಾಲ್ ಸುವರ್ಣ, ಮಾಜಿ ಶಾಸಕ ರಘುಪತಿ ಭಟ್ ಹೇಳಿದ್ದಾರೆ.



ಹಿಜಾಬ್ ನಿಷೇಧ ಆದೇಶ ಹಿಂಪಡೆಯಲು ಸಿದ್ದರಾಮಯ್ಯ ಅವರನ್ನು ಯಾರೂ ಕೇಳಿರಲಿಲ್ಲ. ಕೀಳು ಮಟ್ಟದ ರಾಜಕೀಯ ಬಿಡಬೇಕು. ಇಲ್ಲದಿದ್ದರೆ, ಉಗ್ರ ಹೋರಾಟ ಮಾಡುತ್ತೇವೆ
ಪ್ರಮೋದ ಮುತಾಲಿಕ್
ಅಧ್ಯಕ್ಷ, ಶ್ರೀರಾಮ ಸೇನೆ ರಾಷ್ಟ್ರೀಯ ಘಟಕ

ಹಿಂದಿನ ರಾಜ್ಯ ಸರ್ಕಾರ ಕಾಲೇಜುಗಳ ಒಳಗೆ ಹಿಜಾಬ್ ನಿಷೇಧಿಸಿತು. ಆದರೆ, ಕಾಂಗ್ರೆಸ್ ಸರ್ಕಾರ ಅವುಗಳನ್ನು ಮತ್ತೆ ಜಾರಿಗೆ ತಂದು ಮುಸ್ಲಿಂ ಹೆಣ್ಣುಮಕ್ಕಳಿಗೆ ಅನ್ಯಾಯ ಮಾಡುತ್ತದೆ
ಚಕ್ರವರ್ತಿ ಸೂಲಿಬೆಲೆ
ಯುವ ಬ್ರಿಗೇಡ್ ಸಂಸ್ಥಾಪಕ

ಸಿದ್ದರಾಮಯ್ಯ ನಿರ್ಧಾರದಿಂದ ಸಮಾಜದಲ್ಲಿ ಕ್ಷೋಭೆ: ಸ್ವಾಮೀಜಿ

ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ

ಬೆಳಗಾವಿ: ‘ಸರ್ಕಾರವು ಯಾವುದೇ ಒಂದು ಸಮಾಜ ಅಥವಾ ಪಂಗಡಕ್ಕೆ ಸೀಮಿತವಾಗಿ ನಡೆದುಕೊಳ್ಳಬಾರದು. ಕಾಯ್ದೆ–ಕಾನೂನು ಎಲ್ಲರಿಗೂ ಒಂದೇ ಆಗಿರಬೇಕು’ ಎಂದು ಉಡುಪಿ ಪೇಜಾವರ ಮಠಾಧೀಶ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ಹಿಜಾಬ್ ನಿಷೇಧ ಹಿಂಪಡೆಯುವ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಗೆ ಶನಿವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ಒಬ್ಬರಿಗೊಂದು ನ್ಯಾಯ, ಇನ್ನೊಬ್ಬರಿಗೆ ಒಂದು ನ್ಯಾಯ ಮಾಡಬಾರದು. ಇಂಥ ನಿರ್ಧಾರಗಳು ಸಮಾಜದಲ್ಲಿ ಕ್ಷೋಭೆಗೆ ಕಾರಣವಾಗಬಹುದು. ಸಿದ್ದರಾಮಯ್ಯ ಅವರು ಎಲ್ಲರಿಗೂ ಮುಖ್ಯಮಂತ್ರಿ ಆಗಿದ್ದಾರೆ ಹೊರತು ಯಾವುದೇ ಒಂದು ಪಂಗಡಕ್ಕಲ್ಲ’ ಎಂದು ಅವರು ಹೇಳಿದರು.

‘ಈಚೆಗೆ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾದ ಹಿಂದೂ ಹೆಣ್ಣುಮಕ್ಕಳ ಕಾಲುಂಗುರ, ಕಿವಿಯೋಲೆ, ತಾಳಿ ತೆಗೆಸಲಾಯಿತು. ಆದರೆ, ಇನ್ನೊಂದು ಪಂಗಡದವರಿಗೆ ಮುಸುಕು ಹಾಕಿಕೊಂಡೇ ತರಗತಿಗೆ ಹೋಗಲು ಬಿಡಲಾಯಿತು. ಸರ್ಕಾರ ಎಲ್ಲರನ್ನೂ ಒಂದೇ ರೀತಿ ಕಾಣಬೇಕು’ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಟಿಪ್ಪು ಸುಲ್ತಾನ್‌ನ ಎರಡನೇ ಅವತಾರ. ಹಿಜಾಬ್ ಧರಿಸಲು ಅವಕಾಶ ನೀಡುವ ಅವರ ತೀರ್ಮಾನ ಮುಸ್ಲಿಂ ತುಷ್ಟೀಕರಣದ ಪರಮಾವಧಿ
ಬಸನಗೌಡ ಪಾಟೀಲ ಯತ್ನಾಳ
ಬಿಜೆಪಿ ಶಾಸಕ

ಹಿಜಾಬ್ ವಿಷಯ ನ್ಯಾಯಾಲಯದಲ್ಲಿ ಇರುವುದರಿಂದ ಹೇಳಿಕೆ ನೀಡ ಬಾರದು ಎನ್ನುವುದು ಸಾಮಾನ್ಯ ತಿಳಿವಳಿಕೆ. ಆದರೂ ಸಿ.ಎಂ ತುಷ್ಟೀಕರಣಕ್ಕಾಗಿ ಇಂತಹ ಹೇಳಿಕೆ ನೀಡುತ್ತಿದ್ದಾರೆ
ಮಹೇಶ ಟೆಂಗಿನಕಾಯಿ
ಬಿಜೆಪಿ ಶಾಸಕ

ಹಿಜಾಬ್ ಜಾರಿ ತುಷ್ಟೀಕರಣದ ಪರಾಕಾಷ್ಠೆ: ಪ್ರಲ್ಹಾದ ಜೋಶಿ

ಬೆಂಗಳೂರು: ಹಿಜಾಬ್ ನಿಷೇಧ ಆದೇಶ ವಾಪಸ್ ಪಡೆಯುವುದು ಒಂದು ಸಮುದಾಯದ ತುಷ್ಟೀಕರಣದ ಪರಾಕಾಷ್ಠೆ ಎಂದು ಕಾನೂನು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ‘ನಿಷೇಧ ವಾಪಸ್ ಪಡೆಯುವೆ ಎಂದಿರುವ ಸಿದ್ದರಾಮಯ್ಯ ಅವರಿಗೆ ತಿಳಿವಳಿಕೆ ಇಲ್ಲ, ಮೂರ್ಖರು ಎಂದುಕೊಳ್ಳಬೇಡಿ. ಅವರು ತಿಳಿದೇ ಇಂತಹ ಕೆಲಸ ಮಾಡುತ್ತಿದ್ದಾರೆ. ಶಾಲಾ–ಕಾಲೇಜಿನಲ್ಲಿ ಹಿಜಾಬ್‌ಗೆ ಅವಕಾಶ ನೀಡಿದರೆ ಸಮಾನತೆ ಎಲ್ಲಿರುತ್ತದೆ. ಹಿಂದೆ ಮಾಡಿದಂತೆ ಇನ್ನೊಂದು ಸಮುದಾಯವೂ ಬೇರೊಂದು ವಸ್ತ್ರ ಧರಿಸಿ ಬಂದರೆ ಏನು ಮಾಡುತ್ತೀರಿ’ ಎಂದು ಪ್ರಶ್ನಿಸಿದರು.

‘ನಾಳೆ ಮಿಲಿಟರಿ, ಅರೆ ಮಿಲಿಟರಿಯಲ್ಲೂ ಹಿಜಾಬ್ ಧರಿಸುತ್ತೇವೆ ಎಂದರೆ ಏನು ಮಾಡುತ್ತೀರಿ?’ ಎಂದರು.

‘ರಾಜಕೀಯ ಲಾಭಕ್ಕೆ ಹಿಜಾಬ್ ಪ್ರಸ್ತಾಪ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ಆಡಳಿತ ವೈಫಲ್ಯವನ್ನು ಮರೆ ಮಾಚಿ ಜನರ ದಾರಿ ತಪ್ಪಿಸಲು, ರಾಜಕೀಯ ಲಾಭಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತೆ ಹಿಜಾಬ್ ವಿಷಯ ಪ್ರಸ್ತಾಪ ಮಾಡಿದ್ದಾರೆ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಆರೋಪಿಸಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ರಾಜ್ಯದ ಎಲ್ಲ ಕಡೆಗಳಲ್ಲಿ ಹಿಜಾಬ್ ನಿಷೇಧ ಆಗಿಲ್ಲ.

ಹಿಜಾಬ್ ನಿಷೇಧ ವಾಪಸ್ ಪಡೆಯುವಂತೆ ಯಾವ ಮುಸ್ಲಿಂ ನಾಯಕ ಬೇಡಿಕೆ ಇಟ್ಟಿದ್ದರು? ಮುಸ್ಲಿಮರನ್ನು ಓಲೈಸಲು ಆದೇಶ ಹಿಂಪಡೆಯುವ ನಿರ್ಧಾರ ಕೈಬಿಡಬೇಕು
ಬಿ.ಎಸ್. ಯಡಿಯೂರಪ್ಪ
ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

ವಸ್ತ್ರ ಸಂಹಿತೆ ಜಾರಿ ಇರುವ ಕಡೆ ಮಾತ್ರ ನಿಷೇಧ ಇದೆ. ನಿಷೇಧ ಆಗದೇ ಇರುವಾಗ ಅದನ್ನು ವಾಪಸ್ ಪಡೆಯುವ ಪ್ರಶ್ನೆ ಎಲ್ಲಿ ಬಂತು ಎಂದರು.

1984ರ ಸಮಗ್ರ ಶಿಕ್ಷಣ ಕಾಯ್ದೆ ಅನ್ವಯ ಶಾಲೆಗಳಲ್ಲಿ ಸಮವಸ್ತ್ರ ಜಾರಿ ಮಾಡಲಾಗಿತ್ತು. ನಮ್ಮ ಸರ್ಕಾರದ ಅವಧಿಯಲ್ಲಿ ಅದನ್ನು ಅನುಷ್ಠಾನ ಮಾಡಲಾಯಿತು. ಹಿಜಾಬ್ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ಹಂತದಲ್ಲಿದೆ. ಹಾಗಿದ್ದರೂ ರಾಜಕೀಯ ಕಾರಣಕ್ಕೆ ಹಿಜಾಬ್ ಪ್ರಸ್ತಾಪ ಮಾಡಿರುವುದು ಖಂಡನೀಯ. ಮುಖ್ಯಮಂತ್ರಿ ಹೇಳಿಕೆ ಬಗ್ಗೆ ಕೋರ್ಟ್ ಗಮನ ಹರಿಸುತ್ತದೆ ಎಂಬ ವಿಶ್ವಾಸವಿದೆ ಎಂದೂ ಅವರು ಹೇಳಿದರು.

ಶಾಲಾ ಮಕ್ಕಳಲ್ಲಿ ಒಡಕುಂಟು ಮಾಡುವ ಉದ್ದೇಶ ಇದರ ಹಿಂದಿದೆ. ಭವಿಷ್ಯದಲ್ಲಿ ಇದು ದೊಡ್ಡ ಮಟ್ಟದ ಪರಿಣಾಮ ಬೀರುತ್ತದೆ. ತಾವು ಯಾವ ಧರ್ಮಕ್ಕೆ ಸೇರಿದ್ದೇವೆ ಎಂಬುದನ್ನು ಮಕ್ಕಳಲ್ಲಿ ಬಿತ್ತಿ, ವಿಷ ಬೀಜ ಬಿತ್ತುವ ಪ್ರಯತ್ನ ನಡೆಯುತ್ತಿದೆ.

ಹಿಜಾಬ್ ವಿಚಾರದಲ್ಲಿ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಯಾಗುತ್ತಿದೆ. ಇರಾಕ್, ಇರಾನ್‌ನಲ್ಲಿ ಮಹಿಳೆಯರು ಹಿಜಾಬ್ ವಿರುದ್ಧ ಹೋರಾಟ ಮಾಡುತ್ತಿದ್ದಾರೆ ಎಂದರು.

ಸುದ್ದಿ 2 ನಿಮಿಷ

ಕಾಡುಗೊಲ್ಲರಿಗೆ ಮೀಸಲಾತಿ ಪರಿಶೀಲನೆ: ಸಚಿವರ ಭರವಸೆ

ನವದೆಹಲಿ: ಕರ್ನಾಟಕದಲ್ಲಿ ಕಾಡುಗೊಲ್ಲರು/ ಹಟ್ಟಿಗೊಲ್ಲರು/ ಅಡವಿಗೊಲ್ಲರನ್ನು ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಸೇರಿಸುವ ಸಂಬಂಧ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವ ಅರ್ಜುನ್ ಮುಂಡಾ ಅವರು ತಿಳಿಸಿದ್ದಾರೆ.

ಈ ಸಂಬಂಧ ರಾಜ್ಯಸಭಾ ಸದಸ್ಯ ಎಚ್.ಡಿ.ದೇವೇಗೌಡ ಅವರಿಗೆ ಡಿಸೆಂಬರ್ 21ರಂದು ಪತ್ರ ಬರೆದಿರುವ ಅವರು, ‘ಕಾಡುಗೊಲ್ಲರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎಂದು ಒತ್ತಾಯಿಸಿ ನೀವು ಸಲ್ಲಿಸಿರುವ ಮನವಿ ಸ್ವೀಕೃತವಾಗಿದೆ’ ಎಂದು ತಿಳಿಸಿದ್ದಾರೆ.

ಸಮುದಾಯಕ್ಕೆ ಮೀಸಲಾತಿ ನೀಡಬೇಕು ಎಂದು ಒತ್ತಾಯಿಸಿ ದೇವೇಗೌಡರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಗುರುವಾರ ಮನವಿ ಸಲ್ಲಿಸಿದ್ದರು.

ಕಾಂಗ್ರೆಸ್ ಪ್ರಣಾಳಿಕೆ ಸಮಿತಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ

ನವದೆಹಲಿ: ಮುಂಬರುವ ಲೋಕಸಭೆ ಚುನಾವಣೆಗೆ ಪಕ್ಷದ ಪ್ರಣಾಳಿಕೆಯನ್ನು ಸಿದ್ಧಪಡಿಸಲು ರಾಜ್ಯಸಭಾ ಸದಸ್ಯ ಮತ್ತು ಮಾಜಿ ಹಣಕಾಸು ಸಚಿವ ಪಿ. ಚಿದಂಬರಂ ನೇತೃತ್ವದ 16 ಸದಸ್ಯರ ಸಮಿತಿಯನ್ನು ಕಾಂಗ್ರೆಸ್ ಶುಕ್ರವಾರ ರಾತ್ರಿ ಪ್ರಕಟಿಸಿದೆ. ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮಿತಿಯ ಸದಸ್ಯರಾಗಿರುವರು.

ಒಂದೆರಡು ದಿನಗಳಲ್ಲಿ ಪ್ರಣಾಳಿಕೆ ಸಮಿತಿಯನ್ನು ರಚಿಸಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿತ್ತು. ಅದರ ಬೆನ್ನಲ್ಲೇ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸಮಿತಿಯನ್ನು ರಚಿಸಿದ್ದಾರೆ.

ಛತ್ತೀಸಗಢದ ಮಾಜಿ ಉಪಮುಖ್ಯಮಂತ್ರಿ ಟಿ.ಎಸ್. ಸಿಂಗ್ ದೇವ್ ಸಮಿತಿಯ ಸಂಚಾಲಕರಾಗಿರುವರು. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ, ರಾಜ್ಯಸಭಾ ಸದಸ್ಯ ಜೈರಾಮ್ ರಮೇಶ್ ಸೇರಿದಂತೆ 14 ಸದಸ್ಯರನ್ನು ನೇಮಕ ಮಾಡಲಾಗಿದೆ. ಲೋಕಸಭಾ ಚುನಾವಣೆಯ ವೇಳಾಪಟ್ಟಿ ಪ್ರಕಟವಾಗಲು ಸಾಕಷ್ಟು ದಿನಗಳು ಉಳಿದಿರುವಾಗಲೇ ಪ್ರಣಾಳಿಕೆ ಸಮಿತಿಯನ್ನು ರಚಿಸಿರುವುದು ಇದೇ ಮೊದಲು. ಸಮಿತಿಯು ಸಾರ್ವಜನಿಕರಿಂದ ಸಲಹೆಗಳನ್ನು ಪಡೆಯುವ ಸಾಧ್ಯತೆ ಇದೆ.

‘ಮರಳಿ ಕಾಲೇಜಿಗೆ ಹೋಗುವೆ’

ಒಂದನೇ ಪುಟದಿಂದ

‘ಈ ಹಿಂದಿನ ಸರ್ಕಾರ ಹಿಜಾಬ್ ಧರಿಸಿ ಕಾಲೇಜಿಗೆ ತೆರಳುವುದಕ್ಕೆ ನಿಷೇಧ ಹೇರಿದ್ದ ಕಾರಣ ನನ್ನ ಓದನ್ನು ನಿಲ್ಲಿಸಿದ್ದೆ. ಒಂದು ವರ್ಷದಿಂದ ಬೇರೆ ಕೋರ್ಸ್ ಓದುತ್ತಿದ್ದೆ. ಈಗ ಮುಖ್ಯಮಂತ್ರಿ ಹೇಳಿಕೆಯಿಂದ ಖುಷಿಯಾಗಿದೆ. ಮತ್ತೆ ಕಾಲೇಜಿಗೆ ತೆರಳುತ್ತೇನೆ’ ಎಂದರು.

‘ಹಿಜಾಬ್ ನಿಷೇಧದಿಂದಾಗಿ ನನ್ನಂತೆ ಅನೇಕ ವಿದ್ಯಾರ್ಥಿನಿಯರು ಓದನ್ನು ಅರ್ಧಕ್ಕೆ ನಿಲ್ಲಿಸಿದ್ದರು. ಅವರೆಲ್ಲ ಮತ್ತೆ ಕಾಲೇಜಿಗೆ ವಾಪಸ್ ಬರಬೇಕು’ ಎಂದು ಮನವಿ ಮಾಡಿದರು.

ಮುಸ್ಕಾನ್ ತಂದೆ ಮಹಮ್ಮದ್ ಉಸೇನ್ ಖಾನ್ ಪ್ರತಿಕ್ರಿಯಿಸಿ, ‘ಹಿಜಾಬ್ ವಿವಾದದ ಬಳಿಕ ಸುಮಾರು 85 ಸಾವಿರ ಮಕ್ಕಳು ಅರ್ಧಕ್ಕೆ ಶಿಕ್ಷಣ ತೊರೆದಿದ್ದಾರೆ ಎಂಬ ಮಾಹಿತಿ ಇದೆ. ಮುಖ್ಯಮಂತ್ರಿ ಹೇಳಿಕೆ ಸ್ವಾಗತಾರ್ಹ. ಈ ಸಂಬಂಧ ನ್ಯಾಯಾಲಯದಲ್ಲಿಯೂ ನಮಗೆ ನ್ಯಾಯ ಸಿಗುವ ವಿಶ್ವಾಸವಿದೆ’ ಎಂದರು.

‘ನಾವು ಮಕ್ಕಳಿಗೆ ಚಿಕ್ಕಂದಿನಿಂದಲೂ ಹಿಜಾಬ್ ಧರಿಸುವುದನ್ನು ಅಭ್ಯಾಸ ಮಾಡಿಸಿರುತ್ತೇವೆ. ಅದಕ್ಕೆ ನಿಷೇಧ ಹೇರುವುದು ಸರಿಯಲ್ಲ. ಇನ್ನೊಂದು ಧರ್ಮದವರು ಕೇಸರಿ ಶಾಲು ಧರಿಸಿ ಕಾಲೇಜಿಗೆ ಹೋದರೆ ನಮ್ಮ ವಿರೋಧವಿಲ್ಲ. ಅದು ಅವರ ಅಭ್ಯಾಸ’ ಎಂದರು.

ಚಕ್ಕಡಿ ಸಾಲು
ಚಿತ್ರದುರ್ಗ ಜಿಲ್ಲೆಯ ಮ್ಯಾಸ ನಾಯಕ ಬುಡಕಟ್ಟು ಸಮುದಾಯದಲ್ಲಿ ಐದು ವರ್ಷಕ್ಕೊಮ್ಮೆ ನಡೆಯುವ ಮಿಂಚೇರಿ ಗಾದ್ರಿಪಾಲನಾಯಕ ಜಾತ್ರೆಗೆ ಬಚ್ಚಬೋರನಹಟ್ಟಿ ಗ್ರಾಮಸ್ಥರು ಎತ್ತಿನ ಗಾಡಿಗಳಲ್ಲಿ ಸಾಗಿದರು -ಪ್ರಜಾವಾಣಿ ಚಿತ್ರ/ ವಿ.ಚಂದ್ರಪ್ಪ

ಮಂಡ್ಯದಿಂದ ಎಚ್.ಡಿ. ಕುಮಾರಸ್ವಾಮಿ ಕಣಕ್ಕೆ?

ಪ್ರಜಾವಾಣಿ ವಾರ್ತೆ



ಕುಮಾರಸ್ವಾಮಿ

ಬೆಂಗಳೂರು: ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ 2024ರ ಲೋಕಸಭೆ ಚುನಾವಣೆಯಲ್ಲಿ ಮಂಡ್ಯದಿಂದ ಕಣಕ್ಕೆ ಇಳಿಯುವ ಸಾಧ್ಯತೆ ಇದೆ.

ಎನ್‌ಡಿಎ ಮೈತ್ರಿಕೂಟ ಸೇರಿರುವ ಜೆಡಿಎಸ್, ಬಿಜೆಪಿ ಸಖ್ಯದೊಂದಿಗೆ ಚುನಾವಣೆಗೆ ಸಜ್ಜಾಗುತ್ತಿದೆ. ಹಾಸನ, ಮಂಡ್ಯ, ತುಮಕೂರು, ಕೋಲಾರ ಕ್ಷೇತ್ರಗಳು ಜೆಡಿಎಸ್‌ಗೆ ಸಿಗುವ ಸಂಭವ ಇದೆ. ಸೀಟು ಹಂಚಿಕೆಗೆ ಮುನ್ನವೇ, ಲೋಕಸಭಾ ಚುನಾವಣೆಯ ಲೆಕ್ಕಾಚಾರಗಳು ರಾಜಕೀಯ ಪಡಸಾಲೆಯಲ್ಲಿ ಶುರುವಾಗಿವೆ. ‘ಲೋಕಸಭೆ ಚುನಾವಣೆಗೆ ತಾವು ಸ್ಪರ್ಧಿಸುವುದಿಲ್ಲ’ ಎಂದು ಕುಮಾರಸ್ವಾಮಿ ಸ್ಪಷ್ಟವಾಗಿ ಹೇಳಿದ್ದರೂ ಪಕ್ಷದ ಒಳಮನೆಯಲ್ಲಿ ತಮ್ಮ ನಾಯಕನ ಸ್ಪರ್ಧೆ ಬಗ್ಗೆ ಬಿರುಸಿನ ಚರ್ಚೆ ನಡೆಯುತ್ತಿದೆ.

2019ರಲ್ಲಿ ಲೋಕಸಭೆ ಚುನಾವಣೆ ನಡೆದಾಗ, ರಾಜ್ಯದಲ್ಲಿ ಎಚ್.ಡಿ. ಕುಮಾರಸ್ವಾಮಿ ನೇತೃತ್ವದ ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರ ಅಧಿಕಾರದಲ್ಲಿತ್ತು. ಎರಡು ಪಕ್ಷಗಳು ಒಟ್ಟಾಗಿ ಚುನಾವಣೆ ಎದುರಿಸಿದ್ದವು. ಆಗಲೂ, ಕುಮಾರಸ್ವಾಮಿ ಪುತ್ರ ನಿಖಿಲ್ ಮಂಡ್ಯದಲ್ಲಿ ಸ್ಪರ್ಧಿಸುತ್ತಾರೆ ಎಂಬ ಚರ್ಚೆಗಳು ಚುನಾವಣೆ ಘೋಷಣೆಯಾಗುವುದಕ್ಕೆ ಮುನ್ನ ಜೋರಾಗಿಯೇ ನಡೆದಿತ್ತು. ‘ದೇವೇಗೌಡರು, ಪ್ರಜ್ವಲ್ ಬಿಟ್ಟರೆ ನಮ್ಮ ಕುಟುಂಬದಿಂದ ಯಾರೊಬ್ಬರೂ ಸ್ಪರ್ಧಿಸುವುದಿಲ್ಲ’ ಎಂದು ಕುಮಾರಸ್ವಾಮಿ ಏಕಕಂಠದಲ್ಲಿ ಹೇಳಿದ್ದರು. ಚುನಾವಣೆ ಘೋಷಣೆಯಾಗುತ್ತಿದ್ದಂತೆ ನಿಖಿಲ್ ಸ್ಪರ್ಧೆ ನಿಕ್ಕಿಯಾಯಿತು.

ಆ ಚುನಾವಣೆಯಲ್ಲಿ ಸುಮಲತಾ ಅಂಬರೀಷ್ ಕಾಂಗ್ರೆಸ್‌ನಿಂದ ಸ್ಪರ್ಧಿಸುವ ಲೆಕ್ಕವಿತ್ತು. ನಿಖಿಲ್‌ಗಾಗಿ ಮಂಡ್ಯ ಬೇಕು ಎಂದು ಜೆಡಿಎಸ್ ಪಟ್ಟು ಹಿಡಿದಿದ್ದರಿಂದಾಗಿ, ಕಾಂಗ್ರೆಸ್ ಕೈಚೆಲ್ಲಿತ್ತು. ಪಕ್ಷೇತರರಾಗಿ ಸ್ಪರ್ಧಿಸಿದ್ದ ಸುಮಲತಾ ಅವರಿಗೆ ಬಿಜೆಪಿ ನೇರ ಬೆಂಬಲ ಘೋಷಿಸಿದ್ದರೆ, ಕಾಂಗ್ರೆಸ್ ನಾಯಕರು ಪೂರ್ಣ ಸಹಕಾರ ನೀಡಿದ್ದರು. ಹೀಗಾಗಿ, ಸುಮಲತಾ ಗೆಲುವು ಸಾಧಿಸಿದ್ದರು.

ಈಗ ರಾಜಕೀಯ ಬದಲಾಗಿದೆ. ಸುಮಲತಾ ಬಿಜೆಪಿಯ ಸಹವಾಸದಲ್ಲಿದ್ದರೂ ಆ ಪಕ್ಷಕ್ಕೆ ಅಧಿಕೃತವಾಗಿ ಸೇರಿಲ್ಲ. ಬಿಜೆಪಿಯಿಂದ ಅವರಿಗೆ ಟಿಕೆಟ್ ಸಿಗುವ ಸಾಧ್ಯತೆ ತೀರಾ ಕ್ಷೀಣ. ಹೀಗಾಗಿ, ಮಂಡ್ಯವನ್ನು ಜೆಡಿಎಸ್‌ಗೆ ಬಿಟ್ಟುಕೊಡುವ ಬಗ್ಗೆ ಬಿಜೆಪಿ ವರಿಷ್ಠರು ಆಸಕ್ತಿ ತೋರಿದ್ದಾರೆ. ಕುಮಾರಸ್ವಾಮಿ ಸ್ಪರ್ಧಿಸಿದರೆ ಅಕ್ಕಪಕ್ಕದ ಕ್ಷೇತ್ರಗಳಲ್ಲಿ ಪಕ್ಷಕ್ಕೆ ಲಾಭವಾಗಬಹುದು ಎಂಬುದು ಬಿಜೆಪಿ ನಂಬಿಕೆ.

ಪ್ರಧಾನಿ ನರೇಂದ್ರ ಮೋದಿಯವರ ಭೇಟಿಯ ಬಳಿಕ ದೆಹಲಿಯಲ್ಲಿ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ್ದ ಕುಮಾರಸ್ವಾಮಿ, ‘ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸುವ ಬಗ್ಗೆ ಮಾಧ್ಯಮಗಳಲ್ಲಿ ಈ ಬಗ್ಗೆ ಸುದ್ದಿ ಬರುತ್ತಿದೆ. ನಮ್ಮ ಜನರು, ಕಾರ್ಯಕರ್ತರ ಭಾವನೆ ಹಾಗಿರುವುದು ಇಂತಹ ಸುದ್ದಿಗೆ ಕಾರಣ. ನಾನು ರಾಜ್ಯ ರಾಜಕಾರಣಕ್ಕೆ ಸೀಮಿತ’ ಎಂದಿದ್ದರು.

‘ಕೇಂದ್ರ ಸಚಿವರಾಗಲಿದ್ದೀರಾ’ ಎಂಬ ಪ್ರಶ್ನೆಗೆ, ‘ಯಾರ ಹಣೆಯ ಮೇಲೆ ಏನೇನು ಬರೆದಿದೆಯೋ ಗೊತ್ತಿಲ್ಲ. ಏನು ಬೇಕಾದರೂ ಆಗಬಹುದು. ಕಾದು ನೋಡೋಣ’ ಎಂದು ಹೇಳಿದ್ದರು.

‘ರಾಜ್ಯದಲ್ಲಿ 19 ಶಾಸಕರನ್ನಿಟ್ಟುಕೊಂಡು ವಿಪಕ್ಷವಾಗಿ ಕೂರುವುದಕ್ಕಿಂತ ಕೇಂದ್ರ ಸಚಿವರಾದರೆ ಅನುಕೂಲಗಳು ಜಾಸ್ತಿ ಎಂಬ ಲೆಕ್ಕಾಚಾರ ಕುಮಾರಸ್ವಾಮಿ ಅವರದ್ದು. ಮುಂದಿನ ನಾಲ್ಕು ವರ್ಷ ಸಚಿವರಾಗಿ ದೇಶ, ರಾಜ್ಯ ಸುತ್ತಾಡಿ ವರ್ಚಸ್ಸು ಹೆಚ್ಚಿಸಿಕೊಂಡು, ಪಕ್ಷ ಬೆಳೆಸಿ 2028ರ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧೆ ಒಡ್ಡುವ ಅಪೇಕ್ಷೆ ಅವರಲ್ಲಿದೆ. ಹೀಗಾಗಿ, ಮಂಡ್ಯದಲ್ಲಿ ಸ್ಪರ್ಧಿಸಿದರೂ ಅಚ್ಚರಿಯಿಲ್ಲ; ಅವರು ಸ್ಪರ್ಧಿಸದೇ ಇದ್ದರೂ ನಿಖಿಲ್ ಅವರನ್ನು ಕಣಕ್ಕೆ ಇಳಿಸುವ ಸಾಧ್ಯತೆಯನ್ನು ಅಲ್ಲಗಳೆಯಲು ಸಾಧ್ಯವಿಲ್ಲ’ ಎನ್ನುತ್ತವೆ ಜೆಡಿಎಸ್ ಮೂಲಗಳು.

‘ಮಂಡ್ಯದಿಂದ ಮತ್ತೆ ಸ್ಪರ್ಧೆ’

ಸುಮಲತಾ

ಮಂಡ್ಯ: ‘ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಮಂಡ್ಯದಿಂದಲೇ ಸ್ಪರ್ಧೆ ಖಚಿತ. ಈ ಕ್ಷೇತ್ರ ಬಿಟ್ಟು ಎಲ್ಲಿಯೂ ಹೋಗುವುದಿಲ್ಲ’ ಎಂದು ಸಂಸದೆ ಸುಮಲತಾ, ಮತ್ತೆ ಸ್ಪರ್ಧೆಯ ಸುಳಿವು ನೀಡಿದರು.

ಮದ್ದೂರಿನಲ್ಲಿ ಶನಿವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, ಬಿಜೆಪಿ–ಜೆಡಿಎಸ್ ಮೈತ್ರಿ ಬಗ್ಗೆ ಮಾತನಾಡಲು ಮಾತ್ರ ನಿರಾಕರಿಸಿದರು.

ಕಳೆದ ಲೋಕಸಭೆ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದಿದ್ದ ಅವರು, ವಿಧಾನಸಭೆ ಚುನಾವಣೆಯ ಸಂದರ್ಭ ಬಿಜೆಪಿಯತ್ತ ವಾಲಿದ್ದರು.

ಚುನಾವಣೆಯಲ್ಲಿ ಸ್ಪರ್ಧೆ ಖಚಿತ. ಸಮಯ ಬಂದಾಗ ಮತ್ತೆ ಮಾತನಾಡುತ್ತೇನೆ. ಬಿಜೆಪಿ–ಜೆಡಿಎಸ್ ಮೈತ್ರಿ ಬಗ್ಗೆ ನಾನೇನು ಹೇಳಲಾರೆ
ಸುಮಲತಾ, ಸಂಸದೆ

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಚನ್ನಪಟ್ಟಣದಲ್ಲಿ ನಡೆದ ಪ್ರಚಾರ ಸಭೆಯಲ್ಲೂ ಭಾಗಿಯಾಗಿದ್ದರು. ಅವರ ಅನೇಕ ಬೆಂಬಲಿಗರು ಪಕ್ಷಕ್ಕೆ ಸೇರ್ಪಡೆಗೊಂಡಿದ್ದರು.

‘ಲೋಕಸಭೆ ಚುನಾವಣೆ ಸಂದರ್ಭ ಸುಮಲತಾ ಅವರೂ ಬಿಜೆಪಿ ಸೇರಲಿದ್ದು, ಪಕ್ಷದ ಅಭ್ಯರ್ಥಿಯಾಗಲಿದ್ದಾರೆ’ ಎನ್ನಲಾಗಿತ್ತು. ಆದರೆ ಲೋಕಸಭೆ ಚುನಾವಣೆಯಲ್ಲಿ ರಾಜ್ಯದಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಮಾಡಿಕೊಳ್ಳುತ್ತಿದ್ದು, ಮಂಡ್ಯ ಕ್ಷೇತ್ರ ಜೆಡಿಎಸ್ ಪಾಲಾಗುವ ಸಾಧ್ಯತೆ ಹೆಚ್ಚಿದೆ. ಈ ನಡುವೆ ಸುಮಲತಾ ಮತ್ತೆ ಸ್ಪರ್ಧೆಗೆ ಆಸಕ್ತಿ ತೋರಿರುವುದು ಕುತೂಹಲ ಕೆರಳಿಸಿದೆ.

ಆಪ್ತ ಬಣ ಕಟ್ಟಿದ ವಿಜಯೇಂದ್ರ

ಒಂದನೇ ಪುಟದಿಂದ...

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಅಥವಾ ವಿಧಾನಸಭೆಯ ವಿರೋಧ ಪಕ್ಷದ ನಾಯಕನ ಸ್ಥಾನಕ್ಕಾಗಿ ಆಸೆ ಕಂಗಳಲ್ಲಿ ಕಾಯುತ್ತಿದ್ದ ಶಾಸಕ ವಿ.ಸುನೀಲ್ ಕುಮಾರ್ ಅವರನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿ ಮಾಡಿ ಸಮಾಧಾನಪಡಿಸಲಾಗಿದೆ. ಅವರು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್.ಸಂತೋಷ್ ಗುಂಪಿನಲ್ಲಿ ಗುರುತಿಸಿಕೊಂಡವರು.

ನಳಿನ್ ಕುಮಾರ್ ಕಟೀಲ್ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಬಹುತೇಕ ಮೋರ್ಚಾಗಳು ನಿಷ್ಕ್ರಿಯವಾಗಿದ್ದವು. ಲೆಟರ್ ಹೆಡ್‌ಗಷ್ಟೇ ಅಧ್ಯಕ್ಷರು ಇದ್ದರು ಎಂದು ಬಿಜೆಪಿ ವಲಯದಲ್ಲೇ ಟೀಕೆ ವ್ಯಕ್ತವಾಗಿತ್ತು. ಈ ಮೋರ್ಚಾಗಳಿಗೆ ಹೊಸ ಮುಖಗಳನ್ನು ನೇಮಕ ಮಾಡಲಾಗಿದೆ. ಕಟೀಲ್ ತಂಡದಲ್ಲಿದ್ದ ಯಾರಿಗೂ ಹೊಸ ಪದಾಧಿಕಾರಿಗಳ ಪಟ್ಟಿಯಲ್ಲಿ ಜಾಗ ಸಿಕ್ಕಿಲ್ಲ.

ಯುವ ಮುಖಗಳಾದ ಪಿ.ರಾಜೀವ್, ಜೆ.ಪ್ರೀತಮ್ ಗೌಡ, ಡಿ.ಎಸ್.ಅರುಣ್, ವಿನಯ್ ಬಿದರೆ, ಕ್ಯಾಪ್ಟನ್ ಬ್ರಿಜೇಶ್ ಚೌಟ ಮತ್ತಿತರ ಕಟ್ಟಾಳುಗಳಿಗೆ ಭಾರಿ ಬಡ್ತಿ ನೀಡಲಾಗಿದೆ. ವಿಜಯೇಂದ್ರ ಅವರೇ ಟಿಕೆಟ್ ಕೊಟ್ಟು ಗೆಲ್ಲಿಸಿಕೊಂಡು ಬಂದಿದ್ದ ಧೀರಜ್ ಮುನಿರಾಜು, ಶೈಲೇಂದ್ರ ಬೆಲ್ದಾಳೆ, ಸಿಮೆಂಟ್ ಮಂಜು ಅವರಿಗೆ ಅವಕಾಶಗಳನ್ನು ಕಲ್ಪಿಸಲಾಗಿದೆ.

‘ಆಪರೇಷನ್ ಕಮಲ’ದ ಮೂಲಕ ಪಕ್ಷಕ್ಕೆ ಸೇರ್ಪಡೆಯಾದ ಬೈರತಿ ಬಸವರಾಜ್, ಎನ್. ಮಹೇಶ್, ವರ್ಷದ ಹಿಂದೆಯಷ್ಟೇ ಕಮಲ ಪಾಳಯಕ್ಕೆ ಸೇರಿಕೊಂಡಿದ್ದ ಮಂಡ್ಯದ ಲಕ್ಷ್ಮಿ ಅಶ್ವಿನಿ ಗೌಡ ಅವರೂ ಪದಾಧಿಕಾರಿಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

ವಿಧಾನಸಭಾ ಚುನಾವಣೆಯಲ್ಲಿ ಸೋತ ಮುರುಗೇಶ ನಿರಾಣಿ, ರಾಜುಗೌಡ ನಾಯಕ, ಹರತಾಳು ಹಾಲಪ್ಪ, ರೂಪಾಲಿ ನಾಯಕ್, ಎ.ಎಸ್.ಪಾಟೀಲ ನಡಹಳ್ಳಿ ಸೇರಿದಂತೆ ಒಂಬತ್ತು ಮುಖಂಡರನ್ನು ಪದಾಧಿಕಾರಿಗಳನ್ನಾಗಿ ಮಾಡಿ ಪಕ್ಷ ಸಂಘಟಿಸುವ ಹೊಣೆ ನೀಡಲಾಗಿದೆ.

ಯಾರಿಗೆ ಯಾವ ಸ್ಥಾನ

ರಾಜ್ಯ ಉಪಾಧ್ಯಕ್ಷರು: ಮುರುಗೇಶ ನಿರಾಣಿ, ಬೈರತಿ ಬಸವರಾಜ್, ರಾಜುಗೌಡ ನಾಯಕ್, ಎನ್.ಮಹೇಶ್, ಅನಿಲ್ ಬೆನಕೆ, ಹರತಾಳು ಹಾಲಪ್ಪ, ರೂಪಾಲಿ ನಾಯಕ್, ಡಾ.ಬಸವರಾಜ ಕೇಲಗಾರ, ಮಾಳವಿಕಾ ಅವಿನಾಶ್, ಎಂ. ರಾಜೇಂದ್ರ.

ರಾಜ್ಯ ಕಾರ್ಯದರ್ಶಿಗಳು: ಶೈಲೇಂದ್ರ ಬೆಲ್ದಾಳೆ, ಡಿ.ಎಸ್.ಅರುಣ್, ಬಸವರಾಜ ಮತ್ತಿಮಾಡ, ಸಿ.ಮುನಿರಾಜು, ವಿನಯ್ ಬಿದರೆ, ಕ್ಯಾಪ್ಟನ್ ಬ್ರಿಜೇಶ್ ಚೌಟ, ಶರಣು ತಳ್ಳಿಕೇರಿ, ಲಲಿತಾ ಅನಾಪುರ, ಲಕ್ಷ್ಮಿ ಅಶ್ವಿನ್ ಗೌಡ, ಅಂಬಿಕಾ ಹುಲಿನಾಯ್ಕರ್.

ರಾಜ್ಯ ಖಜಾಂಚಿ	ಸುಬ್ಬನರಸಿಂಹ
ಮೋರ್ಚಾಗಳ ರಾಜ್ಯಾಧ್ಯಕ್ಷರು	
ಮಹಿಳಾ ಮೋರ್ಚಾ	ಸಿ.ಮಂಜುಳಾ
ಯುವ ಮೋರ್ಚಾ	ಧೀರಜ್ ಮುನಿರಾಜು
ಎಸ್‌ಟಿ ಮೋರ್ಚಾ	ಬಂಗಾರು ಹನುಮಂತು
ಎಸ್‌ಸಿ ಮೋರ್ಚಾ	ಎಸ್.ಮಂಜುನಾಥ್ (ಸಿಮೆಂಟ್ ಮಂಜು)
ಹಿಂದುಳಿದ ವರ್ಗಗಳ ಮೋರ್ಚಾ	ರಘು ಕೌಟಿಲ್ಯ
ರೈತ ಮೋರ್ಚಾ	ಎ.ಎಸ್.ಪಾಟೀಲ್ ನಡಹಳ್ಳಿ
ಅಲ್ಪಸಂಖ್ಯಾತ ಮೋರ್ಚಾ	ಅನಿಲ್ ಥಾಮಸ್

ಚಳಿಗಾಲದ ಅತಿಥಿಗಳನ್ನು ವೀಕ್ಷಿಸುವುದೇ ಪಕ್ಷಿಪ್ರಿಯರಿಗೆ ಖುಷಿ

ಮಾಗಡಿ ಕೆರೆಗೆ ಮಂಗೋಲಿಯಾ ಹೆಬ್ಬಾತು

• ಕೆ.ಎಂ.ಸತೀಶ್ ಬೆಳ್ಳಕ್ಕಿ

ಗದಗ: ಶಿರಹಟ್ಟಿ ತಾಲ್ಲೂಕಿನ ಮಾಗಡಿ ಕೆರೆಯಲ್ಲಿ ಈಗ ಪಟ್ಟೆತಲೆ ಹೆಬ್ಬಾತುಗಳದ್ದೇ ಕಲರವ. ಮಂಗೋಲಿಯಾದಿಂದ ಹೆಚ್ಚಿನ ಸಂಖ್ಯೆಯಲ್ಲಿ ಬಂದಿರುವ ಈ ಪಕ್ಷಿಗಳ ವೀಕ್ಷಣೆ ಮತ್ತು ಅಧ್ಯಯನಕ್ಕೆಂದೇ ವಿದ್ಯಾರ್ಥಿಗಳು ಮತ್ತು ಪಕ್ಷಿ ತಜ್ಞರು ಬರತೊಡಗಿದ್ದಾರೆ.

ಮಂಗೋಲಿಯಾದಲ್ಲಿ ನವೆಂಬರ್‌ನಿಂದ ಚಳಿಗಾಲ ಆರಂಭಗೊಂಡಿದ್ದು, ಹಿಮ ಜಾಸ್ತಿ ಬೀಳುವ ಕಾರಣ ಆಹಾರ ಸಿಗುವುದಿಲ್ಲ. ಹೀಗಾಗಿ ಅಲ್ಲಿನ ಪಟ್ಟೆತಲೆ ಹೆಬ್ಬಾತುಗಳ ವಲಸೆ ಆರಂಭವಾಗುತ್ತದೆ. ಅವುಗಳಿಗೆ ಶೇಂಗಾ ಇಷ್ಟದ ತಿನಿಸು. ಮಾಗಡಿ ಕೆರೆ ಸುತ್ತಮುತ್ತಲಿನ ಹತ್ತಾರು ಕಿ.ಮೀ. ವ್ಯಾಪ್ತಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಶೇಂಗಾ ಬೆಳೆಯುವುದರಿಂದ ಅವು ಈ ಸ್ಥಳವನ್ನೇ ಇಷ್ಟಪಡುತ್ತವೆ.

‘ಸುಮಾರು 7 ಸಾವಿರ ಕಿ.ಮೀ. ಕ್ರಮಿಸಿ ಬರುವ ಹೆಬ್ಬಾತುಗಳು ಮಾರ್ಚ್ ಎರಡನೇ ವಾರದವರೆಗೆ ಇರುತ್ತವೆ. ಆಹಾರ ಹುಡುಕುತ್ತ ದೂರದವರೆಗೆ ಹಾರುವ ಅವು ಹೊಟ್ಟೆ ತುಂಬಿದ ಬಳಿಕ ಕೆರೆಗೆ ಮರಳುತ್ತವೆ. ಅವು ಸಂತಾನೋತ್ಪತ್ತಿಗೆ ಅಲ್ಲ, ಚಳಿಗಾಲದ ಅತಿಥಿಗಳಾಗಿ ಮಾತ್ರ ಇಲ್ಲಿ ಬರುವುದು ವಿಶೇಷ’ ಎಂದು ಶಿರಹಟ್ಟಿ ವಲಯ ಅರಣ್ಯಾಧಿಕಾರಿ ರಾಮಪ್ಪ ಪೂಜಾರ ‘ಪ್ರಜಾವಾಣಿ’ಗೆ ತಿಳಿಸಿದರು.

‘ನಸುಕಿನ 5.30ಕ್ಕೆ ಆಹಾರ ಹುಡುಕುತ್ತ ಈ ಪಕ್ಷಿಗಳು 20ರಿಂದ 80 ಕಿ.ಮೀ. ದೂರ ಹಾರುತ್ತವೆ. ಬೆಳಿಗ್ಗೆ 10ಕ್ಕೆ ಕೆರೆಗೆ ಮರಳುವ ಅವು 4 ಗಂಟೆವರೆಗೆ ವಿರಮಿಸುತ್ತವೆ. ಸಂಜೆ ಮತ್ತೆ ಅವು ಅಹಾರ ಹುಡುಕುತ್ತ ಹೊರಡುತ್ತವೆ. ಈ ಬಾರಿ ಅಂದಾಜು ಸುಮಾರು 7 ಸಾವಿರದಷ್ಟು ಪಕ್ಷಿಗಳು ಬಂದಿವೆ’ ಎಂದರು.

‘ಜನವರಿಯಲ್ಲಿ ಬೇರೆ ಬೇರೆ ದೇಶಗಳಿಂದ ವಿವಿಧ ಜಾತಿಯ ಪಕ್ಷಿಗಳು ಮಾಗಡಿ ಕೆರೆಗೆ ಬರುತ್ತವೆ. ಅವುಗಳ ಚೆಂದದ ಚಿತ್ರಗಳನ್ನು ಸೆರೆ ಹಿಡಿಯಲು ರಾಜ್ಯದ ವಿವಿಧೆಡೆಯಿಂದ ಛಾಯಾಗ್ರಾಹಕರು ಬರುತ್ತಾರೆ. ಹಲವು ದಿನಗಳವರೆಗೆ ಅವರು ಇಲ್ಲಿಯೇ ತಂಗುತ್ತಾರೆ’ ಎಂದು ಪಕ್ಷಿ ವೀಕ್ಷಕ ಸೋಮಣ್ಣ ಪಶುಪತಿಹಾಳ ತಿಳಿಸಿದರು.

ಮಾಗಡಿ ಕೆರೆಯಲ್ಲಿ ಬೀಡು ಬಿಟ್ಟಿರುವ ಪಟ್ಟೆತಲೆ ಹೆಬ್ಬಾತು

ವಿದ್ಯಾರ್ಥಿಗಳಿಗೆ ಪಕ್ಷಿಪಾಠ

ಪರಿಸರದ ಮಹತ್ವ, ವಲಸೆ ಹಕ್ಕಿಗಳ ಆಸಕ್ತಿಕರ ಅಂಶಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಲೆಂದೇ ಅರಣ್ಯ ಇಲಾಖೆ ವಿಶೇಷ ಆಸ್ಥೆ ವಹಿಸಿದೆ. ಅರಣ್ಯ ಇಲಾಖೆ ಸಿಬ್ಬಂದಿಯೇ ವಿದ್ಯಾರ್ಥಿಗಳನ್ನು ಮಾಗಡಿ ಕೆರೆಗೆ ಕರೆ ತಂದು ಅವರಿಗೆ ಪಕ್ಷಿಗಳ ಕುರಿತು ಮಾಹಿತಿ ನೀಡುತ್ತಾರೆ. ಈವರೆಗೆ 1,700ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮಾಗಡಿ ಕೆರೆಗೆ ಭೇಟಿ ನೀಡಿದ್ದಾರೆ. ಹಲವರು ಚಿತ್ರಗಳನ್ನು ಕ್ಲಿಕ್ಕಿಸಿಕೊಂಡಿದ್ದಾರೆ. ಪಕ್ಷಿವೀಕ್ಷಕರು ಸಹ ಅರಣ್ಯ ಇಲಾಖೆಯ ಸಹಯೋಗದಲ್ಲಿ ಮಾಹಿತಿ ಸಂಗ್ರಹಣಾ ಕಾರ್ಯದಲ್ಲಿ ನಿರತರಾಗಿದ್ದಾರೆ.

ಮಾಗಡಿ ಕೆರೆ ಸುತ್ತಮುತ್ತಲಿನ ಸ್ಥಳವು ದೇಶಿ, ವಿದೇಶಿ ಪಕ್ಷಿಗಳಿಗೆ ಅಚ್ಚುಮೆಚ್ಚು. ಅವನ್ನು ನೋಡಲು ಬರುವ ಪಕ್ಷಿ ವೀಕ್ಷಕರಿಗೆ, ವಿದ್ಯಾರ್ಥಿಗಳಿಗೆ ನಾವು ನೆರವಾಗುತ್ತೇವೆ
ರಾಮಪ್ಪ ಪೂಜಾರ
ವಲಯ ಅರಣ್ಯಾಧಿಕಾರಿ, ಶಿರಹಟ್ಟಿ

ಕೇರಳ: ಡಿಜಿಪಿ ಕಚೇರಿಗೆ ಕಾಂಗ್ರೆಸ್ ಮೆರವಣಿಗೆ ವೇಳೆ ಜಲಫಿರಂಗಿ ಪ್ರಯೋಗ

ಹಿಂಸಾರೂಪಕ್ಕೆ ತಿರುಗಿದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಪ್ರತಿಪಕ್ಷ ಕಾಂಗ್ರೆಸ್ ನಾಯಕರು ಶನಿವಾರ ಇಲ್ಲಿ ನಡೆಸಿದ ಪ್ರತಿಭಟನಾ ಮೆರವಣಿಗೆ ವೇಳೆ ಪೊಲೀಸರು ಅಶ್ರುವಾಯು ಷೆಲ್ ಸಿಡಿಸಿದ್ದರಿಂದ, ಕೆಲವು ಮುಖಂಡರು ಉಸಿರಾಟದ ಸಮಸ್ಯೆ ಎದುರಿಸಿ ಅಸ್ವಸ್ಥರಾದರು.

ರಾಜ್ಯ ಸರ್ಕಾರ ಆರಂಭಿಸಿರುವ 'ನವ ಕೇರಳ ಸದಸ್' ಜನಸಂಪರ್ಕ ಅಭಿಯಾನದ ವೇಳೆ ಪ್ರತಿಭಟನೆ ನಡೆಸಿದ್ದ ಪಕ್ಷದ ಕಾರ್ಯಕರ್ತರ ವಿರುದ್ಧ ಪೊಲೀಸರು ದೌರ್ಜನ್ಯ ನಡೆಸಿದ್ದಾರೆ ಎಂದು ಆರೋಪಿಸಿ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯು (ಕೆಪಿಸಿಸಿ) ಡಿಜಿಪಿ ಕಚೇರಿಗೆ ಮೆರವಣಿಗೆ ಆಯೋಜಿಸಿತ್ತು.

ಕೇರಳ ಕಾಂಗ್ರೆಸ್ ಅಧ್ಯಕ್ಷ ಕೆ.ಸುಧಾಕರನ್, ವಿಧಾನಸಭೆ ವಿರೋಧ ಪಕ್ಷದ ನಾಯಕ ವಿ.ಡಿ.ಸತೀಶನ್, ಹಿರಿಯ ನಾಯಕರಾದ ರಮೇಶ್ ಚೆನ್ನಿತ್ತಲ, ತಿರುವನಂತಪುರ ಕ್ಷೇತ್ರದ ಸಂಸದ ಶಶಿ ತರೂರ್ ಅವರು ಪಾಲ್ಗೊಂಡಿದ್ದರು.

ತಿರುವನಂತಪುರದಲ್ಲಿ ಶನಿವಾರ ಪ್ರತಿಭಟನೆ ನಡೆಸುತ್ತಿದ್ದ ಕಾಂಗ್ರೆಸ್ ಕಾರ್ಯಕರ್ತರನ್ನು ಜಲಫಿರಂಗಿ ಪ್ರಯೋಗಿಸಿ ಚದುರಿಸಲಾಯಿತು — ಪಿಟಿಐ ಚಿತ್ರ

ಸುಧಾಕರನ್ ಅವರು ಪ್ರತಿಭಟನಾ ಮೆರವಣಿಗೆಗೆ ಚಾಲನೆ ನೀಡಿದ ಬಳಿಕ ಇತರ ಮುಖಂಡರು ಮಾತನಾಡುವ ಸಂದರ್ಭದಲ್ಲಿ ಪೊಲೀಸರು ಸಿಡಿಸಿದ ಅಶ್ರುವಾಯು ಷೆಲ್‌ವೊಂದು ವೇದಿಕೆಯ ಬಳಿ ಬಂದು ಬಿದ್ದಿದೆ. ಇದರಿಂದ ಸುಧಾಕರನ್ ಮತ್ತು ಚೆನ್ನಿತ್ತಲ ಅವರು ಉಸಿರಾಟದ ತೊಂದರೆ ಅನುಭವಿಸಿ ಅಸ್ವಸ್ಥರಾದರು. ಪಕ್ಷದ ಕಾರ್ಯಕರ್ತರು ಅವರನ್ನು ತಕ್ಷಣವೇ ಸಮೀಪದ ಆಸ್ಪತ್ರೆಗೆ ಕರೆದೊಯ್ದರು.

ಆ ಬಳಿಕ ಪ್ರತಿಭಟನೆ ಹಿಂಸಾರೂಪಕ್ಕೆ ತಿರುಗಿತು. ಕಾಂಗ್ರೆಸ್ ಕಾರ್ಯ ಕರ್ತರು ಪೊಲೀಸರತ್ತ ಕಲ್ಲು ತೂರಾಟ ನಡೆಸಿದರು. ಪೊಲೀಸರು ಅಶ್ರುವಾಯು ಷೆಲ್ ಸಿಡಿಸಿ, ಜಲಫಿರಂಗಿ ಪ್ರಯೋಗಿಸಿ ಪ್ರತಿಭಟನಕಾರರನ್ನು ಚದುರಿಸಿದರು.

> **ಪಕ್ಷದ ಮುಖಂಡರ ಮೇಲೆ ಯಾರ ಸೂಚನೆಯಂತೆ 'ಈ ಪೂರ್ವಯೋಜಿತ ದಾಳಿ' ನಡೆದಿದೆ ಎಂಬುದನ್ನು ತಿಳಿಯಬೇಕಿದೆ**
> **ಶಶಿ ತರೂರ್** ಕಾಂಗ್ರೆಸ್ ಸಂಸದ

ಪಕ್ಷದ ನಾಯಕರ ಜೀವಕ್ಕೆ ಅಪಾಯ ತಂದೊಡ್ಡಲು ಪೊಲೀಸರು ಉದ್ದೇಶಪೂರ್ವಕವಾಗಿ ಅಶ್ರುವಾಯು ಷೆಲ್ ಸಿಡಿಸಿದ್ದಾರೆ ಎಂದು ಕಾಂಗ್ರೆಸ್ ಮುಖಂಡರು ಆರೋಪಿಸಿದ್ದಾರೆ.

'ಪ್ರತಿಭಟನೆ ಶಾಂತಿಯುವಾಗಿ ನಡೆಯುತ್ತಿತ್ತು. ಪೊಲೀಸರು ಯಾವುದೇ ಪ್ರಚೋದನೆ ಇಲ್ಲದೆಯೇ ನಮ್ಮ ಮೇಲೆ ದಾಳಿ ನಡೆಸಿದ್ದಾರೆ' ಎಂದು ಸುಧಾಕರನ್ ಅವರು ಆಸ್ಪತ್ರೆಯ ಬಳಿ ಮಾಧ್ಯಮದವರಿಗೆ ತಿಳಿಸಿದರು.

'ನಮ್ಮ ನಾಯಕರ ಮೇಲೆ ಇಂತಹ 'ದಾಳಿ' ನಡೆದಿರುವುದು ಕೇರಳದ ಇತಿಹಾಸದಲ್ಲಿ ಇದೇ ಮೊದಲು. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಆಣತಿಯಂತೆ ಪೊಲೀಸರು ಕಾರ್ಯನಿರ್ವಹಿಸುತ್ತಿದ್ದಾರೆ' ಎಂದು ಸತೀಶನ್ ಹರಿಹಾಯ್ದರು.

ವಿವೇಕ್ ಬಿಂದ್ರಾ ವಿರುದ್ಧ ಎಫ್‌ಐಆರ್

ನೋಯಿಡಾ: ಪತ್ನಿಗೆ ಕಿರುಕುಳ ನೀಡಿದ ಆರೋಪದಡಿ ಉದ್ಯಮಿ ವಿವೇಕ್ ಬಿಂದ್ರಾ ವಿರುದ್ಧ ಎಫ್‌ಐಆರ್ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿವೇಕ್ ಬಿಂದ್ರಾ

'ಬಿಂದ್ರಾ ಪತ್ನಿ ಯಾನಿಕ ಅವರ ಸಹೋದರ ವೈಭವ್ ಕ್ವತ್ರ ಅವರು ನೀಡಿದ್ದ ದೂರಿನ ಆಧಾರದಲ್ಲಿ ಎ ಫ್ ಐ ಆ ರ್ ದಾಖಲಿಸಲಾಗಿದ್ದು, ಪ್ರಕರಣದ ತನಿಖೆ ನಡೆಸಲಾಗುತ್ತಿದೆ' ಎಂದು ಎಸಿಪಿ ರಜನೀಶ್ ವರ್ಮ ತಿಳಿಸಿದ್ದಾರೆ. 'ಡಿ.7ರಂದು ವಿವೇಕ್ ಬಿಂದ್ರಾ ನನ್ನ ತಾಯಿಯೊಂದಿಗೆ ವಾದ ಮಾಡುತ್ತಿದ್ದರು. ಈ ವೇಳೆ ಮಧ್ಯಪ್ರವೇಶಿಸಿದ ಯಾನಿಕಳನ್ನು ಬಿಂದ್ರಾ ಅವರು ಕೋಣೆಯೊಳಗೆ ಕೂಡಿ ಹಾಕಿ ಅವಳ ಮೇಲೆ ಹಲ್ಲೆ ನಡೆಸಿದ್ದಾರೆ. ಇದರಿಂದ ಅವಳು ಗಾಯಗೊಂಡಿದ್ದಾಳೆ' ಎಂದು ವೈಭವ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

₹50 ಸಾವಿರದ ಚೆಕ್‌ಗಳ ಹಿಂದಿರುಗಿಸಲು ನಿರ್ಧಾರ

ಡೆಹ್ರಾಡೂನ್ (ಪಿಟಿಐ): ಸಿಲ್ಕ್ಯಾರಾ ಸುರಂಗದಲ್ಲಿ ಸಿಲುಕಿದ್ದ 41 ಕಾರ್ಮಿಕರನ್ನು ಹೊರ ತರುವಲ್ಲಿ ಪ್ರಧಾನ ಪಾತ್ರ ನಿರ್ವಹಿಸಿದ್ದಕ್ಕೆ ಪ್ರತಿಯಾಗಿ ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ನೀಡಿದ್ದ ತಲಾ ₹50 ಸಾವಿರದ ಚೆಕ್ ಅನ್ನು ನಗದೀಕರಿಸಿಕೊಳ್ಳಲು ರ್‍ಯಾಟ್-ಹೋಲ್ ಮೈನರ್‌ಗಳು ನಿರಾಕರಿಸಿದ್ದಾರೆ.

ಸರ್ಕಾರದಿಂದ ಗೌರವಕ್ಕೆ ಪಾತ್ರವಾಗಿದ್ದ 12 ಮಂದಿ ರ್‍ಯಾಟ್-ಹೋಲ್ ಮೈನರ್‌ಗಳೂ ಚೆಕ್ ಅನ್ನು ಹಿಂದಿರುಗಿಸಲು ನಿರ್ಧರಿಸಿದ್ದಾರೆ.

'ಕಠಿಣ ಸ್ಥಿತಿಯಲ್ಲಿ ನಾವು ಕೆಲಸ ಮಾಡಿದ್ದೇವೆ. ಯಂತ್ರಗಳ ಸಹಾಯದಿಂದ ರಕ್ಷಣಾ ಕಾರ್ಯ ನಡೆಸಿದರೂ ಕಾರ್ಮಿಕರ ಬಳಿಗೆ ಹೋಗಲು ಸಾಧ್ಯವಾಗದ ಸಂದರ್ಭದಲ್ಲಿ ನಾವು ಕೈಯಲ್ಲಿ ಈ ಕೆಲಸ ಮಾಡಿ ಸಾಧಿಸಿದ್ದೆವು. ನಮ್ಮ ಪ್ರಾಣವನ್ನು ಪಣವಾಗಿಟ್ಟು, ಪ್ರತಿಫಲಾಪೇಕ್ಷೆ ಇಲ್ಲದೇ ಸುರಂಗ ಕೊರೆದೆವು. ನಮ್ಮ ಈ ಕೆಲಸಕ್ಕೆ ಬಹುಮಾನ ನೀಡಿದ ಮುಖ್ಯಮಂತ್ರಿ-ನಡೆಯನ್ನು ಗೌರವಿಸುತ್ತೇವೆ. ಆದರೆ, ಅವರು ಘೋಷಿಸಿದ ಮೊತ್ತ ನಮಗೆ ತೃಪ್ತಿ ನೀಡಿಲ್ಲ' ಎಂದು ರ್‍ಯಾಟ್-ಹೋಲ್ ಮೈನರ್‌ಗಳ ತಂಡ ಮುನ್ನಡೆಸಿದ್ದ ವಕೀಲ್ ಹಸನ್ ತಿಳಿಸಿದ್ದಾರೆ.

'ನಮಗೆ ಚೆಕ್ ಕೊಟ್ಟ ದಿನವೇ ನಮ್ಮ ಅತೃಪ್ತಿಯನ್ನು ಸಿ.ಎಂಗೆ ತಿಳಿಸಿದ್ದೆವು. ಕೆಲವೇ ದಿನಗಳಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳುವುದಾಗಿ ಅಧಿಕಾರಿಗಳು ಹೇಳಿದ್ದರು. ಆದರೆ ವಾಗ್ದಾನ ಈವರೆಗೆ ಈಡೇರಿಲ್ಲ. ಹೀಗಾಗಿ ಚೆಕ್ ಮರಳಿಸುತ್ತಿದ್ದೇವೆ' ಎಂದು ಹಸನ್ ತಿಳಿಸಿದ್ದಾರೆ.

'ನಾವು ನಿರ್ವಹಿಸಿದ ಕಾರ್ಯಕ್ಕೆ ಪ್ರತಿಯಾಗಿ ನಮಗೆ ನೌಕರಿ ಅಥವಾ ಸ್ವಂತ ಮನೆ ಒದಗಿಸಿಕೊಡಬೇಕು' ಎಂದು ಅವರು ಒತ್ತಾಯಿಸಿದ್ದಾರೆ.

'ಅಪರಾಧ ನಡೆದ ರಾಜ್ಯದಲ್ಲೇ ಕ್ಷಮಾದಾನ ನಿರ್ಧರಿಸಬೇಕು'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಅಪರಾಧ ಪ್ರಕರಣದಲ್ಲಿ ಅಸಾಧಾರಣ ಕಾರಣದಿಂದ ವಿಚಾರಣೆಯು ಬೇರೊಂದು ರಾಜ್ಯಕ್ಕೆ ವರ್ಗಾವಣೆಯಾದರೂ ಅಪರಾಧಿಗಳಿಗೆ ಶಿಕ್ಷೆಯ ಕ್ಷಮಾದಾನ ಅರ್ಜಿಯ ಬಗ್ಗೆ ಅಪರಾಧಾ ನಡೆದ ರಾಜ್ಯದಲ್ಲೇ ನಿರ್ಧಾರ ತೆಗೆದುಕೊಳ್ಳಬೇಕು ಎನ್ನುವುದು ಬಿಲ್ಕಿಸ್ ಬಾನೊ ಪ್ರಕರಣದಲ್ಲಿ ಸ್ಪಷ್ಟವಾಗಿದೆ' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

2003ರಲ್ಲಿ ನಡೆದ ಕವಯತ್ರಿ ಮಧುಮಿತಾ ಶುಕ್ಲಾ ಕೊಲೆ ಪ್ರಕರಣದ ಅಪರಾಧಿಯೊಬ್ಬರು ಸಲ್ಲಿಸಿದ್ದ ಮನವಿಯನ್ನು ಪರಿಗಣಿಸಿದ ನ್ಯಾಯಮೂರ್ತಿಗಳಾದ ಅನಿರುದ್ಧ ಬೋಸ್ ಮತ್ತು ಅಗಸ್ಟಿನ್ ಜಾರ್ಜ್ ಮಸಿಹ್ ಅವರಿದ್ದ ಪೀಠವು 'ರಾಧೇಶ್ಯಾಮ್ ಭಗವಾನದಾಸ್ ಶಾ ಅಲಿಯಾಸ್ ಲಾಲಾ ವಕೀಲ್ ವರ್ಸಸ್ ಗುಜರಾತ್ ಮತ್ತು ಇನ್ನೊಂದು ರಾಜ್ಯ (2022)' ಪ್ರಕರಣದಲ್ಲಿ ಸಮನ್ವಯ ಪೀಠ ನೀಡಿದ ತೀರ್ಪು ಅನ್ನು ಉಲ್ಲೇಖಿಸಿ ಈ ರೀತಿ ಹೇಳಿದೆ.

ಅರ್ಜಿದಾರ ರೋಹಿತ್ ಚತುರ್ವೇದಿ ಅವರು ಉತ್ತರಾಖಂಡ ಸರ್ಕಾರವು ತಮ್ಮ ಕ್ಷಮಾದಾನ ಅರ್ಜಿ ತಿರಸ್ಕರಿಸಿದ್ದರಿಂದ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದು, ಉತ್ತರ ಪ್ರದೇಶದಲ್ಲಿ ಅಪರಾಧ ನಡೆದಿರುವುದರಿಂದ ಕ್ಷಮಾದಾನ ಅರ್ಜಿಯನ್ನು ಆ ರಾಜ್ಯವೇ ಪರಿಗಣಿಸುವಂತೆ ವಾದಿಸಿದ್ದಾರೆ.

ಉತ್ತರ ಪ್ರದೇಶದ ಮಾಜಿ ಸಚಿವ ಅಮರಮಣಿ ತ್ರಿಪಾಠಿ ಅವರು ಭಾಗಿಯಾದ ಮಧುಮಿತಾ ಶುಕ್ಲಾ ಕೊಲೆ ಪ್ರಕರಣದ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಲಖನೌದಿಂದ ಡೆಹ್ರಾಡೂನ್‌ಗೆ ವರ್ಗಾಯಿಸಿತ್ತು. ವಿಚಾರಣಾ ನ್ಯಾಯಾಲಯ ಆರೋಪಿಗಳಿಗೆ ಶಿಕ್ಷೆ ವಿಧಿಸಿದೆ. ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್ ಶಿಕ್ಷೆಯನ್ನು ಎತ್ತಿ ಹಿಡಿದಿವೆ.

'ಮೂರು ವಾರಗಳಲ್ಲಿ ಉತ್ತರ ಪ್ರದೇಶ ಸರ್ಕಾರಕ್ಕೆ ಕಡತ ಕಳುಹಿಸುವಂತೆ ಉತ್ತರಾಖಂಡ ಸರ್ಕಾರಕ್ಕೆ ಪೀಠ ಸೂಚಿಸಿದೆ. ಅಲ್ಲದೆ, ಉತ್ತರಾಖಂಡ ಸರ್ಕಾರದ ನಿರ್ಧಾರದಿಂದ ಪ್ರಭಾವಿತವಾಗದೆ ಎಂಟು ವಾರಗಳೊಳಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳುವಂತೆಯೂ ಉತ್ತರ ಪ್ರದೇಶ ಸರ್ಕಾರಕ್ಕೆ ಆದೇಶಿಸಿದೆ.

ಶ್ರಮಜೀವಿ ಎಕ್ಸ್‌ಪ್ರೆಸ್ ಸ್ಫೋಟ: ಇಬ್ಬರು ದೋಷಿ

ಜೌನ್ಪುರ (ಉತ್ತರ ಪ್ರದೇಶ) (ಪಿಟಿಐ): 2005ರ ಶ್ರಮಜೀವಿ ಎಕ್ಸ್‌ಪ್ರೆಸ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿನ ಸ್ಥಳೀಯ ನ್ಯಾಯಾಲಯ ಇಬ್ಬರನ್ನು ದೋಷಿ ಎಂದು ಆದೇಶಿಸಿದೆ.

ನಫಿಕುಲ್ ವಿಶ್ವಾಸ್ ಮತ್ತು ಹಿಲಾಲ್ ಅವರು ದೋಷಿಗಳೆಂದು ಆದೇಶಿಸಿದ ಹೆಚ್ಚುವರಿ ಜಿಲ್ಲಾ ಮತ್ತು ಮ್ಯಾಜಿಸ್ಟ್ರೇಟ್ ನ್ಯಾಯಾಧೀಶ ರಾಜೇಶ್ ರೈ, ಶಿಕ್ಷೆಯ ಪ್ರಮಾಣವನ್ನು 2024ರ ಜ. 2ರಂದು ಪ್ರಕಟಿಸುವುದಾಗಿ ಹೇಳಿದ್ದಾರೆ ಎಂದು ಜಿಲ್ಲಾ ಸರ್ಕಾರಿ ವಕೀಲ ವೀರೇಂದ್ರ ಮೌರ್ಯ ತಿಳಿಸಿದ್ದಾರೆ.

2005ರಲ್ಲಿ ನಡೆದಿದ್ದ ರೈಲು ಸ್ಫೋಟದಲ್ಲಿ 14 ಜನರು ಮೃತಪಟ್ಟಿದ್ದರು. 62 ಜನರು ಗಾಯಗೊಂಡಿದ್ದರು.

'ಜೌನ್ಪುರ ನಿಲ್ದಾಣದಲ್ಲಿ ಇಬ್ಬರು ಯುವಕರು ರೈಲು ಹತ್ತಿದ್ದರು. ಅವರ ಬಳಿ ಬಿಳಿ ಬಣ್ಣದ ಸೂಟ್‌ಕೇಸ್ ಇತ್ತು. ಕೆಲವೇ ಸಮಯದ ಬಳಿಕ ಅವರಿಬ್ಬರೂ ರೈಲಿನಿಂದ ಹಾರಿ ಓಡಿ ಹೋದರು. ಆಗ ಅವರ ಬಳಿ ಸೂಟ್‌ಕೇಸ್ ಇರಲಿಲ್ಲ' ಎಂದು ಸಾಕ್ಷಿಗಳು ಹೇಳಿದ್ದರು.

ಜ.6ರಂದು ಎಲ್1 ಕಕ್ಷೆಗೆ ಆದಿತ್ಯ: ಇಸ್ರೊ

ಅಹಮದಾಬಾದ್ (ಪಿಟಿಐ): ಸೂರ್ಯನ ಅಧ್ಯಯನ ಉದ್ದೇಶದ ಭಾರತದ ಮಹತ್ವಾಕಾಂಕ್ಷಿ 'ಆದಿತ್ಯ –ಎಲ್1' ಉಪಗ್ರಹವು ಜ.6ರಂದು ತನ್ನ ಗಮ್ಯ ಸ್ಥಾನವಾದ ಲಗ್ರಾಂಜಿಯನ್ ಬಿಂದು (ಎಲ್1) ತಲುಪಲಿದೆ ಎಂದು ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ತಿಳಿಸಿದರು.

ಎಲ್ 1 ಬಿಂದು ಭೂಮಿಯಿಂದ 15 ಲಕ್ಷ ಕಿ.ಮೀ ದೂರದಲ್ಲಿದೆ. ಈ ಉಪಗ್ರಹವನ್ನು ಸೆ.2ರಂದು ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಉಡಾವಣೆ ಮಾಡಲಾಗಿತ್ತು.

ಸರ್ಕಾರೇತರ ಸಂಘಟನೆಯಾದ 'ವಿಜ್ಞಾನ ಭಾರತಿ' ಆಯೋಜಿಸಿದ್ದ ಭಾರತೀಯ ವಿಜ್ಞಾನ ಸಮ್ಮೇಳನದ ಬಳಿಕ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಎಸ್.ಸೋಮನಾಥ್ ಅವರು, 'ಉಪಗ್ರಹವು ಎಲ್1 ಬಿಂದು ತಲುಪಿದ ನಂತರ ಎಂಜಿನ್‌ನ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗುವುದು. ಹೀಗೆ ಮಾಡುವುದರಿಂದ ಉಪಗ್ರಹವು ಮುಂದೆ ಸಾಗದೆ ಈ ಬಿಂದುವಿನಲ್ಲಿಯೇ ನೆಲೆಗೊಳ್ಳುತ್ತದೆ ಮತ್ತು ಅದರ ಸುತ್ತಲೇ ಸುತ್ತುತ್ತಿರುತ್ತದೆ' ಎಂದು ತಿಳಿಸಿದರು.

'ಎಲ್ 1 ಬಿಂದುವಿನಲ್ಲಿ ನೆಲೆಗೊಂಡ ನಂತರದ ಐದು ವರ್ಷಗಳ ಕಾಲ ಉಪಗ್ರಹವು ಅಲ್ಲೇ ಸೂರ್ಯನ ಅಧ್ಯಯನ ಮಾಡಲಿದೆ. ಭಾರತಕ್ಕೆ ಮಾತ್ರವಲ್ಲದೆ ಇಡೀ ಜಗತ್ತಿಗೆ ಅಗತ್ಯವಿರುವ ಮಾಹಿತಿಯನ್ನು ಕಲೆಹಾಕಲಿದೆ' ಎಂದರು.

ಇದೇ ಸಂದರ್ಭದಲ್ಲಿ, 'ಪ್ರಧಾನಿ ನರೇಂದ್ರ ಮೋದಿ ಅವರ ಸಲಹೆಯಂತೆ, ಭಾರತೀಯ ಬಾಹ್ಯಾಕಾಶ ಕೇಂದ್ರ ಸ್ಥಾಪಿಸುವ ಬಗ್ಗೆ ಇಸ್ರೊ ಚಿಂತನೆ ನಡೆಸುತ್ತಿದೆ' ಎಂದೂ ಹೇಳಿದರು.

ನಿಧನ



ಮನಂದಿ ನಂಜುಂಡ ಶೆಟ್ಟಿ

25 ಮೇ 1929 – 23 ಡಿಸೆಂಬರ್ 2023

ಇವರು ದಿನಾಂಕ: 23ನೇ ಡಿಸೆಂಬರ್ 2023 ರಂದು ಸಂಜೆ 7 ಗಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಶ್ರೀಯುತರು ಅಸಾಧಾರಣ ಪರೋಪಕಾರಿಗಳಾಗಿದ್ದು, ತಮ್ಮ ಇಡೀ ಜೀವಿತಾವಧಿಯನ್ನು ಸಮಾಜದ ವಿವಿಧ ಸಂಘ ಸಂಸ್ಥೆಗಳು, ದತ್ತಿಗಳು, ಧಾರ್ಮಿಕ ಟ್ರಸ್ಟ್‌ಗಳು ಸಮಾಜ ಸೇವೆಗಾಗಿ ಮುಡಿಪಾಗಿಟ್ಟಿದ್ದರು.

ಮಾರ್ಗದರ್ಶಕರು: ಕರ್ನಾಟಕ ಆರ್ಯ ವೈಶ್ಯ ಛಾರಿಟಬಲ್ ಟ್ರಸ್ಟ್ । ವಾಸವಿ ಹಾಸ್ಟೆಲ್ । ವಾಸವಿ ವಿದ್ಯಾನಿಕೇತನ ಸಂಸ್ಥೆ । ಕಾಶಿ ಅನ್ನಪೂರ್ಣ ಟ್ರಸ್ಟ್:– ಕರ್ನಾಟಕ, ತಿರುಪತಿ, ವಾರಣಾಸಿ, ಶಿರಡಿ ಮತ್ತು ಹರಿದ್ವಾರ ।
ವಾಸವಿ ದೇವಸ್ಥಾನ, ಚಾಮರಾಜಪೇಟೆ । ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನ, ವಿ.ವಿ.ಪುರಂ.
ಟ್ರಸ್ಟಿಗಳು: ಲಯನ್ಸ್ ಕ್ಲಬ್, ಬೆಂಗಳೂರು ಪಶ್ಚಿಮ । ಆಸಕ್ತ ಪೋಷಕ ಸಭಾ । ಆರ್.ವಿ. ಸಮೂಹ ವಿದ್ಯಾಸಂಸ್ಥೆಗಳು ।
ಪ್ರಮುಖ ದಾನಿಗಳು: ರಂಗದೊರೈ ಹಾಸ್ಪಿಟಲ್ಸ್ । ಶಂಕರ ಕ್ಯಾನ್ಸರ್ ಫೌಂಡೇಷನ್ । ವಾಸವಿ ವಿದ್ಯಾನಿಕೇತನ ಟ್ರಸ್ಟ್ । ವಿಕ್ಟೋರಿಯಾ ಆಸ್ಪತ್ರೆ ಧರ್ಮಶಾಲಾ ಟ್ರಸ್ಟ್ । ಕಿದ್ವಾಯಿ ಮೆಮೋರಿಯಲ್ ಆಸ್ಪತ್ರೆ
ಮಾಜಿ ಅಧ್ಯಕ್ಷರು: ವಾಸವಿ ವಿದ್ಯಾ ಸಂಸ್ಥೆ । ಮಾಜಿ ನಿರ್ದೇಶಕರು: ಎಫ್‌ಕೆಸಿಸಿಐ, ಬೆಂಗಳೂರು
ನಿರ್ದೇಶಕರು: ಕರ್ನಾಟಕ ಆರ್ಯ ವೈಶ್ಯ ಮಹಾಸಭಾ । ದಿ ಬೆಂಗಳೂರು ವೆಸ್ಟ್ ಲಯನ್ಸ್ । ಶ್ರೀ ವಿದ್ಯಾಸಾಗರ್ ಓಸ್ವಾಲ್ ಇನ್‌ಸ್ಟಿಟ್ಯೂಟ್ ಆಫ್ ಅಪ್ತಮಾಲಾಜಿ ಹಾಗೂ ಇನ್ನೂ ಅನೇಕ ಸಂಘ ಸಂಸ್ಥೆಗಳಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.
ಮೃತರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ಪ್ರಾರ್ಥಿಸೋಣ. ಓಂ ಶಾಂತಿ
ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕಾಗಿ ಇವರ ಸ್ವಗೃಹ ನಂ. 51, ಶಿಲ್ಪಶ್ರೀ 30ನೇ ಅಡ್ಡರಸ್ತೆ, 7ನೇ ಬ್ಲಾಕ್, ಜಯನಗರ, ಬೆಂಗಳೂರು–560 011. ಇಲ್ಲಿ ಇರಿಸಲಾಗುವುದು.
ಮೃತರ ಅಂತ್ಯಕ್ರಿಯೆಯನ್ನು ಭಾನುವಾರ, ದಿನಾಂಕ: 24ನೇ ಡಿಸೆಂಬರ್ 2023ರಂದು ನಡೆಸಲಾಗುವುದು.
ಇಂತಿ ದುಃಖತಪ್ತರು: ಪತ್ನಿ– ಶ್ರೀಮತಿ ನಾಗಸುಂದರಮ್ಮ ಮತ್ತು ಮಕ್ಕಳು, ಮನಂದಿ ಸುರೇಶ್ ಮತ್ತು ಕುಟುಂಬ, ಮನಂದಿ ರಮೇಶ್ ಮತ್ತು ಕುಟುಂಬ, ಮನಂದಿ ದ್ವಾರಕನಾಥ್ ಮತ್ತು ಕುಟುಂಬ, ಮನಂದಿ ಸತೀಶ್ ಮತ್ತು ಕುಟುಂಬ, ಮೊಮ್ಮಕ್ಕಳು ಮತ್ತು ಮರಿಮೊಮ್ಮಕ್ಕಳು

ಕುಮಾವತ್ ಪೊಲೀಸ್ ವಶ ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಸಂಸತ್‌ನ ಭದ್ರತಾ ಲೋಪ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸ್ ವಶದಲ್ಲಿರುವ ಆರೋಪಿ ಮಹೇಶ್ ಕುಮಾವತ್ ಅವರ ಪೊಲೀಸ್ ವಶದ ಅವಧಿಯನ್ನು ಜನವರಿ 5ರವರೆಗೆ ವಿಸ್ತರಿಸಿ ಇಲ್ಲಿಯ ನ್ಯಾಯಾಲಯವೊಂದು ಶನಿವಾರ ಆದೇಶ ಹೊರಡಿಸಿತು.

ಪ್ರಕರಣದ ಸಂಚನ್ನು ಸಂಪೂರ್ಣವಾಗಿ ಬಯಲಿಗೆಳೆಯಲು ಕುಮಾವತ್ ಅವರನ್ನು ವಿಚಾರಣೆಗೆ ಒಳಪಡಿಸಬೇಕಿದೆ. ಹಾಗಾಗಿ ಅವರ ಪೊಲೀಸ್ ವಶದ ಅವಧಿಯನ್ನು ವಿಸ್ತರಿಸಬೇಕು ಎಂದು ದೆಹಲಿ ಪೊಲೀಸರು ನ್ಯಾಯಾಲಯವನ್ನು ಕೋರಿದರು. ಬಳಿಕ, ವಿಶೇಷ ನ್ಯಾಯಾಧೀಶೆ ಹರದೀಪ್ ಕೌರ್ ಅವರು ಅವಧಿ ವಿಸ್ತರಿಸಿದರು.

ಆರೋಪಿಗಳಾದ ಕುಮಾವತ್ ಮತ್ತು ಲಲಿತ್ ಝಾ ಅವರು ಗುರುವಾರ ರಾತ್ರಿ ತಾವಾಗಿಯೇ ಪೊಲೀಸ್ ಠಾಣೆಯೊಂದಕ್ಕೆ ಬಂದು ಶರಣಾದರು. ಅವರನ್ನು ಪೊಲೀಸ್ ವಿಶೇಷ ಘಟಕದ ವಶಕ್ಕೆ ನೀಡಲಾಯಿತು. ಆಗಿನಿಂದಲೇ ಅವರನ್ನು ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿಗಳಾದ ಮನೋರಂಜನ್ ಡಿ. ಸಾಗರ್ ಶರ್ಮಾ, ಅಮೋಲ್ ಧನರಾಜ್ ಶಿಂದೆ ಮತ್ತು ನೀಲಂ ದೇವಿ ಅವರ ಪೊಲೀಸ್ ವಶದ ಅವಧಿಯನ್ನು ಜನವರಿ 5ರ ವರೆಗೆ ವಿಸ್ತರಿಸಿ ಈಚೆಗಷ್ಟೇ ನ್ಯಾಯಾಲಯ ಆದೇಶ ನೀಡಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪುಣ್ಯಸ್ಮರಣೆ

ಮರಿಯಪ್ಪ
4-3-1932 ರಿಂದ 24-12-2011
ನಿಮ್ಮ ಆದರ್ಶಗಳು ನಮಗೆ ದಾರಿದೀಪ
ನಿಮ್ಮ ಆಶೀರ್ವಾದ ಎಂದೆಂದೂ ನಮಗಿರಲಿ
ನಿಮ್ಮ ಆತ್ಮಕ್ಕೆ ಶಾಂತಿ ಕೋರುವ
ಪತ್ನಿ:- ವಿಶಾಲಾಕ್ಷಿ, ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಬಂಧುವರ್ಗದವರು
Ph: 9845898268

ಸೇನಾ ವಾಹನದ ಮೇಲೆ ದಾಳಿ ಪ್ರಕರಣ ವಿಚಾರಣೆಗೆ ಕರೆದೊಯ್ದಿದ್ದ ಸೇನಾ ಸಿಬ್ಬಂದಿ • ಆಕ್ರೋಶ

ಮೂವರು ನಾಗರಿಕರ ನಿಗೂಢ ಸಾವು

ಪ್ರಜಾವಾಣಿ ವಾರ್ತೆ/ ಪಿಟಿಐ

ಶ್ರೀನಗರ: 'ಸೇನಾ ವಾಹನಗಳ ಮೇಲೆ ಇತ್ತೀಚೆಗೆ ನಡೆದ ದಾಳಿಗೆ ಸಂಬಂಧಿಸಿದಂತೆ ವಿಚಾರಣೆಗೆಂದು ಸೇನಾ ಸಿಬ್ಬಂದಿ ಕರೆದೊಯ್ದಿದ್ದ ಮೂವರು ನಾಗರಿಕರು ನಿಗೂಢ ರೀತಿಯಲ್ಲಿ ಮೃತಪಟ್ಟಿರುವುದರ ಕುರಿತು ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಜಮ್ಮು ಮತ್ತು ಕಾಶ್ಮೀರ ಸರ್ಕಾರ ಶನಿವಾರ ತಿಳಿಸಿದೆ.

'ಪೂಂಛ್ ಜಿಲ್ಲೆಯ ಬಫ್ಲಿಯಾಜ್‌ನಲ್ಲಿ ಮೂವರು ನಾಗರಿಕರು ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ. ಮೃತರ ಕುಟುಂಬದವರಿಗೆ ಪರಿಹಾರ ಮತ್ತು ಉದ್ಯೋಗವನ್ನು ನೀಡುವುದಾಗಿ ಸರ್ಕಾರ ಘೋಷಿಸಿದೆ' ಎಂದು ಜಮ್ಮು ಮತ್ತು ಕಾಶ್ಮೀರದ ಮಾಹಿತಿ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ 'ಎಕ್ಸ್'ನಲ್ಲಿ ತಿಳಿಸಿದೆ.

ಮೃತರನ್ನು ಸುರಾನ್‌ಕೋಟೆಯ ತೋಪಾ ಗ್ರಾಮದ ನಿವಾಸಿಗಳಾದ ಸಫೀರ್ ಹುಸೇನ್, ಮೊಹಮದ್ ಶೌಕತ್ ಮತ್ತು ಶಬೀರ್ ಅಹ್ಮದ್ ಎಂದು ಗುರುತಿಸಲಾಗಿದೆ. ಸೇನಾ ವಾಹನಗಳ ಮೇಲಿನ ದಾಳಿಗೆ ಸಂಬಂಧಿಸಿದಂತೆ ಸೇನಾ ಸಿಬ್ಬಂದಿ ಈ ಮೂವರು ಸೇರಿದಂತೆ ಒಂಬತ್ತು ಮಂದಿಯನ್ನು ಕರೆದೊಯ್ದಿದ್ದರು ಎಂದು ವರದಿಯಾಗಿದೆ.

'ಸೇನಾ ಸಿಬ್ಬಂದಿ ಹಲವು ನಾಗರಿಕರನ್ನು ಅವರ ಮನೆಯಿಂದ ವಿಚಾರಣೆಗೆ ಕರೆದೊಯ್ದಿದ್ದಾರೆ. ಕೆಲವರನ್ನು ದೂರವಾಣಿ ಕರೆ ಮುಖಾಂತರ ಕರೆಸಿಕೊಂಡಿದ್ದಾರೆ. ಮೂವರನ್ನು ನಿರ್ದಯವಾಗಿ ಕೊಂದಿದ್ದಾರೆ' ಎಂದು ಮೊಹಮದ್ ಶೌಕತ್ ಚಿಕ್ಕಪ್ಪ ಮುಹಮ್ಮದ್ ಸಿದ್ದಿಕ್ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸೇನಾ ವಾಹನಗಳ ಮೇಲೆ ದಾಳಿ ನಡೆಸಿದ ಭಯೋತ್ಪಾದಕರ ಪತ್ತೆಗೆ ಶನಿವಾರ ಶೋಧ ಕಾರ್ಯಾಚರಣೆಯಲ್ಲಿ ನಿರತರಾಗಿದ್ದ ಸೇನಾ ಸಿಬ್ಬಂದಿ —ಪಿಟಿಐ ಚಿತ್ರ

ಈ ಮಧ್ಯೆ, ಸೇನಾ ಸಿಬ್ಬಂದಿಯು ವಿಚಾರಣೆ ಸಮಯದಲ್ಲಿ ನಾಗರಿಕರ ಗುಪ್ತಾಂಗಗಳಿಗೆ ಖಾರದ ಪುಡಿ ಹಾಕಿ ಕಿರುಕುಳ ನೀಡುತ್ತಿರುವ ಹಾಗೂ ಅವರನ್ನು ಥಳಿಸುತ್ತಿರುವ ವಿಡಿಯೊ ದೃಶ್ಯಗಳು ಬಿತ್ತರಗೊಂಡಿವೆ. ಸೇನೆಯ ಈ ಕೃತ್ಯಕ್ಕೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಘಟನೆಯು ಸ್ಥಳೀಯರನ್ನು ಪ್ರತಿಭಟನೆಗೆ ಪ್ರಚೋದಿಸಿದೆ ಎಂದು ವರದಿಗಳು ಹೇಳಿವೆ. ವಿಡಿಯೊಗಳ ಸತ್ಯಾಸತ್ಯತೆ ಇನ್ನೂ ಪರಿಶೀಲನೆಗೆ ಒಳಪಟ್ಟಿಲ್ಲ.

ತನಿಖೆಗೆ ರಾಜಕೀಯ ಪಕ್ಷಗಳ ಆಗ್ರಹ: ಘಟನೆ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಜಮ್ಮು ಮತ್ತು ಕಾಶ್ಮೀರದ ಪಕ್ಷಗಳು ಆಗ್ರಹಿಸಿವೆ. ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಅವರು ಘಟನೆಯನ್ನು, 'ಹೇಯಕೃತ್ಯ' ಎಂದು ಕರೆದಿದ್ದಾರೆ. 'ಸೇನೆಯವರು 15 ಸ್ಥಳೀಯರನ್ನು ಬಂಧಿಸಿದ್ದರು. ಅವರಲ್ಲಿ ಈಗಾಗಲೇ ಮೂರು ಮಂದಿ ನಿಗೂಢ ರೀತಿಯಲ್ಲಿ ಮೃತಪಟ್ಟಿದ್ದಾರೆ. ಉಳಿದ 12 ಮಂದಿಯನ್ನು ಆಸ್ಪತ್ರೆಗೆ ದಾಖಲಿಸಿದ್ದು, ಕೆಲವರ ಸ್ಥಿತಿ ಗಂಭೀರವಾಗಿದೆ' ಎಂದು ಮುಫ್ತಿ ಹೇಳಿದ್ದಾರೆ.

ಇಂಟರ್‌ನೆಟ್ ಸ್ಥಗಿತ: 'ಪೂಂಛ್ ಮತ್ತು ರಜೌರಿ ಜಿಲ್ಲೆಗಳಲ್ಲಿ ಶನಿವಾರ ಬೆಳಿಗ್ಗೆಯಿಂದ ಇಂಟರ್‌ನೆಟ್ ಸೇವೆ ಸ್ಥಗಿತಗೊಳಿಸಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ವದಂತಿಗಳನ್ನು ಹರಡುವುದನ್ನು ತಪ್ಪಿಸಲು ಹಾಗೂ ಕಿಡಿಗೇಡಿಗಳು ಯಾವುದೇ ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆಯನ್ನು ಸೃಷ್ಟಿಸದಂತೆ ತಡೆಯಲು ಇಂಟರ್‌ನೆಟ್ ಅನ್ನು ಸ್ಥಗಿತಗೊಳಿಸಲಾಗಿದೆ' ಎಂದು ಮೂಲಗಳು ಹೇಳಿವೆ.

'ಹಿರಿಯ ಸೇನಾ, ಪೊಲೀಸ್ ಮತ್ತು ನಾಗರಿಕ ಅಧಿಕಾರಿಗಳು ಪರಿಸ್ಥಿತಿಯ ಮೇಲ್ವಿಚಾರಣೆ ನಡೆಸುತ್ತಿದ್ದಾರೆ. ಪೂಂಛ್ ಮತ್ತು ರಜೌರಿ ಜಿಲ್ಲೆಗಳ ಸೂಕ್ಷ್ಮ ಪ್ರದೇಶಗಳಲ್ಲಿ ಶಾಂತಿ ಕಾಪಾಡಲು ಹೆಚ್ಚಿನ ಪೊಲೀಸ್ ಸಿಬ್ಬಂದಿ ಮತ್ತು ಅರೆಸೇನಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಒಳನುಸುಳುವಿಕೆ ಸಂಚು ವಿಫಲ

ಜಮ್ಮು (ಪಿಟಿಐ): 'ಜಮ್ಮುವಿನ ಅಂತರರಾಷ್ಟ್ರೀಯ ಗಡಿಯಿಂದ ದೇಶದೊಳಕ್ಕೆ ನುಸುಳಲು ಯೋಜಿಸಿದ್ದ ಉಗ್ರರ ಸಂಚನ್ನು ಭಾರತೀಯ ಸೇನೆ ಶನಿವಾರ ಬೆಳಿಗ್ಗೆ ವಿಫಲಗೊಳಿಸಿದೆ. ಈ ವೇಳೆ ನಡೆದ ಗುಂಡಿನ ದಾಳಿಯಲ್ಲಿ ಒಬ್ಬ ಉಗ್ರ ಮೃತಪಟ್ಟಿದ್ದಾನೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಅಖ್ನೂರ್‌ನ ಖೋವೂರ್ ಸೆಕ್ಟರ್ ಬಳಿಯಿರುವ ಗಡಿಯಲ್ಲಿ ನಾಲ್ವರು ಶಸ್ತ್ರಸಜ್ಜಿತ ಉಗ್ರರ ಚಲನವಲನಗಳನ್ನು ಕಣ್ಗಾವಲು ಸಾಧನಗಳು ಶನಿವಾರ ಬೆಳಿಗಿನ ಜಾವ ಸೆರೆಹಿಡಿದಿವೆ. ಕೂಡಲೇ ಕಾರ್ಯಪ್ರವೃತ್ತರಾದ ಸೇನಾ ಸಿಬ್ಬಂದಿ ಗುಂಡಿನ ದಾಳಿ ನಡೆಸಿದ್ದಾರೆ' ಎಂದು ಸೇನೆಯ ಜಮ್ಮು ಮೂಲದ ವೈಟ್ ನೈಟ್ ಕಾರ್ಪ್ಸ್ ಪಡೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ.

'ಗುಂಡಿನ ದಾಳಿಯಲ್ಲಿ ಮೃತಪಟ್ಟ ಉಗ್ರನ ದೇಹವನ್ನು, ಉಳಿದ ಉಗ್ರರು ಪಾಕಿಸ್ತಾನದೆಡೆಗೆ ಕೊಂಡೊಯ್ದಿದ್ದಾರೆ. ಘಟನಾ ಸ್ಥಳದಲ್ಲಿನ ರಕ್ತದ ಕಲೆಗಳು ಉಗ್ರನ ಸಾವನ್ನು ದೃಢಪಡಿಸಿವೆ' ಎಂದಿದೆ.

ಇಬ್ಬರು ವ್ಯಕ್ತಿಗಳ ಸಜೀವ ದಹನ

ದೋಡಾ/ ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ದೋಡಾ ಜಿಲ್ಲೆಯ ಅರ್ನೋಡ ಗಟ್ ಸೇನಾ ಶಿಬಿರದಲ್ಲಿ ಶುಕ್ರವಾರ ರಾತ್ರಿ ಸಂಭವಿಸಿದ ಬೆಂಕಿ ಅವಘಡದಲ್ಲಿ ಇಬ್ಬರು ಪೌರ ಕಾರ್ಮಿಕರು ಸಜೀವ ದಹನಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

'ಸಾಂಬಾ ನಿವಾಸಿ ಪರ್ಷೋತಮ್ ಹಾಗೂ ಕಥುವಾ ನಿವಾಸಿ ಸೋಮ್‌ರಾಜ್ ಮೃತರು. ಕೆರೋಸಿನ್ ಹೀಟರ್‌ನಿಂದ ಬೆಂಕಿ ಹೊತ್ತಿಕೊಂಡಿದೆ. ಇವರಿಬ್ಬರು ಸೇನಾ ಶಿಬಿರದಲ್ಲಿ ಟೈಲರ್ ಅಂಗಡಿ ನಡೆಸುತ್ತಿದ್ದರು' ಎಂದರು.

ಪೈಲಟ್‌ಗೆ ಛತ್ತೀಸಗಢ ಉಸ್ತುವಾರಿ ಹೊಣೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಕರ್ನಾಟಕ ಉಸ್ತುವಾರಿಯಾಗಿ ಸುರ್ಜೇವಾಲಾ ಮುಂದುವರಿಕೆ
- ಪ್ರಿಯಾಂಕಾಗೆ ಉತ್ತರ ಪ್ರದೇಶ ಉಸ್ತುವಾರಿಯಿಂದ ಬಿಡುಗಡೆ

ನವದೆಹಲಿ: ಕಾಂಗ್ರೆಸ್ ಪಕ್ಷವು ಶನಿವಾರ ತನ್ನ ಸಂಘಟನೆಯನ್ನು ಪುನರ್‌ರಚಿಸಿದ್ದು ಸಚಿನ್ ಪೈಲಟ್ ಸೇರಿದಂತೆ ನಾಲ್ವರನ್ನು ಪ್ರಧಾನ ಕಾರ್ಯದರ್ಶಿಗಳಾಗಿ ಹೊಸದಾಗಿ ನೇಮಕ ಮಾಡಿದೆ. ಪ್ರಿಯಾಂಕಾ ಗಾಂಧಿ ವಾದ್ರಾ ಅವರನ್ನು ಉತ್ತರ ಪ್ರದೇಶದ ಉಸ್ತುವಾರಿ ಹೊಣೆಯಿಂದ ಬಿಡುಗಡೆ ಗೊಳಿಸಿದೆ.

ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಕರ್ನಾಟಕದ ಉಸ್ತುವಾರಿ ಜೊತೆಗೆ ಹೆಚ್ಚುವರಿಯಾಗಿ ಮಧ್ಯಪ್ರದೇಶದ ಉಸ್ತುವಾರಿಯಾಗಿಯೂ ಇರುವರು. ಕೆ.ಸಿ. ವೇಣುಗೋಪಾಲ್ ಅವರನ್ನು ಪ್ರಧಾನಕಾರ್ಯದರ್ಶಿ (ಸಂಘಟನೆ) ಮತ್ತು ಜೈರಾಮ್ ರಮೇಶ್ ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿ (ಸಂಪರ್ಕ) ಉಳಿಸಿಕೊಳ್ಳಲಾಗಿದೆ. ಪ್ರಧಾನ ಕಾರ್ಯದರ್ಶಿ ತಾರಿಖ್ ಅನ್ವರ್ ಮತ್ತು ಉಸ್ತುವಾರಿಗಳಾದ ರಜನಿ ಪಾಟೀಲ್, ಭಕ್ತ ಚರಣ್ ದಾಸ್, ಹರೀಶ್ ಚೌಧರಿ ಮತ್ತು ಮನೀಶ್ ಅವರನ್ನು ಕೈಬಿಡಲಾಗಿದೆ.

ಛತ್ತೀಸಗಢ ಉಸ್ತುವಾರಿಯಾಗಿ ಸಚಿನ್ ಪೈಲಟ್, ಉತ್ತರಪ್ರದೇಶ ಉಸ್ತುವಾರಿಯಾಗಿ ಅವಿನಾಶ್ ಪಾಂಡೆ ಅವರನ್ನು ನೇಮಕ ಮಾಡಲಾಗಿದೆ. ಈ ರಾಜ್ಯಗಳಲ್ಲಿ ಈ ಹಿಂದೆ ಅನುಕ್ರಮವಾಗಿ ಉಸ್ತುವಾರಿ ವಹಿಸಿದ್ದ ಕುಮಾರಿ ಶೆಲ್ಜಾ ಮತ್ತು ಪ್ರಿಯಾಂಕಾ ಗಾಂಧಿ ವಾದ್ರಾ ಅವರನ್ನು ಉಸ್ತುವಾರಿ ಹೊಣೆಯಿಂದ ಬಿಡುಗಡೆ ಮಾಡಲಾಗಿದೆ. ಕುಮಾರಿ ಶೆಲ್ಜಾ ಅವರಿಗೆ ಉತ್ತರಾಖಂಡದ ಉಸ್ತುವಾರಿ ವಹಿಸಲಾಗಿದೆ. ಪ್ರಿಯಾಂಕಾ ಗಾಂಧಿ ಈಗ ಪ್ರಧಾನ ಕಾರ್ಯದರ್ಶಿಯಾಗಿ ಮಾತ್ರ ಇರಲಿದ್ದಾರೆ ಎಂದು ಪಕ್ಷದ ಹೇಳಿಕೆ ತಿಳಿಸಿದೆ. ಚುನಾವಣೆಯಲ್ಲಿ ಪ್ರಿಯಾಂಕಾ ಅವರು ನಿರ್ಣಾಯಕ ಪಾತ್ರ ವಹಿಸುವ ಸಂಭವ ಇದೆ.

ಹೊಸ ಪ್ರಧಾನ ಕಾರ್ಯದರ್ಶಿ ಜಿ.ಎ. ಮಿರ್ ಅವರನ್ನು ಜಾರ್ಖಂಡ್ ಮತ್ತು ಪಶ್ಚಿಮಬಂಗಾಳ (ಹೆಚ್ಚುವರಿ) ಉಸ್ತುವಾರಿಯಾಗಿ, ದೀಪಾ ದಾಸ್ ಮುನ್ಷಿ ಅವರನ್ನು ಕೇರಳ, ಲಕ್ಷದ್ವೀಪ ಮತ್ತು ತೆಲಂಗಾಣ (ಹೆಚ್ಚುವರಿ) ಉಸ್ತುವಾರಿಯಾಗಿ ನೇಮಿಸಲಾಗಿದೆ. ಪ್ರಧಾನ ಕಾರ್ಯದರ್ಶಿಯಾಗಿ ಬಡ್ತಿ ಪಡೆದಿರುವ ದೀಪಕ್ ಬಾಬಾರಿಯ ಅವರಿಗೆ ದೆಹಲಿ, ಹೆಚ್ಚುವರಿಯಾಗಿ ಹರಿಯಾಣದ ಉಸ್ತುವಾರಿ ವಹಿಸಲಾಗಿದೆ.

ಕೋವಿಡ್: ದೇಶದಲ್ಲಿ 752 ಹೊಸ ಪ್ರಕರಣ, ನಾಲ್ವರ ಸಾವು

ನವದೆಹಲಿ (ಪಿಟಿಐ): ದೇಶದಾದ್ಯಂತ ಶನಿವಾರ ಬೆಳಿಗ್ಗೆ 8ಕ್ಕ ಕೊನೆಗೊಂಡ 24 ಗಂಟೆಯ ಅವಧಿಯಲ್ಲಿ 752 ಹೊಸ ಕೋವಿಡ್ ಪ್ರಕರಣಗಳು ದಾಖಲಾಗಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 3,420ಕ್ಕೇರಿದೆ. ಸೋಂಕಿನಿಂದ ನಾಲ್ವರು ಮೃತಪಟ್ಟಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಅಂಕಿ ಅಂಶಗಳು ಶನಿವಾರ ತಿಳಿಸಿವೆ.

ಕೇರಳದಲ್ಲಿ ಇಬ್ಬರು, ರಾಜಸ್ಥಾನ ಹಾಗೂ ಕರ್ನಾಟಕದಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಇದರಿಂದ ಕೋವಿಡ್ ಸೋಂಕಿಗೆ ದೇಶದಲ್ಲಿ ಮೃತರಾದವರ ಸಂಖ್ಯೆ 5,33,332ಕ್ಕೆ ಏರಿದಂತಾಗಿದೆ.

ದೇಶದಲ್ಲಿ ಕೋವಿಡ್ ಪೀಡಿತರಾದವರ ಸಂಖ್ಯೆ 4.50 ಕೋಟಿ (4,50,07,964) ದಾಟಿದೆ. 4,44,71,212 ಜನರು ಗುಣಮುಖರಾಗಿದ್ದು, ರಾಷ್ಟ್ರೀಯ ಚೇತರಿಕೆ ದರ ಶೇ 98.81ರಷ್ಟಿದ್ದು, ಸಾವಿನ ಪ್ರಮಾಣ ಶೇ 1.19ರಷ್ಟಿದೆ. 220.67 ಕೋಟಿ ಡೋಸ್ ಕೋವಿಡ್ ಲಸಿಕೆ ಹಾಕಲಾಗಿದೆ ಎಂದು ಸಚಿವಾಲಯದ ವೆಬ್‌ಸೈಟ್ ತಿಳಿಸಿದೆ.

ಕರ್ನಾಟಕ: 104 ಹೊಸ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ 104 ಕೋವಿಡ್ ಪ್ರಕರಣಗಳು ಶನಿವಾರ ದೃಢಪಟ್ಟಿವೆ. ಇದರಿಂದಾಗಿ ಸಕ್ರಿಯ ಪ್ರಕರಣಗಳು 271ಕ್ಕೆ ಏರಿಕೆಯಾಗಿವೆ.

24 ಗಂಟೆಗಳಲ್ಲಿ 1,752 ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 5.93ರಷ್ಟು ವರದಿಯಾಗಿದೆ. ಸಕ್ರಿಯ ಪ್ರಕರಣಗಳಲ್ಲಿ 258 ಮಂದಿ ಮನೆ ಆರೈಕೆಗೆ ಒಳಗಾದರೆ, 13 ಮಂದಿ ಮಾತ್ರ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರಲ್ಲಿ 6 ಮಂದಿಗೆ ತೀವ್ರ ನಿಗಾ ಘಟಕ ಹಾಗೂ 7 ಮಂದಿಗೆ ಸಾಮಾನ್ಯ ಹಾಸಿಗೆಯಲ್ಲಿ ಚಿಕಿತ್ಸೆ ಒದಗಿಸಲಾಗುತ್ತಿದೆ.

ಬೆಂಗಳೂರಿನಲ್ಲಿ ಒಂದು ದಿನದಲ್ಲಿ 677 ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದ್ದು, 85 ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಸಕ್ರಿಯ ಪ್ರಕರಣಗಳ ಸಂಖ್ಯೆ 234ಕ್ಕೆ ಏರಿಕೆಯಾಗಿದೆ. ಹೊಸದಾಗಿ ಮೈಸೂರಿನಲ್ಲಿ ಏಳು, ಶಿವಮೊಗ್ಗದಲ್ಲಿ ಆರು, ತುಮಕೂರು ಹಾಗೂ ಚಾಮರಾಜನಗರದಲ್ಲಿ ತಲಾ ಎರಡು, ದಕ್ಷಿಣ ಕನ್ನಡ ಹಾಗೂ ಮಂಡ್ಯದಲ್ಲಿ ತಲಾ ಒಂದು ಪ್ರಕರಣ ದೃಢಪಟ್ಟಿದೆ.

ಗೋಡೆಗಳ ಮೇಲೆ ಭಾರತ ವಿರೋಧಿ ಬರಹ: ತನಿಖೆಗೆ ಒತ್ತಾಯ

ಅಮೆರಿಕದಲ್ಲಿ ದೇವಾಲಯ ವಿರೂಪ

ನ್ಯೂಯಾರ್ಕ್ (ಪಿಟಿಐ): ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಪ್ರಮುಖ ಹಿಂದೂ ದೇವಾಲಯದಲ್ಲಿ ಖಾಲಿಸ್ತಾನ ಪರ ಘೋಷಣೆ ಮತ್ತು ಭಾರತ ವಿರೋಧಿ ಬರಹದೊಂದಿಗೆ ದಾಂದಲೆ ನಡೆಸಿರುವ ಬಗ್ಗೆ ತನಿಖೆ ನಡೆಸಬೇಕು ಎಂದು ಭಾರತ ಒತ್ತಾಯಿಸಿದೆ.

ಬರಹ ಕುರಿತ ಚಿತ್ರಗಳನ್ನು ಹಿಂದೂ– ಅಮೆರಿಕನ್ ಫೌಂಡೇಷನ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ. ಕ್ಯಾಲಿಫೋರ್ನಿಯಾದ ನೆವಾರ್ಕ್‌ನಲ್ಲಿ ಸ್ವಾಮಿ ನಾರಾಯಣ ಮಂದಿರದ ಗೋಡೆಗಳ ಮೇಲೆ ಭಾರತ ಮತ್ತು ಪ್ರಧಾನಮಂತ್ರಿ ನರೇಂದ್ರ ಮೋದಿ ವಿರುದ್ಧ ಘೋಷಣೆ ಬರೆಯಲಾಗಿದೆ.

ಹಿಂದೂ ದೇವಾಲಯ ಶ್ರೀ ಸ್ವಾಮಿ ನಾರಾಯಣ ಮಂದಿರದಲ್ಲಿ ಭಾರತ ವಿರೋಧಿ ಘೋಷಣೆಗಳನ್ನು ಬರೆದಿರುವುದು ಮತ್ತು ದಾಂದಲೆ ನಡೆಸಿರುವುದು ಪತ್ತೆಯಾಗಿದ್ದು ದ್ವೇಷಾಪರಾಧ ಸಾಧ್ಯತೆ ಕುರಿತು ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಈ ಪ್ರಕರಣದ ಕುರಿತು ಶುಕ್ರವಾರ ಬೆಳಿಗ್ಗೆ 8.35ರ ವೇಳೆಗೆ ತಮಗೆ ಇ–ಮೇಲ್ ಬಂದಿದೆ ಎಂದು ಕ್ಯಾಲಿಫೋರ್ನಿಯಾದ ನೆವಾರ್ಕ್ ನಗರದ ಪೊಲೀಸರು ಹೇಳಿದ್ದಾರೆ. ಭೀತಿ ಮೂಡಿಸಲು ಈ ಕೃತ್ಯ ಎಸಗಲಾಗಿದೆ ಎಂದು ದೇವಾಲಯದ ಪ್ರಮುಖರು ಪೊಲೀಸ್ ಅಧಿಕಾರಿಗಳಿಗೆ ತಿಳಿಸಿದ್ದಾರೆ.

'ದೇವಾಲಯವನ್ನು ವಿರೂಪಗೊಳಿಸಿರುವುದು ಉದ್ದೇಶಪೂರ್ವಕ. ದ್ವೇಷಾಪರಾಧಕ್ಕಾಗಿ ದಾಂದಲೆಯನ್ನು ನಡೆಸಲಾಗಿದೆಯೇ ಎಂಬ ಬಗ್ಗೆ ತನಿಖೆ ನಡೆಸಲಾಗುತ್ತಿದೆ' ಎಂದು ಹೇಳಿಕೆ ತಿಳಿಸಿದೆ.

ಸ್ಯಾನ್ ಫ್ರಾನ್ಸಿಸ್ಕೊದಲ್ಲಿರುವ ಭಾರತ ಕಾನ್ಸುಲೇಟ್ ಜನರಲ್ ಅವರು ಘಟನೆಯನ್ನು ತೀವ್ರವಾಗಿ ಖಂಡಿಸಿದ್ದಾರೆ. 'ನೆವಾರ್ಕ್‌ನಲ್ಲಿನ ಶ್ರೀ ಸ್ವಾಮಿನಾರಾಯಣ ಮಂದಿರವನ್ನು ಭಾರತ ವಿರೋಧಿ ಬರಹಗಳೊಂದಿಗೆ ವಿರೋಪಗೊಳಿಸಿರುವುದನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ' ಎಂದು ಕಾನ್ಸುಲೇಟ್ 'ಎಕ್ಸ್' ವೇದಿಕೆಯಲ್ಲಿ ಪೋಸ್ಟ್ ಮಾಡಿದೆ.

'ಈ ಘಟನೆಯು ಭಾರತೀಯ ಸಮುದಾಯದವರ ಭಾವನೆಗಳಿಗೆ ನೋವುಂಟು ಮಾಡಿದೆ. ತಕ್ಷಣ ತನಿಖೆ ಕೈಗೊಂಡು ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇವೆ' ಎಂದು ಕಾನ್ಸುಲೇಟ್ ಕಚೇರಿ ಹೇಳಿದೆ.

ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಚಿತ್ರಗಳ ಪ್ರಕಾರ, ಆಕ್ಷೇಪಾರ್ಹ ಬರಹಗಳ ಜತೆಗೆ ಖಾಲಿಸ್ತಾನ ಪದವೂ ಕಂಡು ಬಂದಿದೆ.

ಹಿಂಸಾಚಾರದ ಬೆದರಿಕೆ ಅಥವಾ ಯಾವುದೇ ಕ್ರಮ, ಆಸ್ತಿಗೆ ಧಕ್ಕೆ, ದೌರ್ಜನ್ಯ, ಬೆದರಿಕೆ ಅಥವಾ ದ್ವೇಷ ಅಥವಾ ತಾರತಮ್ಯ ಭಾವನೆಯ ಇತರ ಅಪರಾಧಗಳನ್ನು ಗಂಭೀರವಾಗಿ ಪರಿಗಣಿಸಿ ಅವುಗಳ ತನಿಖೆಗೆ ಆದ್ಯತೆ ನೀಡಲಾಗುವುದು. ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ ಎಂದು ನೆವಾರ್ಕ್ ಪೊಲೀಸರು ಹೇಳಿದ್ದಾರೆ.

ಖಾಲಿಸ್ತಾನಿ ಪ್ರತ್ಯೇಕತಾವಾದಿಗಳ ಇಂತಹ ಬರಹಗಳಿಂದ ದೇವಾಲಯವನ್ನು ವಿರೂಪಗೊಳಿಸಿರುವುದು ಇದೇ ಮೊದಲೇನಲ್ಲ. ಕೆನಡಾ ಮೂಲದ ಖಾಲಿಸ್ತಾನ್ ಟೈಗರ್ ಫೋರ್ಸ್‌ನ ಮುಖ್ಯಸ್ಥ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆ ಬಳಿಕ ಖಾಲಿಸ್ತಾನ ಬೆಂಬಲಿಗರು ಭಾರತ ವಿರೋಧಿ ಚಟುವಟಿಕೆಗಳನ್ನು ಹೆಚ್ಚಿಸಿದ್ದಾರೆ.

ಆಗಸ್ಟ್‌ನಲ್ಲಿ ಕೆನಡಾದ ಸರ್ರೆಯಲ್ಲಿ ಖಾಲಿಸ್ತಾನಿ ಬೆಂಬಲಿಗರು ದೇವಾಲಯವನ್ನು ಧ್ವಂಸಗೊಳಿಸಿದ್ದರು. ಖಾಲಿಸ್ತಾನ ಪರ ಭಿತ್ತಿಪತ್ರಗಳನ್ನು ಲಕ್ಷ್ಮಿ ನಾರಾಯಣ ಮಂದಿರದ ಗೇಟು ಮತ್ತು ಗೋಡೆಗಳ ಮೇಲೆ ಅಂಟಿಸಲಾಗಿತ್ತು. ನಿಜ್ಜರ್ ಸಾವಿನಲ್ಲಿ ಭಾರತದ ಪಾತ್ರವನ್ನು ತನಿಖೆ ಮಾಡುವಂತೆ ಕರೆ ನೀಡಲಾಗಿತ್ತು.

ಅಮೆರಿಕದಲ್ಲಿ ಸಿಖ್ ಪ್ರತ್ಯೇಕತಾವಾದಿ ನಾಯಕ ಗುರುಪತ್ವಂತ್ ಸಿಂಗ್ ಪನ್ನೂ ಹತ್ಯೆಯ ಸಂಚಿನಲ್ಲಿ ಭಾರತದ ಅಧಿಕಾರಿಗಳ ಪಾತ್ರದ ಆರೋಪವಿರುವ ಸಂದರ್ಭದಲ್ಲೇ ನೆವಾರ್ಕ್‌ನಲ್ಲಿ ದಾಂದಲೆ ನಡೆದಿದೆ.

ಸಚಿವ ಜೈಶಂಕರ್ ಖಂಡನೆ

ಕ್ಯಾಲಿಫೋರ್ನಿಯಾದ ಹಿಂದೂ ದೇವಾಲಯವನ್ನು ಧ್ವಂಸಗೊಳಿಸಿರುವ ಪ್ರಕರಣ ಕುರಿತು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಶನಿವಾರ ಕಳವಳ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರೀಯ ರಕ್ಷಾ ವಿಶ್ವವಿದ್ಯಾಲಯದ ಮೂರನೇ ಘಟಿಕೋತ್ಸವದಲ್ಲಿ ಭಾಗಿಯಾಗಿದ್ದ ಅವರು 'ದೇಗುಲ ಧ್ವಂಸ ಪ್ರಕರಣದ ಕುರಿತ ಸುದ್ದಿ ನೋಡಿದೆ. ಇಂಥ ಘಟನೆ ನಡೆದಿರುವುದು ವಿಷಾದಕರ' ಎಂದಿದ್ದಾರೆ.

ಖಾಲಿಸ್ತಾನ ಪರ ಹೋರಾಟಗಾರ ಗುರುಪತ್ವಂತ್ ಸಿಂಗ್ ಪನ್ನೂ ಅವರನ್ನು ಹತ್ಯೆಗೈಯಲು ಸಂಚು ರೂಪಿಸಿದ್ದ ಆರೋಪದ ಮೇಲೆ ಭಾರತೀಯ ಪ್ರಜೆ ನಿಕಿಲ್ ಗುಪ್ತಾ ಅವರನ್ನು ಜೆಕ್ ಗಣರಾಜ್ಯದಲ್ಲಿ ಬಂಧಿಸಿರುವುದರ ಕುರಿತು ಅವರು ಮಾತನಾಡಿದರು. ನಿಖಿಲ್ ಅವರಿಗೆ ಭಾರತೀಯ ಕಾನ್ಸುಲರ್ ಅವರ ಜೊತೆ ಸಂಪರ್ಕದಲ್ಲಿ ಇರಲು ಆ ದೇಶದಿಂದ ಅವಕಾಶ ಕೊಡಿಸಲಾಗಿದೆ ಎಂದು ಹೇಳಿದ್ದಾರೆ.

> ಉಗ್ರವಾದಿಗಳು ಮತ್ತು ಪ್ರತ್ಯೇಕತಾವಾದಿಗಳಿಗೆ ಎಲ್ಲೂ ಇಷ್ಟು ಸ್ವಾತಂತ್ರ್ಯ ದೊರಕಬಾರದು
> **ಎಸ್. ಜೈಶಂಕರ್**, ವಿದೇಶಾಂಗ ವ್ಯವಹಾರಗಳ ಸಚಿವ

ನಾಯ್ಡು– ಪ್ರಶಾಂತ್ ಕಿಶೋರ್ ಭೇಟಿ: ಆಂಧ್ರದಲ್ಲಿ ಕುತೂಹಲ

ಅಮರಾವತಿ (ಪಿಟಿಐ): ಚುನಾವಣಾ ತಂತ್ರಗಾರ ಪ್ರಶಾಂತ್ ಕಿಶೋರ್ ಅವರು ಶನಿವಾರ ಇಲ್ಲಿ ಟಿಡಿಪಿ ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಅವರನ್ನು ಭೇಟಿಯಾದರು. ಈ ಭೇಟಿ ಹಿಂದಿನ ಕಾರ್ಯಸೂಚಿ ಸ್ಪಷ್ಟವಾಗಿಲ್ಲವಾದರೂ ಇದು ಆಂಧ್ರ ಪ್ರದೇಶದ ರಾಜಕೀಯದಲ್ಲಿ ಕುತೂಹಲ ಮೂಡಿಸಿದೆ.

ಕಿಶೋರ್ ಅವರು ಟಿಡಿಪಿ ಪ್ರಧಾನ ಕಾರ್ಯದರ್ಶಿ ಲೋಕೇಶ್ ಮತ್ತು ಇನ್ನೂ ಮೂವರ ಜತೆಗೆ ಖಾಸಗಿ ಜೆಟ್‌ನಲ್ಲಿ ಮಧ್ಯಾಹ್ನ 3 ಗಂಟೆ ಸುಮಾರಿಗೆ ವಿಜಯವಾಡ ಬಳಿಯ ಗನ್ನವರಂ ವಿಮಾನ ನಿಲ್ದಾಣಕ್ಕೆ ಬಂದಿಳಿದರು. ಲೋಕೇಶ್ ಮತ್ತು ಕಿಶೋರ್ ಅವರು ವಿಮಾನ ನಿಲ್ದಾಣದಿಂದ ಆಗಮಿಸಿ ಕಪ್ಪು ಬಣ್ಣದ ಎಸ್‌ಯುವಿ ಕಾರು ಹತ್ತಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

ಇದೇ ವೇಳೆ ಅವರು ಆಂಧ್ರಪ್ರದೇಶದ ವಿರೋಧ ಪಕ್ಷದ ನಾಯಕ ಚಂದ್ರಬಾಬು ನಾಯ್ಡು ಅವರನ್ನು ಅವರ ನಿವಾಸದಲ್ಲಿ ಪ್ರಶಾಂತ್ ಕಿಶೋರ್ ಭೇಟಿಯಾದರು ಎಂದು ಮೂಲವೊಂದು ಖಚಿತಪಡಿಸಿದೆ. ಇದರ ಬೆನ್ನಲ್ಲೇ ಆಂಧ್ರಪ್ರದೇಶದ ನೀರಾವರಿ ಸಚಿವ ಎ. ರಾಮಬಾಬು ಅವರು ನಾಯ್ಡು, ಲೋಕೇಶ್ ಮತ್ತು ಕಿಶೋರ್ ಅವರ ನಡುವಿನ ರಾಜಕೀಯ ಕೂಟವನ್ನು ಲೇವಡಿ ಮಾಡಿದ್ದಾರೆ.

ಟಿಡಿಪಿಯ ರಾಜಕೀಯ ವ್ಯವಹಾರಗಳನ್ನು ಉಲ್ಲೇಖಿಸಿ ರಾಮಬಾಬು ಅವರು 'ಕಟ್ಟಡದ ಸಾಮಗ್ರಿಗಳೇ ದೋಷಪೂರಿತವಾಗಿರುವಾಗ ಇನ್ನು ಯಾವ ರೀತಿಯ ಕಟ್ಟಡ ನಿರ್ಮಾಣವಾಗಬಹುದು?' ಎಂದು ಟೀಕಿಸಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

2019ರ ವಿಧಾನಸಭೆ ಚುನಾವಣೆ ಮತ್ತು ಲೋಕಸಭೆ ಚುನಾವಣೆ ಪೂರ್ವದಲ್ಲಿ ವೈಎಸ್‌ಆರ್‌ಸಿಪಿ ಮುಖಸ್ಥ ವೈ.ಎಸ್. ಜಗನ್ ಮೋಹನರೆಡ್ಡಿ ಅವರು ಪ್ರಶಾಂತ್ ಕಿಶೋರ್ ಅವರ ನೆರವು ಪಡೆದಿದ್ದರು. ಅಂತಿಮವಾಗಿ ಆ ಚುನಾವಣೆಯಲ್ಲಿ ಅವರ ಪಕ್ಷ ಗೆಲುವು ಸಾಧಿಸಿತ್ತು. ರೆಡ್ಡಿ ಅವರ ಜತೆಗೆ ಕಿಶೋರ್ ಕೈಜೊಡಿಸಿದ್ದಕ್ಕೆ ಟಿಡಿಪಿ ನಾಯಕರು ಟೀಕಾಪ್ರಹಾರ ನಡೆಸಿದ್ದರು. ಆದರೆ, ಈಗ ಈ ಭೇಟಿಯು ಆಂಧ್ರ ರಾಜಕಾರಣದಲ್ಲಿ ಮತ್ತೊಂದು ತಿರುವು ಪಡೆದಿದೆ.

ಇ.ಡಿ ವಿಚಾರಣೆಗೆ ಕಾರ್ತಿ ಚಿದಂಬರಂ ಹಾಜರು

ನವದೆಹಲಿ (ಪಿಟಿಐ): ಚೀನಾದ ಪ್ರಜೆಗಳಿಗೆ ವೀಸಾ ಕೊಡಿಸಿದ್ದ ಪ್ರಕರಣದಲ್ಲಿನ ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಸಂಸದ ಕಾರ್ತಿ ಚಿದಂಬರಂ ಅವರು ಶನಿವಾರ ಜಾರಿ ನಿರ್ದೇಶನಾಲಯದ ವಿಚಾರಣೆಗೆ ಹಾಜರಾದರು. ಇ.ಡಿ ಅಧಿಕಾರಿಗಳು ಅವರ ಹೇಳಿಕೆಯನ್ನು ದಾಖಲಿಸಿಕೊಂಡರು.

'ಸಂಬಂಧವೇ ಇಲ್ಲದ ಪ್ರಕರಣದಲ್ಲಿ ಇ.ಡಿ ನನ್ನನ್ನು ವಿಚಾರಣೆ ಮಾಡುತ್ತಿದೆ. ನಾನು ಈಗಾಗಲೇ ದಾಖಲೆಗಳನ್ನು ಸಲ್ಲಿಸಿದ್ದೇನೆ' ಎಂದು ಕಾರ್ತಿ ಈ ಹಿಂದೆ ಹೇಳಿದ್ದರು. ಆದರೆ, ಡಿ. 12 ಮತ್ತು 16 ರಂದು ನಿಗದಿಯಾಗಿದ್ದ ವಿಚಾರಣೆಗೆ ಗೈರಾಗಿದ್ದ ಕಾರ್ತಿ, ದಾಖಲೆ ಸಂಗ್ರಹಕ್ಕೆ ಹೆಚ್ಚಿನ ಸಮಯ ಕೋರಿದ್ದರು.

₹50 ಲಕ್ಷ ಲಂಚ ಪಡೆದು ಚೀನಾದ 263 ಮಂದಿಗೆ 2011ರಲ್ಲಿ ವೀಸಾ ಕೊಡಿಸಿದ್ದರು ಎಂಬ ಆರೋಪವನ್ನು ಕಾರ್ತಿ ಮೇಲೆ ಹೊರಿಸಲಾಗಿದೆ. ಪಂಜಾಬ್‌ನಲ್ಲಿ ಸ್ಥಾಪನೆಯಾಗಿದ್ದ 'ವೇದಾಂತ್ ಗ್ರೂಪ್ ಕಂಪನಿ ತಾಲವಂಡಿ ಸಾಬೋ ಪಾವರ್ ಲಿಮಿಟೆಡ್'ನ ವಿದ್ಯುತ್ ಯೋಜನೆಯೊಂದರಲ್ಲಿ ಚೀನೀಯರು ಕೆಲಸ ಮಾಡಬೇಕಾಗಿತ್ತು. ಅವರ ಪರವಾಗಿ ಕಂಪನಿಯ ಅಧಿಕಾರಿಗಳು ಕಾರ್ತಿಗೆ ಹಣ ಸಂದಾಯ ಮಾಡಿದ್ದಾರೆ ಎಂದು ಸಿಬಿಐ ಹೇಳಿದೆ. ಕಾರ್ತಿ ಅವರ ತಂದೆ ಪಿ.ಚಿದಂಬರಂ ಅವರು ಆಗ ಕೇಂದ್ರದಲ್ಲಿ ಗೃಹ ಸಚಿವರಾಗಿದ್ದರು. ಸಿಬಿಐ ತನಿಖೆ ನಡೆಸುತ್ತಿರುವ ಈ ಪ್ರಕರಣದಲ್ಲಿನ ಅಕ್ರಮ ಹಣ ವರ್ಗಾವಣೆಗೆ ಸಂಬಂಧಿಸಿದಂತೆ ಇ.ಡಿ ತನಿಖೆ ನಡೆಸುತ್ತಿದೆ.



ಅಪಾಯದಲ್ಲಿ ಪಕ್ಷಿಗಳು

ಚೆನ್ನೈನ ಎನ್ನೂರ್ ಬಳಿ ಬಂಗಾಳ ಕೊಲ್ಲಿ ಹಿನ್ನೀರಿನಲ್ಲಿ ಈಚೆಗೆ ತೈಲ ಸೋರಿಕೆ ಉಂಟಾಗಿದ್ದು, ವಲಸೆ ಬಂದಿರುವ ಪೆಲಿಕಾನ್ ಪಕ್ಷಿಗಳು ಅಪಾಯಕ್ಕೆ ಸಿಲುಕಿವೆ –ಪಿಟಿಐ ಚಿತ್ರ

ಕೇಜ್ರಿವಾಲ್‌ಗೆ ಇ.ಡಿ ಸಮನ್ಸ್: ಕಾನೂನು ಸಲಹೆ ನಂತರ ನಿರ್ಧಾರ

ಅರವಿಂದ ಕೇಜ್ರಿವಾಲ್

ನವದೆಹಲಿ (ಪಿಟಿಐ): ಅಬಕಾರಿ ನೀತಿ ಹಗರಣದ ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ನೀಡಲಾಗಿರುವ ಹೊಸ ಸಮನ್ಸ್ ಕುರಿತು ಕಾನೂನು ತಜ್ಞರಿಂದ ಅಭಿಪ್ರಾಯ ಪಡೆಯುವುದಾಗಿ ಆಮ್ ಆದ್ಮಿ ಪಕ್ಷ (ಎಎಪಿ) ಶನಿವಾರ ತಿಳಿಸಿದೆ.

ಡಿ.21ರಂದು ವಿಚಾರಣೆಗೆ ಹಾಜರಾಗುವಂತೆ ಕೇಜ್ರಿವಾಲ್ ಅವರಿಗೆ ಇ.ಡಿ ಸಮನ್ಸ್ ಜಾರಿ ಮಾಡಿತ್ತು. ವಿಚಾರಣೆಗೆ ತೆರಳದ ಕೇಜ್ರಿವಾಲ್, ವಿಪಶ್ಯನ ಧ್ಯಾನಕ್ಕೆ ಹೋಗಿದ್ದಾರೆ. ಇದರ ಬೆನ್ನಿಗೇ ಇ.ಡಿ ಶುಕ್ರವಾರ ಮತ್ತೊಮ್ಮೆ ಸಮನ್ಸ್ ಜಾರಿ ಮಾಡಿದ್ದು ಜ. 3ರಂದು ವಿಚಾರಣೆಗೆ ಬರಲು ಹೇಳಿದೆ.

'ಕೇಜ್ರಿವಾಲ್ ವಿಪಶ್ಯನಕ್ಕೆ ತೆರಳಿದ್ದಾರೆ. ಅವರೊಂದಿಗೆ ಯಾವ ಸಂವಹನವೂ ಇಲ್ಲ. ಅವರು ಬಂದ ಕೂಡಲೇ ಕಾನೂನು ತಜ್ಞರಿಂದ ಅಭಿಪ್ರಾಯ ಪಡೆಯಲಾಗುವುದು. ನಂತರ ಮುಂದಿನದ್ದನ್ನು ನಿರ್ಧಾರ ಮಾಡುತ್ತೇವೆ' ಎಂದು ದೆಹಲಿಯ ಪರಿಸರ ಖಾತೆ ಸಚಿವ ಗೋಪಾಲ್ ರಾಯ್ ತಿಳಿಸಿದ್ದಾರೆ.

ರಶೀದ್‌ಖಾನ್ ಆರೋಗ್ಯ ಗಂಭೀರ

ಕೋಲ್ಕತ್ತ (ಪಿಟಿಐ): ಪ್ರಾಸ್ಟೇಟ್ ಕ್ಯಾನ್ಸರ್‌ನಿಂದ ಬಳಲಿರುವ ಸಂಗೀತ ಮಾಂತ್ರಿಕ ಉಸ್ತಾದ್ ರಶೀದ್ ಖಾನ್ (55) ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದೆ ಎಂದು ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

30X50 SITE, Rs.5000/- sqft negotiable, with all ammunites, Gated Community west facing, Surendrapura, Doddaballapura Main Road, Bangalore: 9742723362

Mysore

HUNSUR ROAD Kuberananda Sagara Layout, 50X80 Site#691, 1.K.M. From Main Road. 2000/- Per Sqft. 9945724472.

House

J P Nagar

J.P.NAGAR 3RD Phase Residential Two unit old house Near Mini forest, 40' Road 10,50,00,000/- 9739995042

AVAILABLE FOR RENT / SALE
6000 SQ FT RCC BUILDING GROUND & 1ST FLOOR SUITABLE FOR GODOWN / GARMENT FACTORY AT KADIRENAHALLI. 1.5 KMS FROM BSK METRO ON UTTARAHALLI MAIN ROAD WITH BOREWELL & 70 HP POWER
CONTACT : 98455 55505

KBL FARM VILLE
Luxurious country side living.
Villa Farm plots for sale in Srirangapatna,
near Mysore-Bangalore Expressway Toll.
Contact for more details & bookings.
9686833300, 6364342244

ಯಲಹಂಕ
ಜಿಕೆವಿಕೆ ಹಿಂದಿನ ಗೇಟ್, ಅಟ್ಟೂರು, ವಿದ್ಯಾರಣ್ಯಪುರ
BBMP KHATA LAYOUT
Land Mark: 5mins from Yelahanka DMart
20 x 30 ನಿವೇಶನಗಳು @ 27 ಲಕ್ಷಗಳು
30 X 40 | 30 X 50 Sites Also available
ಬಾಗಲೂರು
SEZ Road
E KHATA LAYOUT
DC Conversion LAYOUT
20 x 40 ನಿವೇಶನಗಳು @ 30 ಲಕ್ಷಗಳು
30 x 40 ನಿವೇಶನಗಳು @ 45 ಲಕ್ಷಗಳು
Vidya Nagar Cross
Venkateswara Engineering College
ನಿರ್ಮಾಣಕ್ಕೆ ಸಿದ್ಧವಾಗಿದೆ ಬ್ಯಾಂಕ್ ಸಾಲ @ LIC HFL ICICI Bank Home Loans
9880 149 159 | 9731 555 000

ವೆಡ್ಡಿಂಗ್ ಸೀಸನ್ ಸ್ಪೆಷಲ್
ಸಾಂಪ್ರದಾಯಿಕ & ಜೀವನಶೈಲಿ ಆಧಾರಿತ
ನ್ಯಾಷನಲ್ ಸಿಲ್ಕ್ ಎಕ್ಸ್‌ಪೋ
ಪ್ರದರ್ಶನ ಮತ್ತು ಮಾರಾಟ
ಭಾರತದ 100+ ನುರಿತ ನೇಕಾರರು ಮತ್ತು ಅತ್ಯುತ್ತಮ ವಿನ್ಯಾಸಕಾರರು
ಕೊನೆಯ 2 ದಿನಗಳು
ಸ್ಥಳ: ಶಿಲ್ಪ ಕಲಾ ಮಂಟಪ
9ನೇ ಅಡ್ಡ ರಸ್ತೆ, ಜೆಪಿ ನಗರ, 3ನೇ ಹಂತ ಬನ್ನೇರುಘಟ್ಟ ಮುಖ್ಯರಸ್ತೆ, ಶಾಪರ್ಸ್ ಸ್ಟಾಪ್ ಎದುರು, ಜಯದೇವ ಆಸ್ಪತ್ರೆ ಸಮೀಪ, ಬೆಂಗಳೂರು
ದೇಶಾದ್ಯಂದತ ಕೈಮಗ್ಗ ರೇಷ್ಮೆ ಸೀರೆಗಳು ಮತ್ತು ಕಾಟನ್ ಸೀರೆಗಳು, ಆಕರ್ಷಕ ವಿನ್ಯಾಸ, ಸಾಂಪ್ರದಾಯಕ, ಪಾಶ್ಚಿಮಾತ್ಯ ಉಡುಪುಗಳು, ಫ್ಯಾಷನ್ ಜ್ಯುವೆಲ್ಲರಿ, ಹೋಮ್ ಲಿನೆನ್ ಮತ್ತು ಇನ್ನೂ ಅನೇಕ ಉತ್ಪನ್ನಗಳು ಲಭ್ಯ.

M: 9441987009 | ALL DEBIT & CREDIT CARDS ACCEPTED | ENTRY FREE

Malleshwaram

OLD HOUSE for Sale at Malleshwaram 30x70 East facing, 15th Cross, 4th Temple Main Road. Contact: 8660800061

Vijayanagar

30X40 G+2 House Vijayanagar, Venkateshwara Layout, Attached BCC Layout, EF, 40ft Road, 2Cr: 9448673482

Vishweshwariah Layout

"VISHVESWARAIAH 8TH-BLOCK 20x30 3BHK duplex House, & 6th Block 30x40 East facing Site. 9945698808"

Mysore

'40X60, 3 BHK duplex House for sale Opp Lalitha Mahal, K.C Layout, Mysuru, contact: 9448040401'

Magadi Road

SALE GF Single Bedroom House 1st & 2nd Floor 3Bed House Kadabagere Contact Gangadhar: 9632824856

Flat

Basavanagudi

BASAVANAGUDI SALE 3BHK Flat Furnished, 1550 SqFt SBA, Duplex Type 2nd Floor Residential 'A' Katha Clear Title CarPark All Amenities in Vicinity Nearby Temples, Schools, Colleges, Market Shopping Spree, Hotels, Jogging Park, Etc. CALL: 9886019240/ 080-26603673

J P Nagar

SALE OVER 10 YEAR, SEMI-FURNISHED 2 BHK FLAT 1080 SQFT, WITH ROOFED CAR-PARKING JPNAGAR 5TH PHASE: 9986763007

Nagarabhavi

FLATS FOR-SALE 2 & 3 BHK Near Nagarabhavi circle under construction 1 km from metro-station 95388-28808 98450-66608

Yelahanka

FOR SALE. 1452sqft 3BHK near BMSIT. DSMAX Streak. Contact 9740470574/9886135928. Genuine buyers only.

Agricultural Land Converted

Kanakapura Road

FOR SALE Gabadi Gramatana, Herohalli Taluk, Kanakapura District, 32 Guntas. K.K. REALTORSS, Contact: 9741437555, 6366623666

Commercial Building

HSR Layout

HSR LAYOUT 7th-Sector 40x60 Brand New-Building PG 50 Rooms Rental-income 6 Lakhs, 10.50Cr Contact.9945079777

Agricultural Land

Out-Station

AGRICULTURAL LAND for SALE, 2.14-Guntas situated at Sonnanayakanpura Village, Kasaba Hobli, Anekal Taluk. Clear Title, Possession. Shrinivas 9343305749

Mysore

"MYSORE AGRICULTURAL-LAND 9acres suitable-for Agriculture, Home stay, Resorts, expecting 8.Crore close-to Ring Road only genuine buyers. "Sri.Ganesh Estate" 9845286505"

Commercial Land

Banashankari

"40X60 COMMERCIAL Property for Sale Hosakerehalli 100 feet Ring Road Banashankari 3rd Stage, 2nd Phase. 9845500019/ 7019314962"

ಇಂದೇ ಭೇಟಿ ನೀಡಿ
ಮೊಟ್ಟಮೊದಲ ಬಾರಿಗೆ ನಮ್ಮ ಯಲಹಂಕದಲ್ಲಿ
KPS Star Fair Presents
ಯಲಹಂಕ ಉತ್ಸವ
ಫಿಶ್ ಅಕ್ವೇರಿಯಂ, ಅಮ್ಯೂಸ್‌ಮೆಂಟ್ ಮತ್ತು ವಸ್ತುಪ್ರದರ್ಶನ
15-12-2023ರಿಂದ ಅಮೋಘ ಪ್ರಾರಂಭ
Big Family Games, Shopping & Food Fest

For Enquiry
8217370835, 9092020876
ಪ್ರತಿ ಸಂಜೆ 5 ರಿಂದ ರಾತ್ರಿ 10ರವರೆಗೆ
ಸ್ಥಳ: ಉಡುಪಿ ಗ್ರಾಂಡ್ ಹೋಟೆಲ್ ಪಕ್ಕ, ಕೋಗಿಲು ಕ್ರಾಸ್, ಯಲಹಂಕ, ಬೆಂಗಳೂರು

Commerical

Peenya

3848 SQFT Office Space Available For Sale @ Jalahalli Cross Peenya Bangalore Contact No.9845305214

Farm House/ Land/ Resorts

Multiple Locations

NANDI HILLS rd 1/2 acre converted land 15 furnished AC rooms lawn garden 9Cr Ph: 7019346409

Industrial & Factory

Mysore Road

SALE NEW Timber Layout Mysore Road 3650sft Shed In Sundar Industrial Estate Rental Returns 9845027192

Residential/ Commercial

Jayanagar

AVAILABLE 2400 sqft prime property for sale near Madhavan park. South Facing. Immediate possession. Brokers Excuse. Contact 7760110114

REAL ESTATE BUYING

Joint Development

Joint Venture

"URGENTLY REQUIRED Property any-dimensions in & around Bangalore for Builders (Joint Venture or Individual). genuine Parties-Call: 9019533999/ 9731379933"

Sites

Banashankari

BDASITES WANTED Anjanapura Arkhavathy Banashankari 6th Stage, Vishweshwaraiah, Kempegowda Any BDA LayoutContact: 9845062822 8660751654

HSR Layout

WANTED SITE [VACANT ONLY] 4000 sft & above, for outright purchase in HSR Layout Sector-4, IAS Colony, around Freedom School.Whatsapp Only 9481942690

Kammanahalli

WANTED SITES/ Old Houses, HRBR, HBR, KAMMANAHALLI, OMBR, KASTURINAGAR Contact FALCON Nehru Road HRBR Opp Axis: 9845447868

Kanakapura Road

WANTED SITE 30x40, 40x60 Anjanapura, NarayanaNagar, BCMC Layout, J.P.Nagar, Gubblala, BCC Layout. Agents Excuse. 9380647082.

Multiple Locations

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout. Any BDA Sites Wanted. Contact: SAPTHAGIRI. 9900268073, 9448068073.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

COMMERCIAL : Fully Furnished Grade A IT Office Space 4500.sft to 9000.sft AVAILABLE for RENT`near Yeshwanthpur Metro`with all amenities. 9916155055.

5_BHK DUPLEX house / office for Rent 7,000 sq. ft with basement parking for 3 lakhs & 3,000 sq. ft office space for Rent on 2nd floor Kumara park West serpentine Road. Rent 1.5 lakhs Ph - 9900065660, 8971192652,

RENT SHOWROOM SPACE G+1 4960sft HRBR Ring Road OFFICE SPACE FULL BUILDING 14000sft Hayes Road off Residency Road 8867580471 8050897262

Flats

2/3 BHK new flats with interiors at
VARTHUR
Ready to move in
with rent of Rs.40/- per Sft negotiable.
Those interested for immediate occupation, may Contact :
99621 82221
97413 33222
email: vrsn@live.com
SAA

House

SANJAYNAGAR, RMV Rental Independent 6BHK 75k P/m 4BHK Duplex 70k P/m 30x40 South 18k Psqft 40x60 East 18k Psqft 30x60 @4.5Cr 5Houses BDA: 9844009992 Only If Genuine

BUSINESS

Business to Business

Consultants

WE ARE a group of Retired Bank Executives with experience in Loan Closures and Settlements, NPA Loans, DRT cases, Loan Defaulters. From Impossible to make it Possible Call Arun 9945699789.

Services

PLASTIC JERRY_CANS & CONTAINERS AVAILABLE from 50ML to 10LITER Containers/CANS for Packing Phenyl, Pharmaceuticals Products & Chemicals. BRC-IOP Certified 5LITER Can Virgin Plastic 25.50 Per Piece. Screen Printing on Can (Facility Available) Contact: M/S.Blow Moulders India,Magadi Road Banglalore-560091 Mr.Anjan 9900708057 Mr.Bharat 9845037787

Business Offers

Finance

WANTED BUSINESS Partners Saree Business 12 Lakhs Investment Monthly Income 2 Lakhs Contact: 8892501007/ 9606701007

PERSONAL

Change of Name

CHANGE OF NAME
I, **PRASHANSA** D/o Rakesh Kumar, R/at # G-005, G-Block, Sumadhura Eden Garden, 1st Main Road, Off. Sai Baba Ashram Road, Doddabanahalli, Near Atal Bihari Botanical Garden,Bengaluru-560067 have changed my name to **PRASHANSA RAKESH** vide affidavit dt:23-12-2023, before Notary Indira S.S., Bengaluru Henceforth I shall be called **PRASHANSA RAKESH** only.

CHANGE OF NAME
I, **SUKANYA LINGANAHALLI KRISHNAPPA** W/o Sampath Kumar, R/at # 353, Near Ganesha Temple, Old Baiyyappanahalli, Maruthi Seva Nagar, Bangalore- 560033 have changed my name to **SUKANYA KRISHNAPPA** vide affidavit dt:14-12-2023, before Notary Y.R. Chandrasekar, Bangalore. Henceforth I shall be called **SUKANYA KRISHNAPPA** only.

ಕ್ರಿಸ್‌ಮಸ್ ಪ್ರಯುಕ್ತ ದೀಪಾಲಂಕಾರದಿಂದ ಕಂಗೊಳಿಸುತ್ತಿರುವ ನಗರದ ಸೇಂಟ್ ಮೇರಿ ಬೆಸಿಲಿಕಾ ಚರ್ಚಿನ ಮೇಲ್ಭಾಗ ಜೆಟ್ ವಿಮಾನವೊಂದು ಶನಿವಾರ ಸಾಗಿದಾಗ ಕಂಡುಬಂದ ದೃಶ್ಯ — ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಕೋವಿಡ್: ಮುನ್ನೆಚ್ಚರಿಕೆ ಕ್ರಮಕೈಗೊಳ್ಳಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಸಿದ್ಧತೆ ಪರಿಶೀಲಿಸಲು ವಿಕ್ಟೋರಿಯಾ ಆಸ್ಪತ್ರೆಗೆ ಶನಿವಾರ ಭೇಟಿ ನೀಡಿದ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ, ಕೋವಿಡ್ ಮೊದಲ ಮತ್ತು ಎರಡನೇ ಅಲೆಯಲ್ಲಿ ಆದ ಪ್ರಮಾದಗಳು ಮರುಕಳಿಸದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ವೈದ್ಯಾಧಿಕಾರಿಗಳಿಗೆ ಸೂಚಿಸಿದರು.

ಆಸ್ಪತ್ರೆಯಲ್ಲಿ ಕೋವಿಡ್ ಪೀಡಿತರ ದಾಖಲಾತಿಗೆ ಮಾಡಲಾದ ಹಾಸಿಗೆ ವ್ಯವಸ್ಥೆ, ಕೋವಿಡ್ ಪರೀಕ್ಷೆ, ಔಷಧ ದಾಸ್ತಾನು ಸೇರಿ ವಿವಿಧ ವ್ಯವಸ್ಥೆಯನ್ನು ಪರಿಶೀಲಿಸಿದ ಅವರು, ಕೋವಿಡ್ ನಿರ್ವಹಣೆಗೆ ಕೈಗೊಳ್ಳಲಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಮಾಹಿತಿ ಪಡೆದುಕೊಂಡರು.

‘ಯುದ್ಧಕಾಲದಲ್ಲಿ ಶಸ್ತ್ರಾಭ್ಯಾಸ ಮಾಡದೆ, ಈಗಲೇ ಸೋಂಕು ತಡೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಕೋವಿಡ್ ನಿರ್ವಹಣೆಯಲ್ಲಿ ಉದಾಸೀನತೆ ತೋರಿದರೆ ಸಂಬಂಧಪಟ್ಟವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ. ವೈದ್ಯಕೀಯ ಆಮ್ಲಜನಕ ಹಾಸಿಗೆ, ವೆಂಟಿಲೇಟರ್, ಔಷಧ ಸೇರಿ ಯಾವುದಕ್ಕೂ ಕೊರತೆ ಆಗಬಾರದು’ ಎಂದು ವೈದ್ಯಾಧಿಕಾರಿಗಳಿಗೆ ಸೂಚಿಸಿದರು.

ತಾಂತ್ರಿಕ ಸಲಹಾ ಸಮಿತಿಯ ಶಿಫಾರಸು ಗಳನ್ನು ಪೂರ್ಣಪ್ರಮಾಣದಲ್ಲಿ ಜಾರಿ ಮಾಡಬೇಕು. ಪರಿಸ್ಥಿತಿ ನೋಡಿಕೊಂಡು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಕೋವಿಡ್ ಚಿಕಿತ್ಸೆಗೆ ಸಂಬಂಧಿಸಿದಂತೆ ಅಣಕು ಪ್ರದರ್ಶನ ನಡೆಸಬೇಕು’ ಎಂದು ವೈದ್ಯಾಧಿಕಾರಿಗಳಿಗೆ ಸೂಚಿಸಿದರು.



‘ಇದೇ 26ರಂದು ತಾಂತ್ರಿಕ ಸಲಹಾ ಸಮಿತಿ ಹಾಗೂ ಸಚಿವ ಸಂಪುಟ ಉಪಸಮಿತಿ ಸಭೆ ನಡೆಯಲಿದೆ. ಸಭೆಯ ಬಳಿಕ ಸರ್ಕಾರ ಮುಂದಿನ ಹೆಜ್ಜೆ ಇಡಲಿದೆ

ಡಾ. ಶರಣ ಪ್ರಕಾಶ್ ಪಾಟೀಲ
ವೈದ್ಯಕೀಯ ಶಿಕ್ಷಣ ಸಚಿವ

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕೊರೊನಾ ವೈರಾಣುವಿನ ರೂಪಾಂತರಿ ಜೆಎನ್.1 ಅಷ್ಟೊಂದು ಅಪಾಯಕಾರಿಯಲ್ಲವೆಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ. ಆದ್ದರಿಂದ ಜನರು ಅನಗತ್ಯವಾಗಿ ಭಯ ಭೀತರಾಗುವುದು ಬೇಡ. ಆದರೆ, ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು’ ಎಂದರು.

ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಡಾ. ರಮೇಶ್ ಕೃಷ್ಣ ಇದ್ದರು.

ಕಾರ್ಯಕ್ರಮದಲ್ಲಿ ಹಿ.ಚಿ.ಬೋರಲಿಂಗಯ್ಯ ಪುಸ್ತಕಗಳನ್ನು ಬಿಡುಗಡೆ ಮಾಡಿದರು. ಸಂಘದ ಕಾರ್ಯದರ್ಶಿ ಆರ್. ದೊಡ್ಡೆಗೌಡ, ವಿಮರ್ಶಕ ಎಸ್‌ಆರ್. ವಿಜಯಶಂಕರ, ವೂಡೇ ಪಿ. ಕೃಷ್ಣ, ನಿಡಸಾಲೆ ಪುಟ್ಟಸ್ವಾಮಯ್ಯ, ಪುಸ್ತಕಗಳ ಲೇಖಕರು ಪಾಲ್ಗೊಂಡಿದ್ದರು

‘ಉದ್ದೇಶ ಮರೆತ ಪುಸ್ತಕ ಪ್ರಾಧಿಕಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪುಸ್ತಕ ಸಂಸ್ಕೃತಿಯನ್ನು ಸದೃಢಗೊಳಿಸಬೇಕಾದ ಕನ್ನಡ ಪುಸ್ತಕ ಪ್ರಾಧಿಕಾರವು ಮೂಲ ಉದ್ದೇಶದಿಂದ ವಿಮುಖವಾಗಿ, ಪುಸ್ತಕ ಪ್ರಕಟಣೆಗೆ ಸೀಮಿತವಾಗಿರುವುದು ಖಂಡನೀಯ’ ಎಂದು ಜಾನಪದ ವಿದ್ವಾಂಸ ಹಿ.ಚಿ.ಬೋರಲಿಂಗಯ್ಯ ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ ನಗರದಲ್ಲಿ ಶನಿವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ವಿವಿಧ ಲೇಖಕರ 8 ಪುಸ್ತಕಗಳನ್ನು ಬಿಡುಗಡೆ ಮಾಡಿ, ಮಾತನಾಡಿದರು.

‘ಪುಸ್ತಕ ಪ್ರಾಧಿಕಾರವು ಲೇಖಕರು, ಪ್ರಕಾಶಕರು ಮತ್ತು ಓದುಗರ ನಡುವೆ ಸಮನ್ವಯ ಸಾಧಿಸಿ, ಪುಸ್ತಕ ಸಂಸ್ಕೃತಿಯನ್ನು ಬೆಳೆಸುವಂತಾಗಬೇಕು. ರಾಜ್ಯದಲ್ಲಿ ಪ್ರತಿ ವರ್ಷ ಸುಮಾರು 8 ಸಾವಿರ ಪುಸ್ತಕಗಳು ಪ್ರಕಟವಾಗುತ್ತಿವೆ. ಇದು ಕನ್ನಡ ಭಾಷೆಯ ಸೃಜನಶೀಲತೆಗೆ ಸಾಕ್ಷಿ. ಪ್ರಕಟಗೊಂಡ ವರ್ಷವೇ ಆ ಪುಸ್ತಕಗಳನ್ನು ಜನರಿಗೆ ತಲುಪಿಸುವ ಕೆಲಸ ಸರ್ಕಾರದಿಂದ ಆಗುತ್ತಿಲ್ಲ. ವಿವಿಧ ಕಾಮಗಾರಿಗಳಿಗೆ ಸಾವಿರಾರು ಕೋಟಿ ರೂಪಾಯಿ ಹಣ ವೆಚ್ಚ ಮಾಡುವ ಸರ್ಕಾರ, ಪುಸ್ತಕ ಖರೀದಿಗೆ ಅಗತ್ಯವಿರುವ ₹10 ಕೋಟಿ ಹಣ ನೀಡಲು ಹಿಂದೆ ಮುಂದೆ ನೋಡುತ್ತಿರುವುದು ನಮ್ಮ ವ್ಯವಸ್ಥೆಯ ಜ್ಞಾನ ದಾರಿದ್ರ್ಯ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

2024ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಮಾಡಿ ಮಾತನಾಡಿದ ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಂಸ್ಥೆಯ ಗೌರವ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, ‘ಪುಸ್ತಕ ಸಂಸ್ಕೃತಿ ಸಮಾಜದ ಮೌಢ್ಯವನ್ನು ಅಳಿಸಲು ಮತ್ತು ಸುಸಂಸ್ಕೃತ ಸಮಾಜ ನಿರ್ಮಾಣ ಮಾಡಲು ಸಹಕಾರಿ. ಒಂದು ತಲೆಮಾರಿನ ಅನುಭವ, ಜ್ಞಾನವನ್ನು ಇನ್ನೊಂದು ತಲೆಮರಿಗೆ ತಲುಪಿಸುವ ಸಾಧನ ಪುಸ್ತಕ. ಸಂಕಷ್ಟದಲ್ಲಿರುವ ಪುಸ್ತಕೋದ್ಯಮದ ಸಮಸ್ಯೆಗಳನ್ನು ಆಳುವವರು ಗಮನಿಸಬೇಕು’ ಎಂದರು.

ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ, ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕನ್ನಡ ಪುಸ್ತಕ ಗಳನ್ನು ಖರೀದಿಸಲು ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ₹ 10 ಕೋಟಿ ಅನುದಾನವನ್ನು ಕಳೆದ ಬಜೆಟ್‌ನಲ್ಲಿ ಘೋಷಿಸಿದ್ದರು. ಆ ಹಣ ಬಿಡುಗಡೆಗೆ ಆರ್ಥಿಕ ಇಲಾಖೆ ಅನಗತ್ಯ ಕಾರಣಗಳನ್ನು ಕೇಳಿ ಸತಾಯಿಸುತಿದೆ. ಸಿದ್ದರಾಮಯ್ಯ ಅವರು ತಕ್ಷಣ ಹಣ ಬಿಡುಗಡೆ ಮಾಡಿಸಬೇಕು’ ಎಂದು ಮನವಿ ಮಾಡಿದರು.

ಬಿಡುಗಡೆಯಾದ ಪುಸ್ತಕಗಳು

ಆರ್.ಕೆ. ಮಧುಕರ್ ಅವರ ‘ದೇಶ ವಿದೇಶದ ಅದ್ಭುತ ಲೋಕಕಥೆಗಳು’ (ಸಪ್ನ ಬುಕ್ ಹೌಸ್), ಕೆ.ನಟರಾಜ್ ಅವರ ‘ದುಬೈ ನಾಡಿನಲ್ಲಿ ಇಪ್ಪತ್ತು ದಿನಗಳು’ (ಸುಧನ್ವ ಪಬ್ಲಿಕೇಷನ್ಸ್), ಎಸ್.ಆರ್. ವಿಜಯಶಂಕರ್ ಅವರ ‘ಒಡನಾಟ’ (ವಸಂತ ಪ್ರಕಾಶನ), ಮಂಡಗದ್ದೆ ಶ್ರೀನಿವಾಸಯ್ಯ ಅವರ ‘ಸ್ವಾಮಿ ವಿವೇಕಾನಂದ’ (ನಿರಂತರ), ಶ್ರೀಧರ್ ರಾಮಲಿಂಗಪ್ಪ ಅವರ ‘ಅಸ್ತಿಯೋ ಅಸ್ತಿತ್ವವವೋ’ (ನಿರಂತರ), ಶ್ರೀಧರ್ ಎಚ್.ಜಿ. ಅವರ ‘ನೆನಪಾಗಿ ಉಳಿದವರು’ (ಅನ್ನಪೂರ್ಣ ಪಬ್ಲಿಷಿಂಗ್ ಹೌಸ್), ನಿಡಸಾಲೆ ಪುಟ್ಟಸ್ವಾಮಯ್ಯ ಅವರ ‘ಬೆಳೆಯೋಣ ಬನ್ನಿ’ (ಗೀತಾಂಜಲಿ ಪಬ್ಲಿಕೇಷನ್ಸ್) ಹಾಗೂ ಬಿ.ದಿವ್ಯಾನಂದಮೂರ್ತಿ ಅವರ ‘ಅನುಭವದ ಜೇನಹನಿ ಅಮೃತದ ಸಂಜೀವಿನಿ’ W(ಸ್ನೇಹ ಬುಕ್ ಹೌಸ್) ಪುಸ್ತಕಗಳು ಬಿಡುಗಡೆಯಾದವು.

ಬಲೆಗೆ ಬಿದ್ದ 400 ಕೆ.ಜಿ ಮಡಲ್ ಮೀನು

ಉಡುಪಿ: ಮೀನುಗಾರರ ಬಲೆಗೆ 400 ಕೆ.ಜಿ ತೂಕದ ಮಡಲ್ ಮೀನು ಬಿದ್ದಿದೆ. ಮಲ್ಪೆ ಬಂದರಿನಿಂದ ಆಳಸಮುದ್ರ ಮೀನುಗಾರಿಕೆಗೆ ತೆರಳಿದ್ದ ಬಲರಾಮ ಹೆಸರಿನ ಪರ್ಸಿನ್ ಬೋಟ್‌ಗೆ ದೈತ್ಯ ಮೀನು ಸಿಕ್ಕಿದೆ.

ಸಾಮಾನ್ಯವಾಗಿ ಸಣ್ಣಗಾತ್ರದ ಮಡಲ್ ಮೀನುಗಳು ದೊರೆಯುತ್ತವೆ. ಆದರೆ, ನಾಲ್ಕು ಟನ್ ತೂಕದ ಮೀನು ದೊರೆತಿರುವುದು ಬಹಳ ಅಪರೂಪ. ವೈಜ್ಞಾನಿಕವಾಗಿ ಬಿಲ್‌ಫಿಶ್ ಹೆಸರಿನಲ್ಲಿ ಕರೆಯುವ ಮಡಲ್ ಮೀನನ್ನು ಸ್ಥಳೀಯವಾಗಿ ಕಟ್ಟೆಕೊಂಬು ಎಂದೂ ಕರೆಯುತ್ತಾರೆ ಎಂದು ಮೀನುಗಾರರು ತಿಳಿಸಿದ್ದಾರೆ.

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ

ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರಜಿಲ್ಲೆ – 562123,
E-mail: itstaff_ulb_mnhalli@yahoo.com ದೂರವಾಣಿ ಸಂಖ್ಯೆ: 080–23718487

ಸಂಖ್ಯೆ: ಮಾ.ನ.ಕಾ/ತಾ.ಶಾ/12/2023–24 ದಿನಾಂಕ: 22–12–2023

ಟೆಂಡರ್ ಪ್ರಕಟಣೆ
(Through GOK e-Procurement Portal www.kppp.karnataka.gov.in only)

2021–22ನೇ ಸಾಲಿನ 15ನೇ ಹಣಕಾಸು MPC Grants ಮತ್ತು 2023–24ನೇ ಸಾಲಿನ ನಗರಸಭಾ ಅನುದಾನದ ಅಡಿಯಲ್ಲಿ ಮಾದನಾಯಕನಹಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಪೌರಾಯುಕ್ತರು, ನಗರಸಭೆ ಮಾದನಾಯಕನಹಳ್ಳಿ ಇವರ ಹೆಸರಿನಲ್ಲಿ ಇ–ಪ್ರಕ್ಯೂರ್‌ಮೆಂಟ್ ವೇದಿಕೆಯಡಿಯಲ್ಲಿ ಈ ಕೆಳಕಂಡಂತೆ ಐಟಂವಾರು ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದ್ದು, ಕರ್ನಾಟಕ ಲೋಕೋಪಯೋಗಿ ಇಲಾಖೆ/ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಇಲಾಖೆಯಲ್ಲಿ ನೊಂದಾಯಿಸಿದ 3ನೇ ದರ್ಜೆ ಹಾಗೂ ಮೇಲ್ಪಟ್ಟ ಅರ್ಹ ಹಾಗೂ ಅನುಭವವುಳ್ಳ ಸಿವಿಲ್ ಗುತ್ತಿಗೆದಾರರು (ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನಂತೆ) ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಕಛೇರಿಯ ವೇಳೆಯಲ್ಲಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿರುತ್ತದೆ.

ಕ್ರಮ. ಸಂ.	ಇಂಡೆಂಟ್	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ (ರೂ.ಗಳಲ್ಲಿ)	ಕಾಲಾವಧಿ	ವರ್ಗ
1	DMA/2023-24/EL/WORK_INDENT10611	3.91	4,888/–	03 ತಿಂಗಳು	SC
2	DMA/2023-24/WS/WORK_INDENT10605	21.00	25,000/–	03 ತಿಂಗಳು	SC
3	DMA/2023-24/WS/WORK_INDENT10598	33.00	66,000/–	03 ತಿಂಗಳು	Others
4	DMA/2023-24/WS/WORK_INDENT10597	38.00	25,000/–	03 ತಿಂಗಳು	ST
5	DMA/2023-24/WS/WORK_INDENT10596	30.00	60,000/–	03 ತಿಂಗಳು	Others
6	DMA/2023-24/WS/WORK_INDENT10595	27.00	54,000/–	03 ತಿಂಗಳು	Others
7	DMA/2023-24/INDENT1059	18.02	45,000/–	03 ತಿಂಗಳು	Others
8	DMA/2023-24/SE1753	15.18	37,950/–	12 ತಿಂಗಳು	Others
9	DMA/2023-24/WS/WORK_INDENT10593	8.00	20,000/–	03 ತಿಂಗಳು	Others
10	DMA/2023-24/WS/WORK_INDENT10592	12.50	31,250/–	03 ತಿಂಗಳು	Others
11	DMA/2023-24/WT/WORK_INDENT10478	7.00	17,500/–	03 ತಿಂಗಳು	Others

ಟೆಂಡರ್ ಸಲ್ಲಿಸುವ ವಿವರಗಳು:– (1) ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಲು, ನಮೂನೆಗಳನ್ನು ಆನ್‌ಲೈನ್‌ನಲ್ಲಿ ಪಡೆಯಲು, ಹಾಗೂ ಆನ್‌ಲೈನ್ ಮೂಲಕ ಭರ್ತಿಮಾಡಿದ ನಮೂನೆ ಮತ್ತು ಇ.ಎಂ.ಡಿ ರೇವಣಿಯನ್ನು ಸ್ವೀಕರಿಸುವ ಅವಧಿ ಕ್ರ.ಸಂ: 1 ರಿಂದ 08 ರವರೆಗಿನ ಕಾಮಗಾರಿಗಳಿಗೆ ದಿನಾಂಕ: **08–01–2024 ಸಂಜೆ 5.30 ಗಂಟೆಯವರೆಗೆ** ಮತ್ತು ಕ್ರ.ಸಂ: 09 ರಿಂದ 11 ರವರೆಗಿನ ಕಾಮಗಾರಿಗಳಿಗೆ ದಿನಾಂಕ: **01–01–2024 ಸಂಜೆ 5.30 ಗಂಟೆಯವರೆಗೆ.** (2) ಸಲ್ಲಿಸಿರುವ ಟೆಂಡರ್‌ಗಳನ್ನು ತೆರೆಯುವ ದಿನಾಂಕ ಕ್ರ.ಸಂ: 1 ರಿಂದ 08 ರವರೆಗಿನ ಕಾಮಗಾರಿಗಳಿಗೆ ದಿನಾಂಕ: **10–01–2024 ಬೆಳಿಗ್ಗೆ 11.00 ಗಂಟೆಯವರೆಗೆ** ಮತ್ತು ಕ್ರ.ಸಂ: 09 ರಂದ 11 ರವರೆಗಿನ ಕಾಮಗಾರಿಗಳಿಗೆ ದಿನಾಂಕ: **03–01–2024 ಬೆಳಿಗ್ಗೆ 11.00 ಗಂಟೆಯವರೆಗೆ** ಅಥವಾ ಪೌರಾಯುಕ್ತರು ಸೂಚಿಸುವ ದಿನಾಂಕದಂದು.

ಸೂಚನೆ:– ಈ ಕಛೇರಿಯಿಂದ ನೀಡುವ ಇತರೆ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು, ಹಾಗೂ ಹೆಚ್ಚಿನ ವಿವರಗಳಿಗೆ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ಪೌರಾಯುಕ್ತರು,
ನಗರಸಭೆ, ಮಾದನಾಯಕನಹಳ್ಳಿ

ವಾಸಾಸಂಇ/ವಾಪ್ರಾ/2687/ಸ್ಪ್ಯಾನ್/2023–24

ಟೆಲಿಗಾಂ ರೆಗ್ಯೂಲಟರಿ ಅಥಾರಿಟಿ ಆಫ್ ಇಂಡಿಯಾ

ಮಹಾನಗರ ದೂರಸಂಚಾರ ಭವನ, ಜೆ.ಎಲ್.ಎನ್.ಮಾರ್ಗ್, (ಹಳೇ ಮಿಂಟೋ ರಸ್ತೆ)
ಜಾಕೀರ್ ಹುಸೇನ್ ಕಾಲೇಜ್ ಹತ್ತಿರ, ನವದೆಹಲಿ–110002
ಖಾಲಿ ಹುದ್ದೆಗಳ ನೇಮಕಾತಿಗಾಗಿ ಸುತ್ತೋಲೆ ನಂ. 1–13/2023–ಎ&ಪಿ

ವಿಷಯ: ವಿದೇಶಿ ಸೇವಾ ನಿಯಮಗಳ ಮೇಲೆ ನಿಯೋಜನೆಯ ಮೇರೆಗೆ ಬೆಂಗಳೂರಿನ TRAI ಪ್ರಾದೇಶಿಕ ಕಚೇರಿಯಲ್ಲಿ ಸಹಾಯಕ ಹುದ್ದೆಯನ್ನು ಭರ್ತಿ ಮಾಡುವ ಕುರಿತಾಗಿ.

ಟೆಲಿಕಾಂ ರೆಗ್ಯುಲೇಟರಿ ಅಥಾರಿಟಿ ಆಫ್ ಇಂಡಿಯಾವು ಬೆಂಗಳೂರಿನಲ್ಲಿರುವ ತನ್ನ ಪ್ರಾದೇಶಿಕ ಕಚೇರಿಯಲ್ಲಿ ವಿದೇಶಿ ಸೇವಾ ನಿಯಮಗಳ ಮೇಲೆ ಡೆಪ್ಯುಟೇಶನ್‌ನಲ್ಲಿ ಈ ಕೆಳಗಿನ ಹುದ್ದೆಯನ್ನು ಭರ್ತಿ ಮಾಡಲು ಪ್ರಸ್ತಾಪಿಸಿದೆ.

ಹುದ್ದೆಯ ಹೆಸರು	ವೇತನ ಶ್ರೇಣಿ ಮತ್ತು ದರ್ಜೆ ವೇತನ
ಸಹಾಯಕ	ವೇತನ ಹಂತ–6 ರೂ.35400–112400 7ನೇ ಸಿಪಿಸಿ ಮ್ಯಾಟ್ರಿಕ್ಸ್ ವೇತನದ ಪ್ರಕಾರ (ಪೂರ್ವ ಪರಿಷ್ಕೃತ ಪಿಬಿ–2, ರೂ.9300–34800+ಜಿಪಿ ರೂ. 4200)

2. ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: 29ನೇ ಜನವರಿ 2024
3. ಹೆಚ್ಚಿನ ಮಾಹಿತಿಯನ್ನು TRAI ನ ವೆಬ್‌ಸೈಟ್: www.trai.gov.in ನಿಂದ ಪಡೆಯಬಹುದು.

CBC-06202/12/0052/2324

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

Jayashree Projects & Marketing
ISO: 9001:2015 Certified Company
Invites investors to become our
“PARTNER ASSOCIATES”
for our Highly Profitable & Lucrative
Real Estate “Property Flipping” Business
Earn ROI much higher than Stock Market, Mutual Fund, Bank Deposit or any other Investment
every 3-4 months!
Can't Believe? We are very Serious!
Drop into our office for a Small Presentation & Serious Discussion after taking prior appointment.
91139 47586/ 63623 83661
www.jayashreeprojects.com

JOB OPPORTUNITIES

Teachers/ Professors

NIRMAN INTERNATIONAL PUBLIC SCHOOL- CBSE, Near Automated RTO,7th Block, Vishweshwaraiah Layout, Bangalore-91 Requires Qualified TEACHERS for all the subjects from Nursery to Grade-X. Contact: 8123030731/ 9986055970. Walk-in Interview on all working days

SRI KK EDUCATION CENTRE
(Affiliated to CBSE, Aff. No. 830256)
Kadabagere, Magadi Road, Bangalore
RECRUITMENT OF STAFF
PRE-PRIMARY PROGRAMME
Early Childhood Education / NTT/ MTT
PRIMARY & SECONDARY PROGRAMME
◆English ◆Maths ◆Hindi ◆Social Studies ◆Science ◆Computer Science ◆Physical Educator
Qualification: B.Ed., M.Ed., B.Sc., BCA, with minimum 3 years of experience.
Submit your application in pdf with a photo to
Email: srikkec@gmail.com | Ph: 9886535292

ST. JOHN'S HIGH SCHOOL
132, St. John's Church Road, Cleveland Town, Bangalore – 560 005
Email : contactus@csistjohnshighschool.edu.in
Website : www.johnshighedu.com :
Phone Nos: 080-29719720/ 29719729
REQUIRES
1) **PHYSICS TEACHER** – High School (ISC), M.Sc. (Physics) B.Ed.,
2) **ENGLISH TEACHER** – High School,(ISC), M.A./M.Phil.(English) B.Ed.
3) **ENGLISH TEACHER** – High School, M.A. (English) B.Ed.,
4) **HISTORY TEACHER** – High School, M.A. (History) B.Ed.,
5) **GEOGRAPHY TEACHER** – High School, M.A./M.Sc. (Geography) B.Ed.,
6) **ENGLISH TEACHER** – Middle School, B.A.(English) B.Ed.
7) **HISTORY & GEOGRAPHY TEACHER** – Middle School, B.A. (History & Geography) B.Ed.,
8) **JUNIOR SCHOOL TEACHER** – Junior School, Graduate with B.Ed.,
9) **ART TEACHER** – Kindergarten/ Junior School, Graduate with BFA.,
10) **PHYSICAL EDUCATION TEACHER**- Kindergarten, Graduate with B.P.Ed.,
11) **SECRETARY TO PRINCIPAL** - Graduate with knowledge of computer. Diploma in Secretarial Course
12) **LAB ASSISTANT** - Graduate in Science (PCM/CBZ)

EXPERIENCE : Preferred 5 years of teaching experience at ISC/ICSE/CBSE Institution. The Candidates should have studied in an English Medium School. All Degrees must be obtained by regular stream only. The Application Forms are available in the SCHOOL OFFICE from 03.01.2024 to 08.01.2024 from 9.30 a.m to 1.00 p.m. The last date for submission of filled in application forms with relevant documents is 09.01.2024 by 3.00 p.m.

"WANTED BRANCH_MANAGERS Female Telecallers Sales-Managers Sales_Executives Freelancers Salary:_₹15k to-1Lakh Plus Incentives. 9071615300, 7829956789. Work_Location: M.G.Road, RT.Nagar, Vasanthnagar, Mysore_Road, Nagawara, Shivajinagar &.Yelahanka. hrjp365@gmail.com

Marketing & Sales

A Leading laboratory in north Bangalore is looking for Business Development Managers/ Executives. Please send your resumes to northcitylaboratories@gmail.com, for further details contact 9845794555

SALES EXECUTIVE Experience in kitchen sink industry for Bangalore. 9370090700, hr@sincoresinks.com

Wanted

ZAPPFRESH HIRING: INCHARGE: Lead plant operations, manage inventory. Poultry experience, basic computer skills required. Location: Ekasipura, Doddaballapur. SALES EXECUTIVE: Boost fresh and frozen meat sales in Bengaluru. Email resume to: hrblr@zappfresh.com

WANTED_TRAINED Post_Graduate Teachers for`Kannada. English. Physical Education,Hindi Chemistry, Physics. Social`Studies, Computer Science Walk-in Interview`on Tuesday_26th December`2023 With The`Secretary, Srikrishna International School, ITI-Layout, BSK`3rd Stage Bangalore-85. Phone:26690799.

General

REPUTED SECURITY Agency Require Experienced Field Officer, Marketing Manager/ Operations, Tally Clerk, Personnel Driver. Bangalore Ph:080-23437474 23437797 Mob:8892073262

FEMALE ASSISTANT with excellent communication skills, Proficient in Computer with or without experience, for Hotel Administrative office on Brigade Rd. Bangalore, Store Assistant (Male Only). Call: 9980758212, imperialhtr@gmail.com

REQUIRED VRS are Bank Officials for our Esteem Organisation, Contact: 9480077845.

WANTED FRESHER Civil_Engineers or Supervisor_For Construction Company WhatsApp only For_Marathahalli: 9916434972 For Hoskote: 9019031288

Manager

WANTED A MANAGER for a reputed Association with Schools and Colleges with a minimum experience of 3 years. Send biodata with photograph to: attarsyed@gmail.com

EDUCATIONAL

Admission

JOIN/ COMPLETE- SSLC, ITI, PUC, B,Com, BBA, BCA, AMIIE MBA/ B.Tech etc. Please Call- 9341273990.

Colleges

GNM NURSING College Available For Sale Pref Person Having Own Hospital Contact: 8197196958



MATRIMONIAL

Brides Wanted

Muslim

MUSLIM BOY from a well off family of Bangalore 28 Years/ 5'9 Working as a Software Engineer Posted in BLR 70 LPA is looking for a suitable match (080-69144008)

MUSLIM BOY 34 Years 5'10 (Doctor) From an Affluent family (Only Son) is looking for a suitable match for Early Marriage (080-69141304)

JOB
To Place your Classified Ads Contact:
9886213331

Grooms Wanted

Muslim

MUSLIM BEAUTIFUL Girl from banaglore 2000 Born 5'5 Very Fair and beautiful is looking for a suitable match from a good family only serious seekers can contact (080-69144008)

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ವಿಚಾರ ಸಂಕಿರಣದಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ

2029ಕ್ಕೆ 1.50 ಲಕ್ಷ ವೈದ್ಯಕೀಯ ಸೀಟು ಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರಿನಲ್ಲಿ ಶನಿವಾರ ಕಾಮೆಡ್ ಕೆ ಕೇರ್, ಎಜುಕೇಶನ್ ಪ್ರಮೋಷನ್ ಸೊಸೈಟಿ ಫಾರ್ ಇಂಡಿಯಾ (ಇಪಿಎಸ್‌ಐ) ಶನಿವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸಮಾವೇಶದ ಸಮಾರೋಪದಲ್ಲಿ ಟಿ.ಜಿ. ಸೀತಾರಾಮ್, ಶರಣಪ್ರಕಾಶ ಪಾಟೀಲ, ಪ್ರಲ್ಹಾದ ಜೋಶಿ, ಎಂ.ಆರ್. ಜಯರಾಂ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ಬಡವರ ಮಕ್ಕಳೂ ವೈದ್ಯಕೀಯ ಶಿಕ್ಷಣ ಪಡೆಯಬೇಕು ಎನ್ನುವ ಧ್ಯೇಯ ಇಟ್ಟುಕೊಂಡು ವೈದ್ಯಕೀಯ ಸೀಟುಗಳ ಸಂಖ್ಯೆ ಹೆಚ್ಚಿಸಲಾಗುತ್ತಿದೆ. 2029ರ ವೇಳೆಗೆ 1.50 ಲಕ್ಷ ಸೀಟುಗಳು ಲಭ್ಯವಾಗಲಿವೆ ಎಂದು ಕೇಂದ್ರದ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಕಾಮೆಡ್ -ಕೆ ಕೇರ್, ಎಜುಕೇಶನ್ ಪ್ರಮೋಷನ್ ಸೊಸೈಟಿ ಫಾರ್ ಇಂಡಿಯಾ (ಇಪಿಎಸ್‌ಐ) ಶನಿವಾರ ಹಮ್ಮಿಕೊಂಡಿದ್ದ ವಿಚಾರ ಸಂಕಿರಣ ಹಾಗೂ ರಾಷ್ಟ್ರೀಯ ಸಮಾವೇಶದ ಸಮಾರೋಪದಲ್ಲಿ ಅವರು ಮಾತನಾಡಿದರು.

2014ರಲ್ಲಿ 51 ಸಾವಿರ ಸೀಟುಗಳು ಮಾತ್ರವೇ ಇದ್ದವು. ಈಗ ಸೀಟುಗಳ ಸಂಖ್ಯೆ ಒಂದು ಲಕ್ಷ ದಾಟಿದೆ. ಸೀಟು ಹೆಚ್ಚಳದ ನಿರ್ಧಾರದಿಂದ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಮಕ್ಕಳಿಗೂ ವೈದ್ಯಕೀಯ ಶಿಕ್ಷಣ ದೊರಕಲಿದೆ. ದೇಶದಲ್ಲಿನ ವೈದ್ಯರ ಕೊರತೆಯೂ ನೀಗಲಿದೆ ಎಂದರು.

ದೇಶದ ಪ್ರಗತಿಗೆ ಖಾಸಗಿ ಶಿಕ್ಷಣ ಸಂಸ್ಥೆಗಳು ಸಾಕಷ್ಟು ಕೊಡುಗೆ ನೀಡಿವೆ. 2047ರ ವೇಳೆಗೆ ವಿಕಸಿತ ಭಾರತ ನಿರ್ಮಾಣದ ಪ್ರಯತ್ನಕ್ಕೆ ಎಲ್ಲರೂ ಕೈಜೋಡಿಸಬೇಕು. ಚೀನಾ ಹಾಗೂ ಭಾರತಕ್ಕೆ ಯುವ ಜನರೇ ಶಕ್ತಿ. ಇಂತಹ ಶಕ್ತಿಯನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ ಪಾಟೀಲ, ಎಂಜಿನಿಯರಿಂಗ್ ಪದವಿ ಪಡೆದ ಸಾಕಷ್ಟು ವಿದ್ಯಾರ್ಥಿಗಳಿಗೆ ಸೂಕ್ತ ಕೆಲಸ ಸಿಗುತ್ತಿಲ್ಲ. ಕೌಶಲದ ಕೊರತೆ ಇದಕ್ಕೆ ಪ್ರಮುಖ ಕಾರಣ. ಕೌಶಲ ಕೊರತೆ ನೀಗಿಸಲು ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಂಡಿದೆ ಎಂದರು.

ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಅಧ್ಯಕ್ಷ ಟಿ.ಜಿ.ಸೀತಾರಾಂ, ತಾಂತ್ರಿಕ ಶಿಕ್ಷಣದಲ್ಲಿ ಸಾಕಷ್ಟು ಬದಲಾವಣೆ ತರಲಾಗಿದೆ. ಪಠ್ಯಪುಸ್ತಕ ಪರಿಷ್ಕರಣೆಯಾಗಿದೆ. 13 ಭಾಷೆಗಳಲ್ಲಿ ಪುಸ್ತಕಗಳು ದೊರೆಯುತ್ತಿವೆ. ಎಐಸಿಟಿಇ ಅಧೀನದಲ್ಲಿರುವ ಕಾಲೇಜುಗಳು ಐಐಟಿ ಮಾದರಿಯ ಸೌಲಭ್ಯ, ಶಿಕ್ಷಣ ನೀಡುತ್ತಿವೆ ಎಂದರು.

ಇಪಿಎಸ್‌ಐ ಸಂಸ್ಥೆಯ ನೂತನ ಅಧ್ಯಕ್ಷ ಎಂ.ಆರ್.ಜಯರಾಂ ಉಪಸ್ಥಿತರಿದ್ದರು.

ಜಯರಾಂ ಇಪಿಎಸ್‌ಐ ಅಧ್ಯಕ್ಷ

ಇಪಿಎಸ್‌ಐ ಸಂಸ್ಥೆಯ ನೂತನ ಅಧ್ಯಕ್ಷರಾಗಿ ಗೋಕುಲ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಂ.ಆರ್.ಜಯರಾಂ ಆಯ್ಕೆಯಾಗಿದ್ದಾರೆ.

ವಿಐಟಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರೂ ಆದ ಇಪಿಎಸ್‌ಐ ನಿಕಟಪೂರ್ವ ಅಧ್ಯಕ್ಷ ಟಿ.ಜಿ. ವಿಶ್ವನಾಥನ್ ಅವರು ಜಯರಾಂ ಅವರಿಗೆ ಅಧಿಕಾರ ಹಸ್ತಾಂತರ ಮಾಡಿದರು.

ಅಧಿಕಾರ ಸ್ವೀಕರಿಸಿದ ಜಯರಾಂ, ಇಡೀ ದೇಶದ 8 ಸಾವಿರ ವಿದ್ಯಾ ಸಂಸ್ಥೆಗಳು ಇಪಿಎಸ್‌ಐ ಸದಸ್ಯತ್ವ ಪಡೆದಿವೆ. ವಿದ್ಯಾರ್ಥಿಗಳಿಗೆ ಪಠ್ಯ ಶಿಕ್ಷಣದ ಜತೆಗೆ ಕೌಶಲಯುಕ್ತ ಶಿಕ್ಷಣ ನೀಡಲು ಶ್ರಮಿಸುತ್ತಿದೆ. ಸರ್ಕಾರ ಖಾಸಗಿ ಕಾಲೇಜುಗಳ ಬಲವರ್ಧನೆಗೆ ಆರ್ಥಿಕ ಸಹಾಯ ಮಾಡಬೇಕು ಎಂದು ಮನವಿ ಮಾಡಿದರು.

ಗೀತೋತ್ಸವದಲ್ಲಿ ಪುತ್ತಿಗೆ ಮಠದ ಸುಗುಣೇಂದ್ರ ಸ್ವಾಮೀಜಿ

ಭಗವದ್ಗೀತೆ ಸಮಸ್ಯೆ ನಿವಾರಣೆ ಗ್ರಂಥ

ಪ್ರಜಾವಾಣಿ ವಾರ್ತೆ

ಭಾವಿ ಪರ್ಯಾಯ ಪುತ್ತಿಗೆ ಮಠ ಕೋಟಿ ಗೀತಾ ಲೇಖನ ಯಜ್ಞ ಸಮಿತಿಯು ಶನಿವಾರ ಬಸವನಗುಡಿಯಲ್ಲಿ ಆಯೋಜಿಸಿದ್ದ 'ಗೀತೋತ್ಸವ ಕಾರ್ಯಕ್ರಮದಲ್ಲಿ ಸುಗುಣೇಂದ್ರ ಸ್ವಾಮೀಜಿಯವರ 'ನವನೀತ ಗೀತಾ' ಕೃತಿಯನ್ನು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಲೋಕಾರ್ಪಣೆ ಮಾಡಿದರು. ನಟ ಜಗ್ಗೇಶ್, ನಟಿ ರಾಧಿಕಾ ನಾರಾಯಣ್, ಕನ್ನಡಪ್ರಭ ಮತ್ತು ಸುವರ್ಣ ನ್ಯೂಸ್ ಪ್ರಧಾನ ಸಂಪಾದಕ ರವಿ ಹೆಗಡೆ, ಎನ್. ಆರ್ ರಮೇಶ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: 'ಶ್ರೀಕೃಷ್ಣ ಬೋಧಿಸಿದ ಭಗವದ್ಗೀತೆ ಕೇವಲ ಪುಣ್ಯಗ್ರಂಥವಲ್ಲ. ನಾವು ಎದುರಿಸುವ ಸಮಸ್ಯೆಗಳ ನಿವಾರಣೆಗೆ ಮಾರ್ಗೋಪಾಯ ಬೋಧಿಸುವ ಗ್ರಂಥ' ಎಂದು ಉಡುಪಿ ಅಷ್ಟಮಠಗಳಲ್ಲಿ ಒಂದಾದ ಪುತ್ತಿಗೆ ಮಠದ ಸುಗುಣೇಂದ್ರ ಸ್ವಾಮೀಜಿ ಹೇಳಿದರು.

ಭಾವಿ ಪರ್ಯಾಯ ಪುತ್ತಿಗೆ ಮಠದ ಕೋಟಿಗೀತಾ ಲೇಖನಯಜ್ಞ ಸಮಿತಿ ಆಶ್ರಯದಲ್ಲಿ ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಶನಿವಾರ ಆರಂಭಗೊಂಡ ಗೀತೋತ್ಸವ ಕಾರ್ಯ-ಕ್ರಮದಲ್ಲಿ ಅವರು ಮಾತನಾಡಿದರು.

'ಭಗವದ್ಗೀತೆ ಆಧುನಿಕ ಕಾಲದ ಜಿಪಿಎಸ್ ಇದ್ದಂತೆ. ಗೀತೆ ನಮ್ಮ ಜೀವನದಲ್ಲಿದ್ದರೆ ಅದು ಸದಾ ನಮಗೆ ಮಾರ್ಗದರ್ಶನ ತೋರುತ್ತದೆ. ಖಿನ್ನತೆ, ಮಾನಸಿಕ ಕ್ಷೋಭೆ ಮೊದಲಾದ ಮನೋವ್ಯಾಧಿಗಳು ದಿನೇದಿನೇ ಹೆಚ್ಚಾಗುತ್ತಿರುವ ಈ ಕಾಲ ಘಟ್ಟದಲ್ಲಿ ಗೀತೆಯೊಂದೇ ಪರಿಹಾರ' ಎಂದು ತಿಳಿಸಿದರು.

ಪುತ್ತಿಗೆ ಮಠದ ಸುಶ್ರೀಂದ್ರ ಸ್ವಾಮೀಜಿ, ಗೀತೋತ್ಸವ ಸಮಿತಿಯ ಪ್ರಧಾನ ಸಂಚಾಲಕ ಎನ್.ಆರ್. ರಮೇಶ್, ತೇಜಸ್ವಿನಿ ಅನಂತ ಕುಮಾರ್, ಅಶ್ವಿನಿ ಪುನೀತ್ ರಾಜ್ ಕುಮಾರ್ ಭಾಗವಹಿಸಿದ್ದರು.

ಸಹಸ್ರಾರು ಕೃಷ್ಣ ಭಕ್ತರಿಂದ ಸಮಗ್ರ ಕೋಟಿಗೀತಾ ಲೇಖನಯಜ್ಞ ದೀಕ್ಷೆ ನೆರವೇರಿತು. ವಿಷ್ಣುಸಹಸ್ರನಾಮ ಪಾರಾಯಣ, ಗೀತಾ-ಚಿಂತನ, ಭಗವದ್ಗೀತಾ ಕಲಾ ಪ್ರಕಾರಗಳ ಪ್ರಸ್ತುತಿ, ಶಾಲೆಯ ವಿದ್ಯಾರ್ಥಿಗಳಿಗೆ ಭಗವದ್ಗೀತೆ ಸಂಬಂಧಿತ ಸ್ಪರ್ಧೆ, ಭಗವದ್ಗೀತೆಗೆ ಸಂಬಂಧಪಟ್ಟ ವಿವಿಧ ಚಿಂತನೆಗಳ ಸಚಿತ್ರ ಪ್ರದರ್ಶನ, ವಸ್ತು ಪ್ರದರ್ಶನ ನೆರವೇರಿತು.

ಸಂಜೆ 'ಆಚಾರ್ಯತ್ರಯರ ಚಿಂತನೆಯಲ್ಲಿ-ಭಗವದ್ಗೀತೆ' ಕಾರ್ಯಕ್ರಮ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಸಹ ಕುಲಾಧಿಪತಿ ಶ್ರೀನಿವಾಸ ವರಖೇಡಿ ಅವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಇಸ್ರೊದ ಸಲಹೆಗಾರ ಡಾ. ಸುರೇಂದ್ರ ಪಾಲ್, ವೆಂಟ್ರಿಲೋಕ್ವಿಸ್ಟ್ ಇಂದುಶ್ರೀ ರವೀಂದ್ರ ಮತ್ತು ಗೌರವ ಪ್ರಧಾನ ಕಾರ್ಯದರ್ಶಿ ವೂಡೆ ಪಿ. ಕೃಷ್ಣ ಅವರು 'ವಿಶೇಷ ಘಟಿಕೋತ್ಸವ'ದಲ್ಲಿ ಪ್ರಮಾಣ ಪತ್ರ ವಿತರಿಸಿದರು

ವಿಶೇಷ ಘಟಿಕೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಕ್ರಮಿಕಾ ವೊಕೇಷನಲ್ ಇನ್‌ಸ್ಟಿಟ್ಯೂಟ್ (ಪಿವಿಐ), ನರ ವ್ಯತಿರಿಕ್ತ ವ್ಯಕ್ತಿಗಳಿಗೆ ಸೀಮಿತವಾದ 'ವಿಶೇಷ ಘಟಿಕೋತ್ಸವ' ಆಯೋಜಿಸಿತ್ತು.

ಯಲಹಂಕದ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಶೇಷ ವಿದ್ಯಾರ್ಥಿಗಳು (ನ್ಯೂರೋಡೈವರ್ಜೆಂಟ್) ಘಟಿಕೋತ್ಸವದ ಗೌನ್ ಧರಿಸಿ ವೇದಿಕೆ ಏರಿದ್ದರು. ಗಣ್ಯರು ಪ್ರಮಾಣಪತ್ರ ಪ್ರದಾನ ಮಾಡಿದರು.

ಇಸ್ರೊದ ಸಲಹೆಗಾರ ಡಾ. ಸುರೇಂದ್ರ ಪಾಲ್, ವೆಂಟ್ರಿಲೋಕ್ವಿಸ್ಟ್ ಇಂದುಶ್ರೀ ರವೀಂದ್ರ ಮತ್ತು ಗೌರವ ಪ್ರಧಾನ ಕಾರ್ಯದರ್ಶಿ ವೂಡೆ ಪಿ. ಕೃಷ್ಣ ಅವರು ಪ್ರಮಾಣಪತ್ರಗಳನ್ನು ನೀಡಿದರು.

ಪಿವಿಐ ಸಂಸ್ಥಾಪಕ ನಿರ್ದೇಶಕಿ ಡಾ. ಗಾಯತ್ರಿ ನರಸಿಂಹನ್ ಮಾತನಾಡಿ, 'ಈ ವಿಶೇಷ ವಿದ್ಯಾರ್ಥಿಗಳಿಗೆ ಕೌಶಲ ತರಬೇತಿಯಿಂದ ವೃತ್ತಿ ಜೀವನ ಮಾಡಲು ಸಶಕ್ತರನ್ನಾಗಿಸಿದೆ. ಪಿವಿಐನ ಹಲವಾರು ವಿದ್ಯಾರ್ಥಿಗಳು ವಿವಿಧ ಕಂಪನಿಗಳಲ್ಲಿ ಯಶಸ್ವಿ ಉದ್ಯೋಗಗಳನ್ನು ಗಳಿಸಿದ್ದಾರೆ. ಡೇಟಾ ಎಂಟ್ರಿ, ಹೋಟೆಲ್ ಉದ್ಯಮ, ಕಚೇರಿ ಸ್ಥಾನಗಳು ಮತ್ತು ವಿನ್ಯಾಸ ಸಂಬಂಧಿತ ವೃತ್ತಿಗಳನ್ನು ಹೊಂದಿದ್ದಾರೆ' ಎಂದರು.

'ಏಕೀಕರಣ ಮಾರ್ಗಗಳು -ಒಂದು ಶಾಲೆ, ಹಲವು ಸಾಮರ್ಥ್ಯಗಳು' ಪುಸ್ತಕವನ್ನು ಈ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು.

ಇಸ್ರೇಲ್ ದಾಳಿ: 200 ಮಂದಿ ಸಾವು

ಗಾಜಾ ಪಟ್ಟಿ (ಪ್ಯಾಲೆಸ್ಟೀನ್) (ಎಎಫ್‌ಪಿ): ಮುತ್ತಿಗೆ ಹಾಕಿರುವ ಗಾಜಾಪಟ್ಟಿಯ ಮೇಲೆ ಇಸ್ರೇಲ್ ಪಡೆಗಳು ನಡೆಸಿದ ದಾಳಿಯಲ್ಲಿ ಕಳೆದ 24 ತಾಸುಗಳಲ್ಲಿ 200ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ ಎಂದು ಗಾಜಾದ ಅಧಿಕಾರಿಗಳು ಶನಿವಾರ ಹೇಳಿದ್ದಾರೆ.

ಯುದ್ಧ ಆರಂಭವಾದಾಗಿನಿಂದ ಈವರೆಗೆ ಸಾವಿನ ಸಂಖ್ಯೆ 20,258ಕ್ಕೆ ಏರಿಕೆಯಾಗಿದೆ ಹಮಾಸ್ ನಿಯಂತ್ರಿತ ಗಾಜಾ ಆರೋಗ್ಯ ಸಚಿವಾಲಯ ಹೇಳಿದೆ.

ಮತ್ತೆ ಐವರು ಯೋಧರ ಸಾವು (ಜೆರುಸಲೇಂ ವರದಿ): ಗಾಜಾ ಪಟ್ಟಿಯಲ್ಲಿ ಹಮಾಸ್ ವಿರುದ್ಧದ ಯುದ್ಧದಲ್ಲಿ ಶುಕ್ರವಾರದಿಂದ ಐವರು ಸೈನಿಕರು ಹತರಾಗಿದ್ದಾರೆ ಎಂದು ಇಸ್ರೇಲ್ ಸೇನೆ ಹೇಳಿದೆ.

ಕೋಟಿಗಾನಹಳ್ಳಿ ರಾಮಯ್ಯಗೆ 'ಡಾ.ಎಚ್.ಎನ್ ಪ್ರಶಸ್ತಿ'

ಕೋಲಾರ: ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು ಕೊಡಮಾಡುವ ಡಾ.ಎಚ್. ನರಸಿಂಹಯ್ಯ ಪ್ರಶಸ್ತಿಗೆ ಜಿಲ್ಲೆಯ ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಭಾಜನ-ರಾಗಿದ್ದಾರೆ ಎಂದು ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ಲಕ್ಷ್ಮಿನಾರಾಯಣ ತಿಳಿಸಿದ್ದಾರೆ.

ರಾಯಚೂರು ಜಿಲ್ಲೆಯ ಲಿಂಗಸುಗೂರಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಡಿ.29 ಹಾಗೂ 30 ರಂದು ನಡೆಯಲಿರುವ ರಾಜ್ಯ ಮಟ್ಟದ 3ನೇ ವೈಜ್ಞಾನಿಕ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮೇಳನ ಉದ್ಘಾಟನೆ ಮಾಡಲಿದ್ದಾರೆ.

ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಸುಮಾರು ₹ 60 ಕೋಟಿ ವೆಚ್ಚದಲ್ಲಿ ವಿಜ್ಞಾನ ಗ್ರಾಮ ನಿರ್ಮಾಣ ಕಾಮಗಾರಿ ನಡೆಯುತ್ತಿದೆ ಎಂದು ತಿಳಿಸಿದ್ದಾರೆ.



ಮಯೂರ, ಸುಧಾ ಓದಿರಿ

ಪ್ರಜಾವಾಣಿ
ಭಾನುವಾರದ ಪುರವಣಿ
10
ಭಾನುವಾರ, 24 ಡಿಸೆಂಬರ್ 2023

ವರ್ಷಾರಂಭಕೆ ಸುಂದರ ತಾಣಗಳ ಮುನ್ನುಡಿ...

13

ಬ್ರೂಮ್... ಬ್ರೂಮ್... ಬೈಕಿಂಗ್

ಲಡಾಖ್‌ನ ಹಾದಿಯಲ್ಲಿ 'ಚಾರಣ ಮುತ್ತಾಟ' ತಂಡ.

ಕಾಲದ ವೇಗಕ್ಕೆ ತಕ್ಕಂತೆ ಬೈಕಿಂಗ್ ವೇಗವೂ ಹೆಚ್ಚಾಗಿದೆ. ಗಮ್ಯ, ಬೈಕ್‌ಗಳ ಗತಿ–ಸ್ಥಿತಿ, ವ್ಲಾಗಿಂಗ್‌ನ ವ್ಯಾಮೋಹ ಇವೆಲ್ಲವೂ ಬೈಕರ್‌ಗಳ, ಬೈಕಿಂಗ್‌ನ ಸ್ಥಿತ್ಯಂತರಕ್ಕೆ ಕಾರಣವಾಗಿವೆ.

ಜಯಸಿಂಹ ಆರ್.

ಅದೊಂದು ತಪಸ್ಸು.

ಆ ಒಂದು ಸೀಟಿನ ಮೇಲೆ ಕುಳಿತು ಆ್ಯಕ್ಸಲರೇಟರ್ ತಿರುವುತ್ತಿದ್ದರೆ, ಅಕ್ಕಪಕ್ಕದ ಸಕಲ ಚರಾಚರಗಳೆಲ್ಲವೂ ಹಿಂದೋಡುತ್ತಿರುತ್ತವೆ. ವೇಗ ಹೆಚ್ಚಿದಷ್ಟೂ ನಮ್ಮ ಕಂಕುಳ ಅಡಿಯಲ್ಲಿ ತೂರಿ ಹೋಗುವ ಗಾಳಿಯ ಕಚಗುಳಿ. ನಮ್ಮೆಲ್ಲಾ ಸಿಟ್ಟು–ಸೆಡವು, ರಾಗ–ದ್ವೇಷಗಳೆಲ್ಲವೂ ತಲೆಯಿಂದ ಮಟಾಮಾಯ. ಅವರು ಹೀಗಂದರು, ಇವರು ಹೀಗನ್ನಬಾರದಿತ್ತು, ಹಾಗೆ ಮಾಡಬೇಕು, ಹೀಗೆ ಮಾಡಬೇಕು ಎಂಬೆಲ್ಲಾ ಲೌಕಿಕದ ಹತ್ತಾರು ಚಿತ್ರಗಳು ಛಿದ್ರವಾಗಿ ಕಣ್ಣಂಚಿನಿಂದ ಹಿಂದೆ ಬೀಳುತ್ತವೆ. ವೇಗ ಹೆಚ್ಚಿದಂತೆ ತಾನೂ ಚಂಡಿ ಹಿಡಿಯುವ ವಿಂಡ್‌ಬ್ಲಾಸ್ಟ್‌ಗೆ ಎದೆಯೊಡ್ಡಿ ಕುಳಿತರೆ, ನಮ್ಮ ಸುತ್ತಲಿನ ಎಲ್ಲವೂ ಅಸ್ಪಷ್ಟವಾಗುತ್ತಾ ಹೋಗುತ್ತದೆ. ಎಲ್ಲವೂ ಕ್ಷೀಣವಾಗಿ, ಎಲ್ಲವೂ ಒಂದಾಗಿ ಜಗತ್ತಿನಲ್ಲಿ ನಾವೊಬ್ಬರೇ ಎಂಬ ಏಕಾಂತಭಾವ. ಕಾಮನಬಿಲ್ಲಿನ ಎಲ್ಲ ರಂಗುಗಳೂ ಕರಗಿ, ಬಿಳಿಯೊಂದೇ ರೂಪುಗೊಳ್ಳುವಂತಹ ನ್ಯೂಟನ್‌ನ ಬಣ್ಣಚಕ್ರದ ಅನುಭೂತಿ. ಗಾಳಿಯಲ್ಲಿ ತೇಲಿದಂತಹ ಅನುಭವ. ಅಂತಹದ್ದೊಂದು ಸ್ಥಿತಿಯಲ್ಲಿ ನಮಗೂ ಜಗತ್ತಿಗೂ ಉಳಿಯುವ ಕೊಂಡಿ ಅದೊಂದೇ... ಎಂಜಿನ್‌ನ ಬಿಸಿ, ಎಂಜಿನ್ ಸದ್ದಿನ ಏಕತಾನ, ಅಡಿಯಿಂದ ಮುಡಿಯವರೆಗಿನ ಸಕಲ ನರತಂತುಗಳನ್ನೂ ಮೀಟುವ ನಡುಕ... ಆ ಸ್ಥಿತಿಗೆ ನಮ್ಮನ್ನು ಕೊಂಡೊಯ್ಯುವ ಮಂತ್ರಕ್ಕೂ ಒಂದು ಹೆಸರಿದೆ. ಅದೇ ಬೈಕಿಂಗ್.

ದೇಶ ಸುತ್ತಲು ಬೈಕ್ ಹತ್ತಿದ ಪ್ರತಿಯೊಬ್ಬರದೂ ಇದೇ ಅನುಭವ. ದೇಶ ಸುತ್ತುವುದೆಂದರೆ ಇಲ್ಲಿಂದ ಅಲ್ಲಿಗೆ ಹೋಗುವುದಲ್ಲ, ಸ್ಥಾವರವೊಂದನ್ನು ನೋಡುವುದಲ್ಲ. ಅಲ್ಯಾರೋ ಎಳನೀರಿನವನು, ಇಲ್ಯಾರೋ ಪಂಕ್ಚರ್ ಹಾಕುವವನು, ಜಗತ್ತೆಲ್ಲವೂ ನಂದೇ ಎಂಬಂತೆ ಎಲ್ಲರನ್ನೂ ಬದಿಗೊತ್ತಿ ಹೋಗುವ ದೊಡ್ಡಕಾರಿನವನು, ಮುಖಕ್ಕೆ ಬಡಿಯುವ ಚಿಟ್ಟೆ, ಉರಿಬಿಸಿಲು, ಮೈಕೊರೆಯುವ ಚಳಿ, ಮರ–ಗಿಡ, ಹಕ್ಕಿ–ಪಕ್ಕಿ, ಹಳ್ಳಿ–ಹಾಡು, ಇವೆಲ್ಲವುಗಳಲ್ಲಿ ಜತೆಯಾಗುವ ಮತ್ತೊಬ್ಬ ಬೈಕರ್... ಇಲ್ಲಿಂದ ಅಲ್ಲೆಲ್ಲಿಗೋ ಹೋಗುವವರೆಗಿನ ಪಯಣವೇ ದೇಶ ಸುತ್ತುವುದು. ಬೈಕಿಂಗ್‌ನ ಮೂಲಮಂತ್ರವೇ ಇದು; ಒಂದೆಡೆ ಬಾಹ್ಯ ಜಗತ್ತಿನೊಂದಿಗೆ ಅಂತರ ಕಾಯ್ದುಕೊಳ್ಳುತ್ತಾ ಮತ್ತೆ ಮತ್ತೆ ಅದೇ ಜಗತ್ತಿನೊಂದಿಗೆ ಸಂವಾದ ನಡೆಸುವ ಕ್ರಿಯೆ. 20 ವರ್ಷಗಳ ಹಿಂದೆಯೂ ಬೈಕಿಂಗ್ ಹೀಗೆಯೇ ಇತ್ತು, ಈಗಲೂ ಹೀಗೆಯೇ ಇದೆ. ಆದರೆ ಅದರ ಹೆಸರಷ್ಟೇ ಬದಲಾಗಿದೆ. ಕೋರ್ ಬೈಕಿಂಗ್, ಹಾರ್ಡ್‌ಕೋರ್ ಬೈಕಿಂಗ್.

ಬದಲಾದ ವ್ಯಾಖ್ಯಾನ

ಹೊಸ ತಲೆಮಾರಿನಲ್ಲಿ ಬೈಕಿಂಗ್ ಎಂಬುದಕ್ಕೆ ಹೊಸ ವ್ಯಾಖ್ಯಾನಗಳಿವೆ. ರಸ್ತೆಯಲ್ಲಿ ಇಷ್ಟು ವೇಗ ಸಾಧಿಸಬೇಕು, ಇಷ್ಟೇ ಸಮಯದೊಳಗೆ ಗಮ್ಯ ತಲುಪಬೇಕು. ಅವನಿಗಿಂತ ನನ್ನ ವೇಗ ಹೆಚ್ಚು, ಇವನಿಗಿಂತ ಅವನ ವೇಗ ಹೆಚ್ಚು ಎಂಬ ಪೈಪೋಟಿಯನ್ನೇ ಬೈಕಿಂಗ್ ಎಂದು ಕರೆಯುವಷ್ಟರಮಟ್ಟಿಗೆ ಆ ವ್ಯಾಖ್ಯಾನ ಬದಲಾಗಿಬಿಟ್ಟಿದೆ.

'ಕಣ್ಣು ಕುಕ್ಕುವಂತಿದ್ದ ಬೆಳಕಿನ ಪ್ರವಾಹದ ನಡುವೆಯೇ ಎದೆ ನಡುಗಿಸುವಂತಹ ಎಂಜಿನ್ ಗುಡುಗು. ರಸ್ತೆಯಲ್ಲಿ ಹಾವು ಹರಿದಂತೆ ಅರ್ಧ ಕಿ.ಮೀ.ಗೂ ಹೆಚ್ಚು ಉದ್ದದ ದೈತ್ಯರ ಸಾಲು. ಮುಂದೆ 'ಪೈಲಟ್' ಹಾದಿ ತೋರುತ್ತಿದ್ದರೆ, 'ಸ್ವೀಪರ್'ಗೆ ಯಾರೂ ಹಿಂದುಳಿಯದಂತೆ ಮುಂದೋಡಿಸುವ ಕೆಲಸ. ಇತರ ವಾಹನಗಳಿಗೆ ತೊಂದರೆಯಾಗದಂತೆ ಸರತಿಯನ್ನು ಸರಿದೂಗಿಸುವ ಕಾಯಕ 'ಶೆಟಲ್'ನದ್ದು. 50–60ರ ಸ್ಥಿರ ವೇಗ. ಹತ್ತು ಹಲವು ವಾಹನಗಳನ್ನು ಹಿಂದಿಕ್ಕಿದರೂ, 24 ಸವಾರರು ಒಮ್ಮೆಯೂ 'ಹಾರ್ನ್' ಮುಟ್ಟಿರಲೇ ಇಲ್ಲ. ಹಾವಿನಂತ ಸಾಲು, ಹಾರ್ನ್ ಇಲ್ಲದ ನೂರಾರು ಕಿ.ಮೀ. ಪಯಣ.'

ಹತ್ತು ವರ್ಷಗಳ ಹಿಂದೆ ಬರೆದಿದ್ದ ಬೈಕಿಂಗ್ ಕಥನವೊಂದರ ಸಾಲುಗಳಿವು. ಬೈಕಿಂಗ್ ಕ್ಲಬ್‌ಗಳು ಆಯೋಜಿಸುವ ಪಯಣಗಳು ಹೀಗೇ ಇರುತ್ತವೆ. ಅವು ಬುಲೆಟ್‌ಗಳು ಇರಬಹುದು, ಹಾರ್ಲೆ ಡೇವಿಡ್‌ಸನ್‌ಗಳಿರಬಹುದು, ಐಷಾರಾಮಿ ಕಾರುಗಳ ಬಜೆಟ್‌ನ ಸೂಪರ್‌ಬೈಕ್‌ಗಳು ಇರಬಹುದು. ಬೈಕ್ ಯಾವುದಾದರೂ ಕೋರ್ ಬೈಕಿಂಗ್‌ನ ಅನುಭವಗಳು ಈಗಲೂ ಇದೇ ರೀತಿ ಇರುತ್ತವೆ.

ಬೈಕಿಂಗ್‌ನಲ್ಲಿ ದೊಡ್ಡ ಮಟ್ಟದ ಬದಲಾವಣೆಯಾಗಿದ್ದು ಬೈಕ್‌ಗಳಲ್ಲೇ. ಮೊದಲೆಲ್ಲಾ ಬೈಕರ್‌ಗಳಿಗೆ ಇದ್ದ ಆಯ್ಕೆ ಬುಲೆಟ್‌ಗಳು ಮಾತ್ರ. ಬುಲೆಟ್ಟೀರ್‌ಗಳು ಮಾತ್ರ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ರಸ್ತೆಯನ್ನಾಳುತ್ತಿದ್ದರು. ಇನ್ನು ಸೂಪರ್ ಬೈಕ್‌ಗಳದ್ದು ಬೇರೆಯದ್ದೇ ಜಗತ್ತು.

ದೇಶ ಸುತ್ತಲು ಕೇವಲ ಬೈಕ್‌ಗಳಿದ್ದರೆ ಸಾಲದಾಗಿತ್ತು, ಆ ಬೈಕ್‌ಗಳನ್ನು ಸಿದ್ದಪಡಿಸಬೇಕಿತ್ತು. ನಮ್ಮ ಪಯಣಕ್ಕೆ ಬೇಕಾದಂತೆ ಅವುಗಳನ್ನು ಮಾರ್ಪಡಿಸಬೇಕಿತ್ತು. ಸಸ್ಪೆನ್ಷನ್, ಟೈರ್‌ಗಳು, ಪಂಕ್ಚರ್ ಕಿಟ್‌ಗಳು, ಪರ್ಫಾಮೆನ್ಸ್ ಹೆಚ್ಚಿಸುವ ತಾಂತ್ರಿಕ ಮಾರ್ಪಾಡುಗಳು, ಪ್ರತಿ ಬೈಕಿಂಗ್‌ನಲ್ಲಿ ಎದುರಾದ ಕೊರತೆಗಳನ್ನು ನೀಗಿಸಿಕೊಳ್ಳುವ ಯತ್ನಗಳು, ಸಣ್ಣ–ಪುಟ್ಟ ರಿಪೇರಿಗಳನ್ನು ನಾವೇ ಮಾಡಿಕೊಳ್ಳುವ ಸಾಹಸಗಳು... ಇವೆಲ್ಲವೂ ಬೈಕರ್‌ನ ಜೀವಕ್ಕಂಟಿದ್ದ 'ಕರ್ಮ'ಗಳು.

11ನೇ ಪುಟಕ್ಕೆ...

ಸೋಲೊ ರೈಡರ್ ಎಂಬ ಹಠಯೋಗಿ

ಹಾರ್ಡ್‌ಕೋರ್ ಬೈಕರ್‌ಗಳಲ್ಲೇ ಅತ್ಯಂತ ಅಸಾಮಾನ್ಯ 'ಸ್ಪೀಸಿಸ್' ಒಂದಿದೆ. ಸೋಲೊ ರೈಡರ್‌ಗಳೆಂಬ ಹಠಯೋಗಿಗಳವರು. ಹಗಲು–ರಾತ್ರಿ, ಚಳಿ–ಬಿಸಿಲು, ಮಳೆ–ಗಾಳಿ, ಕೆಟ್ಟು ನಿಲ್ಲುವ ಬೈಕ್, ಒಡೆದ ಟೈರ್... ಎಲ್ಲದಕ್ಕೂ ಏಕಾಂಗಿಯಾಗಿ ಮೈಯೊಡ್ಡಿ ಸಾವಿರಾರು ಕಿ.ಮೀ. ಕ್ರಮಿಸುವ ಹಠಯೋಗವದು. ಈಚೆಗೆ ರಾಜಸ್ಥಾನದ ಸೋಲೊ ಬೈಕಿಂಗ್‌ನಲ್ಲಿ ತಮಿಳುನಾಡಿನ ಕಲ್ಲುಕುರ್ಚಿಯಿಂದ ಸಾಮಾನ್ಯ 150 ಸಿಸಿ ಪಲ್ಸರ್‌ನಲ್ಲಿ ಭಾರತ ಪರ್ಯಟನೆಗೆ ಹೊರಟಿದ್ದವರೊಬ್ಬರು ಸಿಕ್ಕಿದ್ದರು. ಅವರು ಅದಾಗಲೇ 7,800 ಕಿ.ಮೀ. ಕ್ರಮಿಸಿದ್ದರು. ಅವರ ಮುಂದೆ ಇನ್ನೂ 15,000 ಕಿ.ಮೀ. ದೂರದ ಯೋಜನೆಯಿತ್ತು. ಇದರ ನಡುವೆ ಲ್ಯಾಪ್‌ಟಾಪ್‌ನಲ್ಲಿ ಕೆಲಸ ಮಾಡಬೇಕಾದ ಹೊರೆಯೂ ಇತ್ತು. 'ಎಲ್ಲಾ ಬಂಧಗಳನ್ನು ಬಿಡಿಸಿಕೊಂಡು, ಬದುಕು ಬಂದಂತೆ ಸ್ವೀಕರಿಸಲು ಸೋಲೊ ರೈಡ್ ನನಗೊಂದು ಅವಕಾಶ ಮಾಡಿಕೊಡುತ್ತದೆ' ಎಂದರು. ನನ್ನ ಬೈಕಿಂಗ್ ಆಗುಹೋಗುಗಳಲ್ಲಿ ಅಂತಹ ಹತ್ತಾರು ಹಠಯೋಗಿಗಳು ಎದುರಾಗಿದ್ದಾರೆ. ಟಿವಿಎಸ್–50ರಲ್ಲಿ ಕರ್ನಾಟಕದ ಹೊಸಪೇಟೆಯಿಂದ ಗುಜರಾತ್‌ನ ಬಿಳಿ ಮರುಭೂಮಿ ತಲುಪಿದ ಅಮಿತ್ ತಾಪಸೆ, ಸ್ಪ್ಲೆಂಡರ್‌ನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳನ್ನೂ ಮುಟ್ಟಿರುವ ಶ್ರೀಕಾಂತ್ ಹಾವನೂರು, ಏಕಾಂಗಿಯಾಗಿ ಸಾವಿರಾರು ಕಿ.ಮೀ. ಸವೆಸಿರುವ ಬೆಂಗಳೂರಿನ ದಶಮಿ, ಲಡಾಖ್‌ಗೆ ಹೊರಡಲು ಸಿದ್ಧತೆ ನಡೆಸಿರುವ ನೀಲು... ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ನಾಡಿನ ಸಮಸ್ತ ನಾಗರಿಕರಿಗೆ ಕ್ರಿಸ್ತ ಜಯಂತಿ ಹಾಗೂ ಹೊಸ ವರ್ಷದ ಶುಭಾಶಯಗಳು



"ನಿಮ್ಮ ವೈರಿಗಳನ್ನು ಪ್ರೀತಿಸಿರಿ;
ನಿಮ್ಮನ್ನು ಹಿಂಸೆ ಪಡಿಸುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ.
ನಿಮ್ಮನ್ನು ಹಗೆ ಮಾಡುವವರಿಗೆ ಉಪಕಾರ ಮಾಡಿರಿ;
ನಿಮ್ಮನ್ನು ಶಪಿಸುವವರಿಗೆ ಆಶೀರ್ವಾದ ಮಾಡಿರಿ;
ಹೀಗೆ ಮಾಡಿದರೆ ನೀವು ದೇವರಿಗೆ ಮಕ್ಕಳಾಗುವಿರಿ."

ಚರಿತ್ರೆಯಲ್ಲಿ ಇಷ್ಟೊಂದು ಪ್ರಭಾವ ಬೀರಿದ ಈ ಯೇಸು ಕ್ರಿಸ್ತನು ಯಾರು?



'ನಿರ್ದೋಷಿಯಾದ ಮನುಷ್ಯನು ಇತರರ ಮತ್ತು ಆತನ ವೈರಿಗಳ ಒಳಿತಿಗಾಗಿಯೂ ಸಹ ತನ್ನನ್ನೇ ತಾನು ಯಜ್ಞವಾಗಿ ಸಮರ್ಪಿಸಿಕೊಂಡು ಲೋಕದ ವಿಮೋಚಕನಾಗಿ ಕಂಡುಬಂದನು ಇದೊಂದು ಪರಿಪೂರ್ಣವಾದ ಕಾರ್ಯವಾಗಿತ್ತು. ಪ್ರತಿಯೊಬ್ಬರ ಹೃದಯದಲ್ಲಿ ಕ್ರಿಸ್ತನು ಹುಟ್ಟಿ ಬರಬೇಕು'. 'ಆತನು ಪರ್ವತದ ಮೇಲೆ ಮಾಡಿದ ಪ್ರಸಂಗ ನನ್ನ ಹೃದಯವನ್ನು ನೇರ ಪ್ರವೇಶಿಸಿತು'. 'ಆತನದು ಪರಮ ಶ್ರೇಷ್ಠ ಅಹಿಂಸೆ'

ಆಧಾರ ಪುಸ್ತಕಗಳು: 1. ಪಾಸ್ಕಲ್ ಆಲೆನ್ ನಜ್ಜರತ್ ರವರ - ಗಾಂಧಿ, ಕ್ರಿಸ್ತ ಮತ್ತು ಕ್ರಿಸ್ತ ಧರ್ಮ, ಪುಟ ಸಂಖ್ಯೆ : 1
2. ಮಹಾತ್ಮ ಗಾಂಧೀಜಿಯವರ - ನನ್ನ ಸತ್ಯಾನ್ವೇಷಣೆ, ಪುಟ ಸಂಖ್ಯೆ : 88

- ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು



'ನಾವು ಮಾನವ ರೂಪವನ್ನು ಧರಿಸಿರುವ ಯೇಸುವನ್ನೇ ದೇವರೆಂದು ಪೂಜಿಸಬೇಕು. ನೀವು ಯೇಸುವನ್ನು ಬಿಟ್ಟು ದೇವರನ್ನು ಕಲ್ಪಿಸಿಕೊಳ್ಳುವದಕ್ಕೆ ಮಾಡುವ ಪ್ರಯತ್ನವೆಲ್ಲ ನಿಷ್ಫಲವಾಗುವುದು'.'ನಾನು ಪ್ಯಾಲೆಸ್ತೇನಿನಲ್ಲಿ ಇದ್ದಿದ್ದರೆ ಜೀಸಸ್ಸಿನ ಕಾಲದಲ್ಲಿ ಅವನ ಪಾದಗಳನ್ನು ನಾನು ಕಣ್ಣೀರಿನಿಂದ ತೊಳೆಯುತ್ತಿರಲಿಲ್ಲ,ನನ್ನ ಹೃದಯದ ರಕ್ತದಿಂದ ತೊಳೆಯುತ್ತಿದ್ದೆ'. 'ನಿಮಗೆ ಮುಕ್ತಿ ಬೇಕಾದರೆ ಯೇಸುವನ್ನೇ ಆರಾಧಿಸಿ, ನೀವು ಕಲ್ಪಿಸಿಕೊಳ್ಳಬಲ್ಲ ಎಲ್ಲಾ ದೇವರ ಭಾವನೆಗಳಿಗಿಂತ ಮಿಗಿಲಾಗಿರುವನು ಆತ'

ಆಧಾರ ಪುಸ್ತಕಗಳು 1. ಸಹೋದರಿ. ನಿವೇದಿತಾ ರವರ - ನಾ ಕಂಡಂತೆ ನನ್ನ ಗುರುದೇವ, ಪುಟ ಸಂಖ್ಯೆ : 187
2. ಸ್ವಾಮಿ ವಿವೇಕಾನಂದರ - ಕೃತಿಶ್ರೇಣಿ, ಪುಟ ಸಂಖ್ಯೆ : 331

- ವಿಶ್ವ ಮಾನವ ಸ್ವಾಮಿ ವಿವೇಕಾನಂದರು

ಈ ನೂತನ ವರ್ಷವು ಸುಖ, ಶಾಂತಿ, ನೆಮ್ಮದಿ, ಆರೋಗ್ಯ ಮತ್ತು ವಿಶ್ವ ಶಾಂತಿಯನ್ನು ತರಲೆಂದು ಹಾರೈಸುತ್ತೇವೆ

ನುಡಿದ ಹಾಗೆ ನಡೆದಾತನು ಯೇಸು ಕ್ರಿಸ್ತನು

"ದೇವರೇ, ಅವರನ್ನು ಕ್ಷಮಿಸು; ತಾವು ಏನು ಮಾಡುತ್ತೇವೆಂಬದನ್ನು ಅರಿಯರು"

'ನಿನ್ನನ್ನು ನೀನು ಪ್ರೀತಿಸಿಕೊಳ್ಳುವಂತೆಯೇ ನಿನ್ನ ನೆರೆಯವನನ್ನು ಪ್ರೀತಿಸಬೇಕು ಮತ್ತು ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತೀರೋ ಅದನ್ನೇ ನೀವು ಅವರಿಗೆ ಮಾಡಿರಿ' ಎಂಬ ಆತನ ಉಪದೇಶಗಳು ಇಡೀ ವಿಶ್ವವನ್ನೇ ಬೆರಗುಗೊಳಿಸಿದೆ. ಆತನು ಒಂದು ಪರ್ವತದ ಮೇಲೆ ಮಾಡಿದ ಬೋಧನೆಯಲ್ಲಿ 'ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಿಂಸೆಪಡಿಸುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ. ನಿಮ್ಮನ್ನು ಹಗೆ ಮಾಡುವವರಿಗೆ ಉಪಕಾರ ಮಾಡಿರಿ; ನಿಮ್ಮನ್ನು ಶಪಿಸುವವರಿಗೆ ಆಶೀರ್ವಾದ ಮಾಡಿರಿ' ಹೀಗೆ ಮಾಡಿದರೆ ನೀವು ದೇವರಿಗೆ ಮಕ್ಕಳಾಗುವಿರಿ ಎಂದು ಉಪದೇಶ ಮಾಡಿದ್ದು, ಅದೇ ರೀತಿಯಾಗಿ ಮೂರು ವರ್ಷಗಳ ನಂತರ ಆತನನ್ನು ಶಿಲುಬೆಗೆ ಹಾಕುವುದಕ್ಕಾಗಿ ಹಿಡಿಯಲು ಬಂದ ಸಿಪಾಯಿಯನ್ನು ಯೇಸುವಿನ ಪ್ರಿಯ ಶಿಷ್ಯನಾದ ಪೇತ್ರನು ಕತ್ತಿಯಿಂದ ಹೊಡೆದಾಗ ಅವನ ಬಲಕಿವಿ ಕತ್ತರಿಸಿ ಹೋಯಿತು. ಆಗ ಯೇಸು ತನ್ನ ಶಿಷ್ಯನನ್ನು ಗದರಿಸಿ ಆ ಸಿಪಾಯಿಯನ್ನು ಪ್ರೀತಿಸಿ ಕನಿಕರಿಸಿ ಅವನ ಕಿವಿಯನ್ನು ಮುಟ್ಟಿ ಗುಣಪಡಿಸಿದನು ಮತ್ತು ಶಿಲುಬೆಯ ಮೇಲೆ ಹಿಂಸೆಯನ್ನು ಅನುಭವಿಸುತ್ತಿರುವಾಗ ಸಿಪಾಯಿಗಳು, - 'ನೀನು ದೇವರಾಗಿದ್ದರೆ, ಶಿಲುಬೆಯಿಂದ ಇಳಿದು ಬಾ! ನಾವು ನಿನ್ನನ್ನು ನಂಬುತ್ತೇವೆ' ಎಂದು ತನ್ನನ್ನು ಅವಮಾನಪಡಿಸಿ ಹಿಂಸಿಸುತ್ತಿರುವವರನ್ನು ನೋಡಿ, ಕನಿಕರಪಟ್ಟು, 'ದೇವರೇ, ಅವರನ್ನು ಕ್ಷಮಿಸು; ತಾವು ಏನು ಮಾಡುತ್ತೇವೆಂಬದನ್ನು ಅರಿಯರು' ಎಂದು ಅವರಿಗಾಗಿ ಪ್ರಾರ್ಥಿಸಿರುತ್ತಾನೆ.



"ನಿಮ್ಮಲ್ಲಿ ಪಾಪವಿಲ್ಲದವನು ಯಾರೋ ಅವನೇ ಮೊದಲು ಆಕೆಗೆ ಕಲ್ಲಿನಿಂದ ಹೊಡೆಯಲಿ"

ಮೋಶೆ ಎಂಬ ಪ್ರವಾದಿಯ ಮೂಲಕ ಬಂದಂತಹ 'ಪ್ರಾಣಕ್ಕೆ ಪ್ರತಿಯಾಗಿ ಪ್ರಾಣ, ಕಣ್ಣಿಗೆ ಕಣ್ಣು, ಹಲ್ಲಿಗೆ ಹಲ್ಲು, ಕೈಗೆ ಕೈ, ಕಾಲಿಗೆ ಕಾಲು' ಎಂಬ ಕಠಿಣವಾದ ದಶಾಜ್ಞೆಗಳ (Ten Commandments) ಕಾನೂನು ಭೂಮಿಯ ಮೇಲೆ ಇದ್ದ ಸಮಯದಲ್ಲಿ ಅಲ್ಲಿನ ಧಾರ್ಮಿಕ ಮುಖಂಡರು ವ್ಯಭಿಚಾರ ಮಾಡುತ್ತಿರುವಾಗಲೇ ಸಿಕ್ಕಿಬಿದ್ದ ಒಬ್ಬ ಸ್ತ್ರೀಯನ್ನು ಕ್ರಿಸ್ತನ ಮುಂದೆ ನಿಲ್ಲಿಸಿ; ಇಂಥವಳನ್ನು ಕಲ್ಲಿನಿಂದ ಹೊಡೆದು ಕೊಲ್ಲಬೇಕೆಂದು ಮೋಶೆಯು ಧರ್ಮಶಾಸ್ತ್ರದಲ್ಲಿ ನಮಗೆ ಅಪ್ಪಣೆ ಕೊಟ್ಟಿದ್ದಾನೆ; ಈಕೆಯ ವಿಷಯದಲ್ಲಿ ನೀನು ಏನು ಹೇಳುತ್ತೀ ಎಂದು ಆತನಲ್ಲಿ ತಪ್ಪುಹೊರಿಸುವುದಕ್ಕೆ ಒಂದು ಕಾರಣಕ್ಕಾಗಿ ಕೇಳಿದರು. ಆಗ ಕ್ರಿಸ್ತನು 'ನಾನು ಮೋಶೆಯ ಧರ್ಮಶಾಸ್ತ್ರವನ್ನು ತೆಗೆದು ಹಾಕುವುದಕ್ಕೆ ಬಂದವನಲ್ಲ ನೆರವೇರಿಸುವುದಕ್ಕೆ ಬಂದವನು' ಎಂದು ಹೇಳಿ 'ನಿಮ್ಮಲ್ಲಿ ಪಾಪವಿಲ್ಲದವನು ಯಾರೋ ಅವನೇ ಮೊದಲು ಆಕೆಗೆ ಕಲ್ಲಿನಿಂದ ಹೊಡೆಯಲಿ' ಎಂದು ಹೇಳಿದನು. ಆ ಮಾತನ್ನು ಕೇಳಿ ನೆರೆದು ಬಂದಿದ್ದ ಧಾರ್ಮಿಕ ಮುಖಂಡರು ತಾವೇ ಪಾಪಿಗಳು ಎಂದು ಮನಸ್ಸಿನಲ್ಲಿ ತಿಳಿದುಕೊಂಡು ಹಿರಿಯರು ಮೊದಲುಗೊಂಡು ಕಿರಿಯರವರೆಗೂ ಎಲ್ಲರೂ ಅಲ್ಲಿಂದ ಹೊರಟು ಹೋದರು. ಆಗ ಕ್ರಿಸ್ತನು ಆ ಸ್ತ್ರೀ ಒಬ್ಬಳೇ ಇರುವುದನ್ನು ಕಂಡು ಆಕೆಗೆ 'ಅಮ್ಮಾ, ನಾನೂ ನಿನ್ನನ್ನು ಕಲ್ಲಿನಿಂದ ಹೊಡೆಯುವುದಿಲ್ಲ; ಹೋಗು, ಇನ್ನು ಮೇಲೆ ಪಾಪ ಮಾಡಬೇಡ' ಎಂದು ಹೇಳಿದನು.

ಆ ಸ್ತ್ರೀಯ ಹಾಗೂ ಲೋಕದ ಸಮಸ್ತ ಪಾಪವನ್ನು ತನ್ನ ಮೇಲೆಯೇ ಹೊತ್ತುಕೊಂಡು ಸುಮಾರು ಆರು ತಾಸುಗಳ ವರೆಗೆ ಶಿಲುಬೆಯ ಮೇಲೆ ಪ್ರಾಯಶ್ಚಿತ್ತ ಯಜ್ಞವಾಗಿ ಸಮರ್ಪಿಸಿಕೊಂಡು 'ಎಲ್ಲಾ ನೆರವೇರಿತು' ಎಂದು ಹೇಳಿ ಪ್ರಾಣ ಬಿಟ್ಟಿರುತ್ತಾನೆ. ಆತನು ಸತ್ತು, ಹೂಣಲ್ಪಟ್ಟು ತಾನು ಮೊದಲೇ ಹೇಳಿದಂತೆ ಮೂರನೇ ದಿನದಲ್ಲಿ ಮೃತ್ಯುಂಜಯನಾಗಿ ಸಮಾಧಿಯಿಂದ ಎದ್ದು ಬಂದಿರುತ್ತಾನೆ. ಆದ್ದರಿಂದ ಆತನು ಸದಾ ಜೀವಿಸುವ ದೇವರಾಗಿರುತ್ತಾನೆ.

ಆಸಕ್ತರು ತಮ್ಮ ಅಂಚೆ ವಿಳಾಸವನ್ನು Whatsapp/ SMS ಮಾಡಿದಲ್ಲಿ ಕ್ರಿಸ್ತನ ಜೀವನ ಮತ್ತು ಉಪದೇಶಗಳ ಪುಸ್ತಕವನ್ನು ಸಂಪೂರ್ಣ ಉಚಿತವಾಗಿ ಲಭ್ಯತೆ / ಆದ್ಯತೆಯ ಮೇಲೆ ಕಳುಹಿಸಲಾಗುವುದು. Mob : 8217381782

ನಾಳೆ ಕ್ರಿಸ್‌ಮಸ್. ಸಮೃದ್ಧಿಯ ಸಂಕೇತವಾದ ಜಾಗರದ ಪೂಜೆಗೂ ನಾಡಿನ ಸಂಸ್ಕೃತಿಗೂ ಇರುವ ನಂಟು ಸಹೃದಯರ ನಡುವಿನ ಕೊಂಡಿಯೂ ಹೌದು. ಈಗ ಜಾಗರದ ಪೈರೂ ಪ್ಲಾಸ್ಟಿಕ್‌ಗೆ ಬದಲಾಗಿರುವುದು ಬೇರೆ ಮಾತು.

'ಜಾಗರ'ದ ಸಂಸ್ಕೃತಿಯ ತೆನೆ

ಎಫ್.ಎಂ.ನಂದಗಾವ

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ಇಸ್ರೇಲ್ ದೇಶವು ರೋಮನ್ನರ ಆಡಳಿತದಲ್ಲಿತ್ತು. ಹೆರೋದ ಅರಸನಾಗಿದ್ದ. ಚಕ್ರವರ್ತಿ ಆಗಸ್ಟಸ್ ಸೀಜರ್‌ನ ಕಾಲದಲ್ಲಿ ಜನಗಣತಿ ನಡೆದಾಗ, ಜೋಸೆಫ್ ತುಂಬು ಗರ್ಭಿಣಿ ಹೆಂಡತಿ ಮರಿಯಳೊಂದಿಗೆ ಬೆತ್ಲೆಹೇಮ್‌ಗೆ ಬಂದಿರುತ್ತಾನೆ. ತಂಗಲು ಎಲ್ಲೂ ಜಾಗ ಸಿಗದೇ ದನದ ಕೊಟ್ಟಿಗೆಯಲ್ಲಿ ಬಿಡಾರ ಹೂಡುತ್ತಾನೆ. ಅಲ್ಲಿ ಯೇಸುಸ್ವಾಮಿಯ ಜನನವಾಗುತ್ತದೆ.

ದೇವದೂತರ ಸಂದೇಶವನ್ನು ಕೇಳಿ ಕುರುಬರು ಕೂಸು ಯೇಸುವನ್ನು ಕಾಣಲು ಬರುತ್ತಾರೆ. ಹಲವು ಸೂಚಕಗಳನ್ನು ಕಂಡು, ಪೂರ್ವದ ನಾಡಿನ ಪಂಡಿತರು ಬಂದು, ಕೂಸು ಯೇಸುವಿಗೆ ತಮ್ಮ ಗೌರವವನ್ನು ಸಲ್ಲಿಸುತ್ತಾರೆ.

ಈ ಪಂಡಿತರಿಂದ ವಿಷಯ ತಿಳಿದ ಹೆರೋದ ಅರಸ, ತನ್ನ ಸ್ಥಾನಕ್ಕೆ ಚ್ಯುತಿ ಬಂದೀತೆಂದು ಎಳೆಯ ಹಸುಗೂಸುಗಳನ್ನು ಕೊಲ್ಲಿಸಲು ಮುಂದಾಗುತ್ತಾನೆ. ತಂದೆ ಜೋಸೆಫ್ ದೇವದೂತನ ಸೂಚನೆಯಂತೆ, ಮಾತೆ ಮರಿಯವ್ವ, ಕೂಸು ಯೇಸುವನ್ನು ಕರೆದುಕೊಂಡು ಈಜಿಪ್ಟ್ ದೇಶಕ್ಕೆ ಪಲಾಯನ ಮಾಡುತ್ತಾನೆ.

'ಬಿತ್ತುವಾಗ ಬಂದಿದ್ದರು': ಜೋಸೆಫ್ ಈಜಿಪ್ಟಿಗೆ ಓಡಿಹೋಗುವ ಪ್ರಸಂಗಕ್ಕೆ, ಸೈನಿಕರಿಗೆ ದಾರಿ ತಪ್ಪಿಸುವ ಪ್ರಕರಣದ ಬಾಲವೊಂದನ್ನು ಪೋಣಿಸಿ, ಕನ್ನಡ ನಾಡಿನ ಬಯಲು ಸೀಮೆಯ ಕನ್ನಡ ಕಥೋಲಿಕ ಕ್ರೈಸ್ತ ಜನಪದರು ಸುಂದರ ಕತೆಯನ್ನು ಹೆಣೆದಿದ್ದಾರೆ. ಈಜಿಪ್ಟಿಗೆ ಓಡಿ ಹೋಗುವಾಗ ಜೋಸೆಫ್, ಬಿತ್ತಲು ನಿಂತಿದ್ದ ರೈತರ ಕೈಯಲ್ಲಿನ ಗೋಧಿಯನ್ನು ಹೊಲದಲ್ಲಿ ತೂರುತ್ತಾನೆ. ನೆಲಕ್ಕೆ ಬಿದ್ದ ಬೀಜಗಳು ಮೊಳಕೆಯೊಡೆದು, ಬೆಳೆ ಬೆಳೆದು ನಿಲ್ಲುತ್ತವೆ. ತೆನೆಗಳು ತೊನೆದಾಡುತ್ತವೆ. ಪವಿತ್ರ ಕುಟುಂಬ ಅದರಲ್ಲಿ ಅಡಗಿಕೊಳ್ಳುತ್ತದೆ. ಅವರನ್ನು ಹಿಂಬಾಲಿಸಿದ ಹೆರೋದನ ಸೈನಿಕರು, ದಂಪತಿ ಮತ್ತು ಹಸುಗೂಸಿನ ಬಗ್ಗೆ ವಿಚಾರಿಸುತ್ತಾರೆ. 'ಬಿತ್ತುವಾಗ ಬಂದಿದ್ದರು' ಎಂಬ ರೈತರ ಮಾತಿನಿಂದ ಸೈನಿಕರು ಹುಡುಕುವ ದಿಕ್ಕು ಬದಲಿಸುತ್ತಾರೆ.

ಈ ಕಥೆಯ ಆಧಾರದಲ್ಲಿ, ಕ್ರಿಸ್ಮಸ್ ಸಂದರ್ಭದಲ್ಲಿ ಚರ್ಚುಗಳು ಮತ್ತು ಕ್ರೈಸ್ತರ ಮನೆಮನೆಗಳಲ್ಲಿ ಸಜ್ಜುಗೊಳ್ಳುವ ಗೋದಲಿಗಳಿರುವ ಕೊಟ್ಟಿಗೆಗಳ ಪ್ರತಿಕೃತಿಗಳ ಅಲಂಕಾರಕ್ಕೆ ಗೋಧಿ, ರಾಗಿ, ಜೋಳದ ಸಸಿಗಳನ್ನು ಬೆಳೆಯುವ ಸಂಪ್ರದಾಯ ನಾಡಿನ ಕ್ರೈಸ್ತರಲ್ಲಿ ರೂಢಿಗೆ ಬಂದಿದೆ ಎನ್ನಲಾಗುತ್ತದೆ.

ಅಂಕುರಾರ್ಪಣೆಯ 'ಜಾಗರ': ಉತ್ಸವದ ಅಂಗವಾಗಿ ಮೊಟ್ಟಮೊದಲು ಧಾನ್ಯಗಳನ್ನು ಮೊಳೆಯ ಹಾಕುವ ಶುಭಕರ್ಮವೇ ಅಂಕುರಾರ್ಪಣ. ಮಂಗಳ ಪ್ರಸಂಗಗಳಲ್ಲಿ ಅಂಕುರಾರ್ಪಣವೆಂಬ ಕರ್ಮದ ಅಂಗವಾಗಿ ಪಾತ್ರೆಗಳಲ್ಲಿ ಬೆಳೆಸುವ ಪೈರಿಗೆ ಜಾಗರ ಎನ್ನುತ್ತಾರೆ ಎಂದು ಅರ್ಥಕೋಶಗಳು ತಿಳಿಸುತ್ತವೆ.

ವಿಷ್ಣು ದೇವಾಲಯಗಳಲ್ಲಿನ ಬ್ರಹ್ಮೋತ್ಸವ, ವರಮಹಾಲಕ್ಷ್ಮಿ ಹಬ್ಬದಲ್ಲಿ ಜಾಗರದ ಬಳಕೆಯಿದೆ. ಉತ್ತರ ಕರ್ನಾಟಕದಲ್ಲಿ ವಿಜಯದಶಮಿಯ ದಿನದಂದು ಎಳೆಯ ಗೋಧಿ ಹುಲ್ಲನ್ನು ಹಂಚಿಕೊಂಡು, 'ಬಂಗಾರ ತಗೊಂಡ ನಾವು ನೀವು ಬಂಗಾರದಂಗ ಇರೂಣ' ಎನ್ನುತ್ತಾ ಸಂಭ್ರಮಿಸುತ್ತಾರೆ. ನಾಗರ ಪಂಚಮಿಯಲ್ಲಿ ಜಾಗರ ಬೆಳೆದು, ನಾಗಪ್ಪನಿಗೆ ಏರಿಸುತ್ತಾರೆ. ರೈತಾಪಿ ಜನರು ಗುಳ್ಳವ್ವನ ಹಬ್ಬದಲ್ಲಿ ತಾಟಿನೊಳಗೆ ಗೋಧಿ ಸಸಿ ಬೆಳೆದು, ಗುಡಿಗೆ ಒಯ್ದು ದೇವರಿಗೆ ಏರಿಸುತ್ತಾರೆ. ಮಹಿಳೆಯರು ತಲೆಗೆ ಮುಡಿದುಕೊಳ್ಳುತ್ತಾರೆ. ಲಂಬಾಣಿ ಮಹಿಳೆಯರು, ತಾಂಡಾದ ಸಂತೋಷದ ದಿನಗಳಲ್ಲಿ ಮತ್ತು ದೀಪಾವಳಿಯಲ್ಲಿ ಗೋಧಿಹುಲ್ಲು ಬೆಳೆದು 'ತೀಜ್' ಹಬ್ಬವನ್ನು ಆಚರಿಸುತ್ತಾರೆ.

ಫಲವಂತಿಕೆಯ, ನಿಸರ್ಗಾರಾಧನೆಯ 'ಜಾಗರ' ಆಚರಣೆಯು ಒಂದು ನಿರ್ದಿಷ್ಟ ಹಬ್ಬಕ್ಕೆ, ಸಮಯಕ್ಕೆ, ಸಮುದಾಯಕ್ಕೆ ಸೀಮಿತಗೊಂಡಂತಿಲ್ಲ. ಏಷ್ಯಾ ಖಂಡದಲ್ಲಿ ಹುಟ್ಟಿದರೂ, ಯೂರೋಪಿನ ಧರ್ಮ ಎಂಬ ಹಣೆಪಟ್ಟಿ ಕಟ್ಟಿಕೊಂಡಿರುವ ಕ್ರೈಸ್ತ ಧರ್ಮವನ್ನು ಅಪ್ಪಿಕೊಂಡಿರುವ ಭಾರತದಲ್ಲಿನ ಕ್ರೈಸ್ತರೂ ಭಾರತೀಯರೇ. ಈ ನೆಲದ ಮಕ್ಕಳಾಗಿರುವ ಅವರ ಹಬ್ಬದಾಚರಣೆಗಳಲ್ಲಿಯೂ ಈ ನೆಲದ ವಾಸನೆ ಸೂಸುವುದು ಅಚ್ಚರಿಯೇನಲ್ಲ.

12ನೇ ಪುಟಕ್ಕೆ...

ಕೊಟ್ಟಿಗೆಯ ಗೋದಲಿ

ಕೊಟ್ಟಿಗೆಗಳಲ್ಲಿನ ಗೋದಲಿ (ಚೌಕಾಕಾರದ ಮೇವಿನ ತೊಟ್ಟಿ)ಯಲ್ಲಿ ಕೂಸು ಯೇಸುಸ್ವಾಮಿಯ ಮತ್ತು ಅದರ ಎಡಬಲಕ್ಕೆ ಜೋಸೆಫ ಮತ್ತು ಮರಿಯಳ ಸ್ವರೂಪಗಳನ್ನು, ದೂರದಲ್ಲಿ ಕೂಸು ಯೇಸುವನ್ನು ಕಾಣಲು ಬರುವ ಕುರುಬರ ಮತ್ತು ಮೂಡಣದ ಮೂರು ರಾಯರ (ಪಂಡಿತರ), ದನಕರುಗಳ ಗೊಂಬೆಗಳನ್ನು ಇರಿಸುತ್ತಾರೆ. ಜೊತೆಗೆ ಕುರುಬರಿಗೆ ಮಾಹಿತಿ ನೀಡಿದ ದೇವದೂತನ ಮತ್ತು ಪಂಡಿತರಿಗೆ ದಾರಿ ತೋರಿದ ನಕ್ಷತ್ರದ ಪ್ರತಿಕೃತಿಗಳನ್ನು ತೂಗು ಬಿಡಲಾಗುತ್ತದೆ. ರೂಢಿಯಲ್ಲಿ ಇದನ್ನು ಗೋದಲಿ ಎನ್ನುವರು. ಹಬ್ಬದ ನಂತರದಲ್ಲಿ ಜನವರಿ ಆರರಂದು ಮೂರು ರಾಯರ ಹಬ್ಬದ ದಿನದ ಸಂಜೆ ಹೊತ್ತಿಗೆ ಕ್ರಿಸ್ಮಸ್ ಕೊಟ್ಟಿಗೆಯನ್ನು ಕಳಚಲಾಗುವುದು. ಗೋಧಿ, ರಾಗಿ ಮೊದಲಾದ ಕಾಳುಗಳ ಎಳೆಯ ಸಸಿ ಹುಲ್ಲಿಗೆ 'ಜಾಗರ' ಎಂಬ ಹೆಸರಿದೆ.

ಅಹೋರಾತ್ರಿ ನಾದಾನುಭವ

ಪಂಡಿತ್ ಸೋಮನಾಥ ಮರ್ಡೂರ್

ವೇಗದ ಬದುಕಿಗೆ ಒಗ್ಗಿಕೊಂಡಿರುವ ಮಂಗಳೂರಿನಲ್ಲಿ 'ಸ್ವರಾನಂದ ಪ್ರತಿಷ್ಠಾನ' ಮೊದಲ ಕಾರ್ಯಕ್ರಮವಾಗಿ ಅಹೋರಾತ್ರಿ ಸಂಗೀತವನ್ನು ಪ್ರಸ್ತುತಪಡಿಸಿತು. ಆ ನಾದದ ಮಧುರ ಕ್ಷಣಗಳು ಇಲ್ಲಿವೆ...

ಶ್ರೀಮತಿ ದೇವಿ

ಇಂಚರ

'ಬನಮೆ ಚರಾವತ ಗಯ್ಯಾ' ಎಂಬ ಸಾಲಿನೊಂದಿಗೆ ರಾಗ ಮಾಲಗುಂಜಿಯ ಸ್ವರಗಳು ಮಧ್ಯರಾತ್ರಿ 12ರ ಸುಮಾರಿನಲ್ಲಿ ಸಭಾಂಗಣವನ್ನು ಆವರಿಸುತ್ತಿದ್ದಂತೆ, ಎದುರಿಗಿದ್ದ ಶ್ರೋತೃಗಳು ನಿದ್ರೆಯ ಆಯಾಸವನ್ನೂ ಮರೆತು ವಿದುಷಿ ಅಪೂರ್ವಾ ಗೋಖಲೆ ಮತ್ತು ಪಲ್ಲವಿ ಜೋಶಿ ಸಹೋದರಿಯರ ಮೋಹಕ ಗಾಯನದಲ್ಲಿ ಲೀನರಾಗಿದ್ದರು.

ಇತ್ತೀಚೆಗೆ ಮಂಗಳೂರಿನಲ್ಲಿ ಹೊಸದಾಗಿ ರೂಪುಗೊಂಡ 'ಸ್ವರಾನಂದ ಪ್ರತಿಷ್ಠಾನ' ಬಿಇಎಮ್ ಹೈಸ್ಕೂಲಿನ ಸಭಾಂಗಣದಲ್ಲಿ ತನ್ನ ಮೊದಲನೆಯ ಕಾರ್ಯಕ್ರಮವನ್ನು ಆಯೋಜಿಸಿತ್ತು. ಪ್ರತಿಷ್ಠಾನದ ಉದ್ಘಾಟನಾ ಕಾರ್ಯಕ್ರಮವಾಗಿ ರಾತ್ರಿ 9 ಗಂಟೆಯಿಂದ ಮರುದಿನ ಬೆಳಿಗ್ಗೆ 7ರ ವರೆಗಿನ ಸಂಗೀತ ನೀಡಿದ ರಸಾನುಭವ ಬಹುಕಾಲ ನೆನಪಿನಲ್ಲುಳಿಯುವಂಥದ್ದು.

ಹಿಂದೂಸ್ತಾನಿ ಸಂಗೀತ ಪರಂಪರೆಯಲ್ಲಿ ಹಿಂದೆ ರೂಢಿಯಲ್ಲಿದ್ದು ಈಗ ಕಡಿಮೆಯಾಗುತ್ತಿರುವ ಬೈಠಕ್ ಕಾರ್ಯಕ್ರಮಗಳನ್ನು ಮಂಗಳೂರು ಪ್ರದೇಶದಲ್ಲಿ ಆರಂಭಿಸುವ ಹುಮ್ಮಸ್ಸಿನಿಂದ ಸಮಾನ ಸಂಗೀತಾಸಕ್ತರು ಸೇರಿ ಆರಂಭಿಸಿದ ಸಂಸ್ಥೆಯೇ 'ಸ್ವರಾನಂದ ಪ್ರತಿಷ್ಠಾನ'. ಈ ಕಾರ್ಯಕ್ರಮದಲ್ಲಿ ದೇಶದ ವಿವಿಧೆಡೆಯ ಕಲಾವಿದರ ವಿಭಿನ್ನ ಪ್ರಸ್ತುತಿ ಕೇಳಲು ಲಭ್ಯವಾಯಿತು ಮಾತ್ರವಲ್ಲದೆ, ರಾಗ-ಸಮಯ ಪದ್ಧತಿಗನುಸಾರವಾಗಿ ರಾತ್ರಿಯಿಂದ ಬೆಳಗಿನವರೆಗಿನ ತುಂಬಾ ವಿರಳವಾಗಿ ಕೇಳಸಿಗುವ ರಾಗಗಳನ್ನು ಆಸ್ವಾದಿಸುವ ಅವಕಾಶವಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮೊದಲ ಕಾರ್ಯಕ್ರಮ ನೀಡಿದವರು 79ರ ವಯಸ್ಸಿನ ಪಂ.ಸೋಮನಾಥ ಮರ್ಡೂರ್. ಅವರು ರಾಗ ದುರ್ಗಾದ ಸೌಂದರ್ಯವನ್ನು ತಮ್ಮ ಗಾಯನದ ವಿಶೇಷತೆಯಾದ ಭಾವಯುಕ್ತ 'ಪುಕಾರ್'ಗಳ ಮೂಲಕ ತೆರೆದಿಟ್ಟರು. ತಬಲಾದಲ್ಲಿ ಪಂ.ಅರವಿಂದ ಕುಮಾರ್ ಆಜಾದ್ ಹಾಗೂ ಹಾರ್ಮೋನಿಯಂನಲ್ಲಿ ಪಂ.ಸುಧೀರ್ ನಾಯಕ್ ಅವರು ಸಹಕರಿಸಿದರು. ಆ ನಂತರ ಪಂ.ಸುಧೀರ್ ನಾಯಕ್ ಅವರು ಹಾರ್ಮೋನಿಯಂ ಸೋಲೋನಲ್ಲಿ ಜೈಜೈವಂತಿ ಹಾಗೂ ಕೀರವಾಣಿ ರಾಗಗಳಲ್ಲಿ ತಮ್ಮ ಮೇಧಾವಿತನ ಮತ್ತು ಕೈಚಳಕವನ್ನು ಮನಮುಟ್ಟುವಂತೆ ಬಿಡಿಸಿಟ್ಟರು. ಪಂ.ಗುರುಮೂರ್ತಿ ವೈದ್ಯ ಅವರು ತಬಲಾದಲ್ಲಿ ಸಹಕರಿಸಿದರು.

ಅಪರೂಪದ ತಾಳಗಳ ಹಿಡಿತ

ಆ ಬಳಿಕ ವೇದಿಕೆಗೆ ಬಂದವರು ಗ್ವಾಲಿಯರ್ ಘರಾಣೆಯ ಪಕ್ವ ಗಾಯಕಿಯರಾದ ವಿದುಷಿ ಅಪೂರ್ವಾ ಗೋಖಲೆ ಮತ್ತು ಪಲ್ಲವಿ ಜೋಶಿ ಸಹೋದರಿಯರು. ವಿಚಾರಯುಕ್ತ, ಶಿಸ್ತುಬದ್ಧ, ಸುಸಂಬದ್ಧ ಮತ್ತು ಅಷ್ಟೇ ಆನಂದದಾಯಕವಾದ ಪ್ರಸ್ತುತಿಗೆ ಹೆಸರಾದ ಈ ಗಾಯಕಿಯರು ರಾಗ ಮಾಲಗುಂಜಿ, ನಾಯಕಿ ಕಾನಡಾ ಮತ್ತು ಬಾಗೇಶ್ರೀ ಅಂಗದ ಚಂದ್ರಕೌನ್ಸ್ ಈ ಅಪರೂಪದ ರಾಗಗಳನ್ನು ಆಯ್ದುಕೊಂಡದ್ದು ಕೇಳುಗರಿಗೆ ದೊರಕಿದ ರಸದೌತಣವಾಗಿತ್ತು. ರಾಗ, ಲಯದ ಕುರಿತ ಅವರ ಚಿಂತನೆ, ಆವರ್ತನವನ್ನು ಅವರು ತುಂಬುವ ರೀತಿಯಲ್ಲಿ ಕಲಿಯುವಂತಹ ಅನೇಕ ವಿಷಯಗಳಿವೆ. ಇವರ ಗಾಯನದಲ್ಲಿ ಉತ್ಸಾಹವಿದೆ, ಚಮತ್ಕಾರವಿದೆ ಜೊತೆಗೆ ಸ್ವರದ ಆನಂದವಿದೆ. ಅಪೂರ್ವಾ ಅವರು ಕೆಳಗಿನ ಸ್ವರಗಳಲ್ಲಿನ ಸಂಚಾರವನ್ನು ಗಂಭೀರವಾಗಿ ನಡೆಸಿ ರಾಗದ ಚೌಕಟ್ಟನ್ನು ನಿಲ್ಲಿಸುವ ಕೆಲಸ ಮಾಡಿದರೆ, ಪಲ್ಲವಿ ಅವರು ಆ ಚೌಕಟ್ಟಿನ ಮೇಲೆ ಸೌಧವನ್ನು ಕಟ್ಟುವ ಕಾರ್ಯವನ್ನು ತಾರ ಸಪ್ತಕದಲ್ಲಿ ಲೀಲಾಜಾಲವಾಗಿ ಮಾಡಿದರು. ಅಪರೂಪದ ತಾಳಗಳಾದ ತಿಲವಾಡಾ, ಝೂಮ್ರಾಗಳ ಮೇಲಿನ ಅವರ ಹಿಡಿತ ಅಸಾಮಾನ್ಯ. ತಬಲಾದಲ್ಲಿ ಗುರುಮೂರ್ತಿ ವೈದ್ಯ, ಹಾರ್ಮೋನಿಯಂನಲ್ಲಿ ಸುಧೀರ್ ನಾಯಕ್ ಅವರದ್ದು ಸಮರ್ಥ ಸಾಥ್ ಸಂಗತ್.

ಈ ಪ್ರಸ್ತುತಿಯ ನಂತರ ಸರೋದ್ ವಾದನ ನಡೆಸಿಕೊಟ್ಟವರು ಅಭಿಷೇಕ್ ಬೋರ್‌ಕರ್. ನುಡಿಸಲು ಕಠಿಣವಾದ ಈ ವಾದ್ಯದ ಮೇಲೆ ಮಧ್ಯರಾತ್ರಿಯ 'ರಾಜ'ನೆನಿಸಿದ ದರಬಾರಿ ಕಾನಡಾವನ್ನು, ಆ ರಾಗಕ್ಕೆ ಸಲ್ಲುವ ಗಂಭೀರವಾದ ಮೀಂಡ್‌ಯುಕ್ತ ಆಲಾಪ್‌ದೊಂದಿಗೆ ಅತ್ಯಂತ ಕೌಶಲದಿಂದ ನುಡಿಸಿದರು. ನಂತರದಲ್ಲಿ ರಾಗ ಝಿಂಝೋಟಿ ನುಡಿಸಿದ ಅಭಿಷೇಕ್ ಅವರ ಜೊತೆ ತಬಲಾದಲ್ಲಿ ಉದಯ್ ಕುಲಕರ್ಣಿ ಅತ್ಯಂತ ಪ್ರಬುದ್ಧ ಸಾಥ್ ನೀಡಿದರು.

ಬೆಳಗಿನ ರಾಗಗಳ ಮಧುರ ಸ್ವರ

ಮಧ್ಯರಾತ್ರಿ ಸರಿದು ಬೆಳಗು ಹಣಿಕಿ ಹಾಕುವ ಮಂಗಳ ಸಮಯದಲ್ಲಿ ಬೆಳಗಿನ ರಾಗಗಳ ಮಧುರ ಸ್ವರಗಳೊಂದಿಗೆ ಜನಮನಸೂರೆಗೊಂಡವರು ಕುಮಾರ್ ಮರ್ಡೂರ್. ತಮ್ಮ ತಂದೆ ಸೋಮನಾಥ ಮರ್ಡೂರ್ ಅವರಿಂದ ಒಳ್ಳೆಯ ವಿದ್ಯೆ ಪಡೆದು ಸ್ವಲ್ಪ ಕಾಲ ಕೋಲ್ಕತ್ತದ ಸಂಗೀತ ರಿಸರ್ಚ್ ಅಕಾಡೆಮಿಯಲ್ಲಿ ಅಧ್ಯಾಪಕರಾಗಿಯೂ ಸೇವೆ ಸಲ್ಲಿಸಿದ ಕುಮಾರ್ ಅವರ ಗಾಯನವು ಕಿರಾನಾ ಘರಾಣೆಯ ಸ್ವರ ಪ್ರಧಾನ ಗಾಯಕಿಯ ಜೊತೆ ಗ್ವಾಲಿಯರ್‌ನ ಲಯ-ಚೌಕಟ್ಟು ಪ್ರಧಾನ ಗಾಯಕಿಯ ಅಂಶಗಳನ್ನೂ ಒಳಗೊಂಡಿರುವುದು ಅವರ ಗಾಯನಕ್ಕೆ ಹೊಸ ಹೊಳಪನ್ನು ಕೊಟ್ಟಿದೆ. ಜ್ಞಾನೇಶ್ವರ ಸೋನಾವನೆ ಮತ್ತು ಉದಯ್ ಕುಲಕರ್ಣಿ ಅವರುಗಳ ಅತ್ಯಂತ ಲವಲವಿಕೆಯ ಸಾಥ್‌ನೊಂದಿಗೆ ಭಟಿಯಾರ್ ಮತ್ತು ಹಿಂಡೋಲ್ ರಾಗಗಳನ್ನು ಕುಮಾರ್ ಪ್ರಸ್ತುತಪಡಿಸಿದರು.

ಮಾರವಾ ಥಾಟ್‌ನ ಬೆಳಗಿನ ರಾಗಗಳಾದ ಭಟಿಯಾರ್, ಹಿಂಡೋಲ್‌ಗಳ ನಂತರದಲ್ಲಿ ಸಮಯ ಚಕ್ರವನ್ನು ಪ್ರವೇಶಿಸುವುದು ಭೈರವ್ ಥಾಟ್‌ನ ಕೋಮಲ ಸ್ವರಗಳು. ನಸುಕಿನ ಮಾರ್ದವತೆಯನ್ನು ಹಿಡಿದಿಟ್ಟುಕೊಂಡ ಈ ರಾಗಗಳು ತುಂಬಾ ಆಪ್ಯಾಯಮಾನವೆನಿಸುತ್ತವೆ. ರಾಗ 'ಲಲತ್', ರವಿಕಿರಣ್ ಮಣಿಪಾಲ್ ಅವರ ಪ್ರಸ್ತುತಿಯಲ್ಲಿ ಆರಂಭವಾದಾಗ ಹೊರಗಡೆ ಭಾನುವಿನ ಉಗಮವಾಗತೊಡಗಿತ್ತು. 'ಮನವಾ ತೂ ಕಾಹೆ ಡೂಂಢ್ ಫಿರೆ, ಮಾಟಿ ಕೆ ಮತ್ ಮಂದಿರ ಮೆ' ಎಂಬ ಬಂದಿಶ್ ಎತ್ತಿಕೊಂಡು ಅವರು ರಾಗವನ್ನು ವಿಸ್ತರಿಸಿದರು. ವಿಶೇಷವಾದ ಹಾಗೂ ವಿಚಾರಾತ್ಮಕವಾದ ಸಾಹಿತ್ಯವುಳ್ಳ ಬಂದಿಶ್ ಅನ್ನು ಆಯ್ದುಕೊಂಡು ಅಲ್ಲಿನ ವಿಚಾರವನ್ನು ಸ್ವರ ಹಾಗೂ ರಾಗಭಾವದ ಮೂಲಕ ಸ್ಥಾಪಿಸುವ ಪ್ರಯತ್ನವನ್ನು ಮಾಡುವ ರವಿಕಿರಣ್ ಅವರದ್ದು ವಿಭಿನ್ನವಾದ ಗಾಯನ ಶೈಲಿ. ಇಲ್ಲಿ ಬುದ್ಧಿ-ಭಾವಗಳ ಸಂಗಮವಿದೆ, ಮನಸ್ಸನ್ನು ಮುಟ್ಟುವ ಆರ್ತತೆಯಿದೆ.

ರವಿಕಿರಣ್ ಅವರ ಪ್ರಸ್ತುತಿಯ ಬಸಂತ್ ಮುಖಾರಿ ರಾಗದ ಒಂದು ಬಂದಿಶ್‌ನೊಂದಿಗೆ ಕಾರ್ಯಕ್ರಮವು ಸಂಪನ್ನಗೊಂಡಿತು. ಹಿಂದೂಸ್ತಾನಿ ಸಂಗೀತದಲ್ಲಿ ಎಲ್ಲಾ ರಾಗಗಳು ಸಮಯ ಚಕ್ರ ಆಧಾರಿತವಾಗಿವೆ. ಈ ಕಾರಣದಿಂದಾಗಿ, ಅನೇಕ ರಾಗಗಳು ಕೇಳಲು ದೊರಕುವುದಿಲ್ಲ. ಅಹೋರಾತ್ರಿ ಕಾರ್ಯಕ್ರಮಗಳಲ್ಲಿ ದಿನ-ರಾತ್ರಿಗಳ ಬದಲಾವಣೆಯ ಜೊತೆಯಲ್ಲೇ ರಾಗದಲ್ಲಿ ಪ್ರಯೋಗವಾಗುವ ಸ್ವರಗಳು ಬದಲಾಗುತ್ತಾ ಹೋಗುವ ಅದ್ಭುತದ ಅನುಭವ ಸಾಧ್ಯವಾಗುತ್ತದೆ.

ರಾತ್ರಿಯಿಂದ ಬೆಳಗಿನವರೆಗೆ ವೇದಿಕೆಯ ಮೇಲೆ ಪ್ರವೇಶಿಸುವ ಕಲಾವಿದರು ರಾಗದ ಪರಕಾಯ ಪ್ರವೇಶ ಮಾಡುವಂಥವರು.



ಅಪೂರ್ವಾ ಗೋಖಲೆ, ಪಲ್ಲವಿ ಜೋಶಿ

ಪ್ರತಿಯೊಬ್ಬರ ಕಂಠದ ಅಥವಾ ಅವರು ನುಡಿಸುವ ವಾದ್ಯದ ಟೋನಲ್ ಕ್ವಾಲಿಟಿ ವಿಭಿನ್ನವಾದದ್ದು. ಅವರು ಪಡೆದ ಪಾಠ, ತಾಲೀಮು, ಅವರು ಮಾಡಿದ ಅಭ್ಯಾಸ, ಅವರ ಪರಿಣತಿ, ಪ್ರತಿಭೆ, ಅನುಭವ ಎಲ್ಲವೂ ಬೇರೆ ಬೇರೆ. ಮಾತ್ರವಲ್ಲದೆ ಸ್ವರ-ರಾಗ-ಲಯ ಕುರಿತು ಪ್ರತಿಯೊಬ್ಬ ಕಲಾವಿದನ ಚಿಂತನೆ-ಕಲ್ಪನೆ ಬೇರೆ ಬೇರೆಯದೇ ಆಗಿದೆ. ಇವೆಲ್ಲದರ ಸಾರದಂತಿರುವ ವೇದಿಕೆ ಮೇಲಿನ 'ಪ್ರಸ್ತುತಿ' ಇನ್ನೂ ಬೇರೆಯದೇ ಆಗಿರುತ್ತದೆ. ಆದರೆ, ಪ್ರತಿಯೊಬ್ಬ ಕಲಾವಿದನ ಗುರಿ ಮಾತ್ರ 'ರಸಾಭಿವ್ಯಕ್ತಿ'ಯೇ ಆಗಿರುತ್ತದೆ.

ಅವಸರದ ಬದುಕಿಗೆ ಒಗ್ಗಿಕೊಂಡಂತೆ ಆಗಿರುವ ದಕ್ಷಿಣ ಕನ್ನಡದಲ್ಲಿ ಒಂದಷ್ಟು ಸಮಯವನ್ನು ಹುಡುಕಿ ತೆಗೆದು, ಅದನ್ನು ಶಾಸ್ತ್ರೀಯ ಸಂಗೀತಕ್ಕಾಗಿ ವಿನಿಯೋಗಿಸುವ ಧೈರ್ಯ ತೋರಿದ ಸ್ವರಾನಂದ ಪ್ರತಿಷ್ಠಾನದ ಆಯೋಜಕರು ಅಭಿನಂದನಾರ್ಹರು.

ಡೈರೆಕ್ಟ್ ಆ್ಯಕ್ಷನ್: ಚೌಕಟ್ಟಿಗೆ ಹೊಂದಿಸಿದ ಚಿತ್ರ

ದೇವು ಪತ್ತಾರ

ನೋಡನೋಡುತ್ತಿದ್ದಂತೆಯೇ 'ವರ್ತಮಾನ'ವಾಗಿದ್ದ ಸಮಕಾಲೀನ ಘಟನೆಗಳು 'ಇತಿಹಾಸ' ಆಗುವುದು ಸಹಜ ಪ್ರಕ್ರಿಯೆ. ಚರಿತ್ರೆಯ ಪುಟ ಸೇರುವ ಸಂಗತಿಗಳು 'ಕತೆ'ಯಾಗುವುದು ಕೂಡ ಸಹಜ ಕ್ರಿಯೆ. ಈ ಕ್ರಿಯೆಗೆ ಸೃಜನಶೀಲ ಪ್ರತಿಕ್ರಿಯೆ ನೀಡಿ 'ಕಲಾಕೃತಿ' ಆಗಿಸುವ ಹಟ-ಪ್ರಯತ್ನ ಕೂಡ ನಡೆಯುತ್ತಲೇ ಇರುತ್ತದೆ. ಈ ಹುಡುಕಾಟದ ನೆಲೆ ಅವರವರಿಗೆ ಕಂಡ ಸತ್ಯವಾಗಿರುತ್ತದೆ. ಬದುಕಿದ್ದಾಗಲೇ 'ದಂತಕತೆ'ಯಂತಿದ್ದ ಪ್ರೊಫೆಸರ್ ಎಂ.ಡಿ.ನಂಜುಂಡಸ್ವಾಮಿ ಅವರು ನಾಟಕಕ್ಕೆ ವಸ್ತುವಾಗಿದ್ದಾರೆ. ಇದನ್ನು ದಂತಕತೆಯೊಂದು ಕತೆಯಾದ ಸೋಜಿಗ ಎನ್ನಬಹುದು. ಈ ಸೋಜಿಗವನ್ನು ಬರೆದು ಆಗುಮಾಡಿದವರು ಕತೆಗಾರ-ಲೇಖಕ ನಟರಾಜ ಹುಳಿಯಾರ್. ಅದನ್ನು ನಿರ್ದೇಶನದ ಮೂಸೆಯಲ್ಲಿ ಅರಳಿಸಿದವರು 'ಕಬಡ್ಡಿ' ನರೇಂದ್ರ ಬಾಬು. ಚಿತ್ರನಟ ಸಂಪತ್ ಮೈತ್ರೇಯ ಅವರು ಎಂ.ಡಿ.ಎನ್. ಪಾತ್ರದಲ್ಲಿ ರಂಗ ಕಳೆಕಟ್ಟುವಂತೆ ಮಾಡಿದ್ದಾರೆ. ಅನುಕರಣೆ-ಅಭಿನಯ ಎರಡರಲ್ಲೂ ಸಂಪತ್ ತಮಗೆ ದೊರೆತ ಅವಕಾಶವನ್ನು ಸದುಪಯೋಗಪಡಿಸಿಕೊಂಡಿದ್ದಾರೆ. ಹಾಗೆಯೇ ತಮ್ಮ ಎದುರಿಗಿದ್ದ ಸವಾಲನ್ನು ಸಂಪತ್ ನಾಟಕೀಯ ಪ್ರಸ್ತುತಿಯ ಮೂಲಕ ದಾಟಿದ್ದಾರೆ.

ಇತ್ತೀಚೆಗೆ ಬೆಂಗಳೂರಿನ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ 'ಡೈರೆಕ್ಟ್ ಆ್ಯಕ್ಷನ್' ನಾಟಕ ಪ್ರದರ್ಶಿತವಾಯಿತು. ಪ್ರೊ. ಎಂ.ಡಿ. ನಂಜುಂಡಸ್ವಾಮಿ ಹೋರಾಟ ಗಾಥೆಯನ್ನು ಅನನುಕ್ರಮಣಿಕೆಯ ಶೈಲಿಯಲ್ಲಿ ಹೇಳಿರುವ ಈ ನಾಟಕದ ಪರಿಣಾಮ ಅಕ್ಷರರೂಪದಲ್ಲಿ...

ನೋಡಿ, ಕೇಳಿ, ಓದಿ ಗೊತ್ತಿದ್ದ ಎಂ.ಡಿ.ಎನ್. ಅವರ ಬದುಕು ಬಿಡಿ ಬಿಡಿ ಘಟನೆಗಳಾಗಿ ಕಣ್ಣಮುಂದೆ ಅನಾವರಣ ಆಗುತ್ತ ಹೋಗುತ್ತವೆ. ಅದನ್ನು ಕ್ರೋನಾಲಜಿಕಲ್ ಆರ್ಡರ್ ಇಲ್ಲದಂತೆಯೇ ಕಟ್ಟಿದ್ದು ಕೂಡ ಉದ್ದೇಶಪೂರ್ವಕ.

ದೆಹಲಿಯಲ್ಲಿ ಇತ್ತೀಚೆಗೆ ನಡೆದು ಯಶಸ್ಸು ಕಂಡ ಪ್ರಭುತ್ವ ವಿರೋಧಿ ರೈತ ಚಳವಳಿಯ ಘಟನೆಯ ದೃಶ್ಯದೊಂದಿಗೆ ಆರಂಭವಾಗುವ ಪ್ರದರ್ಶನವು ಇಂತಹ ಚಳವಳಿಯ ಲೆಜೆಂಡ್ ಒಬ್ಬರ ಕಡೆಗೆ ಹೊರಳುವುದು ಸಹಜ. ಉತ್ತರ ಪ್ರದೇಶದಲ್ಲಿ ಮಹೇಂದ್ರಸಿಂಗ್ ಟಿಕಾಯತ್ ಜೊತೆಗೆ 'ಪ್ರತಿಮೆ'ಯಾಗಿರುವ ನಂಜುಂಡಸ್ವಾಮಿ ಅವರು ರೈತ ಹೋರಾಟದ 'ಪ್ರತೀಕ' ಆಗುವಂತೆ ಮಾಡಿ ತೋರಿಸುವ ಪ್ರಯತ್ನವಿದು. ಸಮಕಾಲೀನ ಸವಾಲುಗಳಿಗೆ ಎಂ.ಡಿ.ಎನ್. ಅವರಲ್ಲಿ ಉತ್ತರ ಇದ್ದಿರಬಹುದೇ? ಅದು ಸಿಗಬಹುದೇ? ಎಂಬ ಹುಡುಕಾಟವು 'ಆಯಾ ಕಾಲವು ತನ್ನ ಕಾಲಕ್ಕೆ ತಕ್ಕ ಚಳವಳಿಯನ್ನು ರೂಪಿಸಿಕೊಳ್ಳಬೇಕು' ಎಂಬ ಆಶಯದ ಅನಾವರಣಕ್ಕೆ ಅನುವು ಮಾಡಿಕೊಡುತ್ತದೆ.

'ಡೈರೆಕ್ಟ್ ಆ್ಯಕ್ಷನ್' ನಾಟಕದ ಒಂದು ಸನ್ನಿವೇಶ ಚಿತ್ರಗಳು: ತಾಯಿ ಲೋಕೇಶ್

ನಂಜುಂಡ ಸ್ವಾಮಿ ಪಾತ್ರದಲ್ಲಿ ಸಂಪತ್ ಮೈತ್ರೇಯ

ರಂಗಭೂಮಿ

ಎಂ.ಡಿ.ಎನ್. ಬಗ್ಗೆ ನಾಟಕದ ಲೇಖಕರಿಗೆ ಪ್ರೀತಿ-ಗೌರವ ಇದೆ. ಅದೇ ಕಾರಣಕ್ಕೆ ಅದನ್ನವರು ರಂಗಕೃತಿ ಆಗಿಸಲು ಹೆಣಗಿದ್ದಾರೆ. ಪ್ರೀತಿ ಗೌರವಗಳು 'ಆರಾಧನೆ'ಯಾಗಿ ಭಕ್ತಿಯಲ್ಲಿ ತೇಲುವಂತಹ ಎಚ್ಚರ ರಹಿತ ದಿನಗಳಿವು. ಇಂತಹ ಸಹಜ ಬೆಳವಣಿಗೆ-ಬದಲಾವಣೆಗಳಿಗೆ ವ್ಯತಿರಿಕ್ತವಾಗಿ ಪ್ರೀತಿಯ ಜೊತೆಗೇ ಅಂತರವನ್ನೂ ಇಟ್ಟುಕೊಂಡಿರುವ ರಚನೆಯಲ್ಲಿ ಗತದ ವೈಭವೀಕರಣ ಆಗಿಲ್ಲ. ಆದರೆ, ನಾಟಕದ ವಸ್ತುವೇ 'ನಾಯಕ' ಕೇಂದ್ರಿತ ಆಗಿರುವುದರಿಂದ ಸಹಜವಾಗಿಯೇ ಎಲ್ಲ ಘಟನೆಗಳೂ ಆ ಕೇಂದ್ರದ ಸುತ್ತ ಗಿರಕಿ ಹೊಡೆಯುತ್ತವೆ. ಎಂ.ಡಿ.ಎನ್. ಅವರೊಂದಿಗೆ ಪ್ರೀತಿ ಹಾಗೂ ಅಂತರದ ಗೌರವ ಇಟ್ಟುಕೊಂಡವರು ಪಾತ್ರಗಳಾಗಿದ್ದಾರೆ. ಪಾತ್ರವಾಗದಿದ್ದರೂ ಪ್ರಸ್ತಾಪವಾಗುವ 'ಗಾಂಧಿ ಬಜಾರಿನ ಗಾಂಧಿ', ಲಂಕೇಶ್ ಹಾಗೂ ಪಾತ್ರಗಳಾಗಿರುವ ಡಿ.ಆರ್. ಸುಂದರೇಶ್, ಶೂದ್ರ ಶ್ರೀನಿವಾಸ್, ಅಗ್ರಹಾರ ಕೃಷ್ಣಮೂರ್ತಿ ನಾಟಕದ ಕಟ್ಟುವಿಕೆಯ ಭಾಗವಾಗಿದ್ದಾರೆ.

ರಂಗದ ಮೇಲೆ ಕಷ್ಟಸಾಧ್ಯವಾದ ಹಲವು ಸಾಧ್ಯತೆಗಳನ್ನು ಆಗುಮಾಡಿದ್ದು ವಿಶೇಷ. ಆಕಾಶವಾಣಿಯ ವಾರ್ತೆ, ಟೆಲಿಫೋನ್ ಮಾತುಕತೆ, ಟಿ.ವಿ. ಸಂದರ್ಶನ, ವರದಿಗಾರಿಕೆಗಳನ್ನು ಕತೆಯ ಬೆಳವಣಿಗೆಗೆ ಅನುಕೂಲ ಆಗುವಂತೆ ಬಳಸಿಕೊಳ್ಳಲಾಗಿದೆ. ಅವು ಹಂದರಕ್ಕೆ ಪೂರಕವಾಗಿವೆ. ಆದರೆ, ಒಂದಾದ ಮೇಲೊಂದರಂತೆ ಬರುವ ಒಂದೇ ರೀತಿಯ ದೃಶ್ಯಗಳು ರಿಪಿಟೇಟಿವ್ ಆದಂತೆ ಭಾಸವಾಗುತ್ತವೆ. ಪೊಲೀಸ್ ಸಿಬ್ಬಂದಿಯನ್ನು ಬಳಸಿಕೊಂಡಿರುವ ದೃಶ್ಯಗಳು ಅದಕ್ಕೊಂದು ಉದಾಹರಣೆ.

ಪ್ರಭುತ್ವ ವಿರೋಧಿಯಾಗಿದ್ದ ನಂಜುಂಡಸ್ವಾಮಿ ಅವರು ಚಳವಳಿಯನ್ನು ಹೇಗೆ ಸೃಜನಶೀಲವಾಗಿ ರೂಪಿಸುತ್ತಿದ್ದರು ಎನ್ನುವುದಕ್ಕೆ ಹಲವು ಉದಾಹರಣೆಗಳು ನೋಡಲು ಸಿಗುತ್ತವೆ. ವಿಧಾನಸೌಧದ ಮುಂದೆ ನಿಂತು ನಗುವ ಚಳವಳಿ ಅಂತಹದ್ದರಲ್ಲೊಂದು. ಹಿಂಸೆಯನ್ನು ಕುರಿತ ಪ್ರೊಫೆಸರ್‌ರ ವ್ಯಾಖ್ಯಾನವೂ ಅವರಂತೆಯೇ ವಿಚಿತ್ರ. 'ರೈತನಲ್ಲ ಸಾಲಗಾರ, ಸರ್ಕಾರವೇ ಬಾಕಿದಾರ' ಎನ್ನುವ ನಿಲುವು ಹೊಂದಿದ್ದ ಎಂ.ಡಿ.ಎನ್. ಅವರು ರೈತ ಚಳವಳಿಗೆ ತಾತ್ವಿಕ ನೆಲೆ ಒದಗಿಸಿದವರು ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಆದರೆ, ಅದನ್ನ ಅಳವಡಿಸಿಕೊಂಡ 'ಡೈರೆಕ್ಟ್ ಆ್ಯಕ್ಷನ್' ಕಟ್ಟುವ ಕ್ರಿಯೆಯಾಗದೇ ಇರುವುದು ನಾಟಕದ ಸೋಲಲ್ಲ.

ರೈತಚಿಂತಕರಾಗಿ ಅಂತರರಾಷ್ಟ್ರೀಯ ಮನ್ನಣೆ ಗಳಿಸಿದರೂ ಕನ್ನಡಿಗರು ಅರಿಯದೇ ಹೋದ ಎಂ.ಡಿ. ಎನ್. ಕೂಡ ಗ್ರೀಕ್ ನಾಟಕಗಳ 'ಟ್ರ್ಯಾಜಿಕ್ ಹೀರೋ' ತರಹ. ಈ ದುರಂತಕ್ಕೆ ಪಾತ್ರಗಳು ಆರೋಪಿಸುವ ಅವರ 'ಸರ್ವಾಧಿಕಾರಿ' ಗುಣ ಕಾರಣವೇ? ದುರಂತ ನಾಯಕನಾಗಲು ಅದಷ್ಟೆ ಸಾಕೆ? ಈ ಕುರಿತ 'ಮೌನ' ನಾಯಕನಿಗೆ ಒಳತೋಟಿಯೇ ಇಲ್ಲದಂತೆ ಮಾಡುತ್ತದೆ.

ರೈತರಿಗೆ ಕೈದಿಗಳಂತೆ ಬಿಳಿ ಯುನಿಫಾರ್ಮ್ ಹಾಕಿಸಿರುವುದು ರಸಾಭಾಸ ಉಂಟುಮಾಡದೇ ಇರಲಾರದು. ಎಂ.ಡಿ. ಎನ್. ಪಾತ್ರದ ಕಾಸ್ಟ್ಯೂಮ್‌ಗೆ ಸಿಕ್ಕಿರುವ ಆದ್ಯತೆ-ಮನ್ನಣೆ ಉಳಿದ ಪಾತ್ರಗಳಿಗೆ ಸಿಕ್ಕಿಲ್ಲದೇ ಇರುವುದು ಕೊರತೆ. ಜೈಲಿನ ದೃಶ್ಯದಂತೆಯೇ ವಿಧಾನಸಭೆಯೂ ಸೇರಿದಂತೆ ಹಲವು ದೃಶ್ಯಗಳು ಕಾಣಿಸುವುದು ಒಳ್ಳೆಯದೇನಲ್ಲ. ಕತೆಯನ್ನು ನಾಟಕೀಯ ಬೆಳವಣಿಗೆಗಳ ಮೂಲಕ ಕಟ್ಟಿರುವುದು ಸಕಾರಾತ್ಮಕ ಅಂಶವಾದರೆ, ಅಲ್ಲಲ್ಲಿ ಸಿನಿಮೀಯಗೊಳಿಸಿರುವುದು ಮಿತಿ ಎಂದೇ ಹೇಳಬೇಕು. ಬೆಳಕಿನ ವಿನ್ಯಾಸ ಮಾಡಿದ ಮಂಜು ನಾರಾಯಣರ ಕೌಶಲ ಎದ್ದು ಕಾಣಿಸುತ್ತದೆ.

ನಾಟಕದಲ್ಲಿ ಸಾಹಿತ್ಯ ಕೃತಿಯು ರಂಗಕೃತಿಯಾಗಿ ಸಾಕಾರವಾಗುತ್ತದೆ. ಈ ಪ್ರಕ್ರಿಯೆಯು ನಾಟಕಕಾರ-ನಿರ್ದೇಶಕ- ಕಲಾವಿದ-ತಂತ್ರಜ್ಞರ ಪರಸ್ಪರ ಕೊಡುಕೊಳ್ಳುವಿಕೆಯ ಮೂಲಕ ಶ್ರೀಮಂತವಾಗುತ್ತ ಹೋಗುತ್ತದೆ. ಯಾವುದೇ ಹಂತದಲ್ಲಿ ಹದ ತಪ್ಪಿದರೂ ಅದು ಒಟ್ಟು ಪ್ರದರ್ಶನದ ಮೇಲೆ ಪರಿಣಾಮ ಬೀರುತ್ತದೆ.

'ಡೈರಕ್ಟ್ ಆ್ಯಕ್ಷನ್'ನಲ್ಲಿ ಪ್ರೇಕ್ಷಕರು- ಸಮಾಜ ಬಯಸುವ ಎಲ್ಲವೂ ಇದೆ. ಆದರೂ ನೋಡಿದ ನಂತರ ಸಮಾಧಾನ ಆಗದೇ ಇರಲು ಕಾರಣವೇನಿರಬಹುದು? ಹುಡುಕಾಟದ ಶ್ರದ್ಧೆಯ ಬಗ್ಗೆ ಅನುಮಾನಗಳೇನಿಲ್ಲ. ಆದರೆ ಅದು ರಂಗದ ಮೇಲೆ ವ್ಯಕ್ತವಾದಾಗ ಮಾತ್ರ ಪರಿಣಾಮಕಾರಿಯಾಗುತ್ತದೆ. ಅದಿರಲಿ 'ಅಪಾಯಕಾರಿ' ಕಾಲದಲ್ಲಿ ಸವಾಲಿನ ಕೆಲಸವನ್ನು ಕೈಗೆತ್ತಿಕೊಂಡ ಸಮತಾ ಚಿಂತನದ ಗೆಳೆಯರು 'ನಗ್ನ ಥಿಯೇಟರ್'ನ ಮೂಲಕ ಅಸಾಧಾರಣ ಕೆಲಸ ಮಾಡಿದ್ದಾರೆ. ಒಡೆಯುವವರು ಇದ್ದೇ ಇರುತ್ತಾರೆ 'ಕಟ್ಟುವ ಕೆಲಸ ಮಾಡಬೇಕು' ಎನ್ನುವ ಸಂದೇಶ ಸ್ಪಷ್ಟವಾಗಿದೆ. ಕೈಗೆ ಸಿಕ್ಕರೂ ಸಿಗದಂತೆ ಭಾಸವಾಗುವ ವರ್ತಮಾನವನ್ನು ಕತೆಯಾಗಿಸುವ, ಕೃತಿಯಾಗಿಸುವ ಅಪರೂಪದ -ಮಹತ್ವದ ಪ್ರಯತ್ನವನ್ನು 'ಡೈರೆಕ್ಟ್ ಆ್ಯಕ್ಷನ್' ಮಾಡಿದೆ.

ಬ್ರೂಮ್... ಬ್ರೂಮ್...

10ನೇ ಪುಟದಿಂದ...

ಈಗ ದುಡ್ಡು ಚೆಲ್ಲಿದರೆ ಎಲ್ಲವೂ ಮನೆ ಬಾಗಿಲಿಗೆ ಬಂದು ಬೀಳುತ್ತದೆ. ಬೈಕ್‌ಗಳಲ್ಲೂ ಹತ್ತಾರು ಆಯ್ಕೆಗಳಿವೆ. ಕೆಟಿಎಂ ಎಡಿವಿ, ಎಕ್ಸ್‌ಪಲ್ಸ್, ಹಿಮಾಲಯನ್, ವಿಸ್ಟಾರ್ಮ್, ಟ್ರಯಂಪ್ 440, ಅಪಾಚೆ, ಡಾಮಿನಾರ್... ದಿನಗಟ್ಟಲೆ ರೈಡಿಂಗ್‌ಗೆ ಬೇಕಾದಂತಹ ಎಲ್ಲವನ್ನೂ ಒಳಗೊಂಡ ಬೈಕ್‌ಗಳು ಸಂಪೂರ್ಣ ಸಿದ್ಧವಾಗಿಯೇ ಸಿಗುತ್ತವೆ. ಹೊಸ ವ್ಯಾಖ್ಯಾನದ ಬೈಕಿಂಗ್‌ನ ಮೂಲ ಮಂತ್ರಗಳು ವೇಗ ಮತ್ತು ವೇಗ. ಅವುಗಳೊಟ್ಟಿಗೆ ವ್ಲಾಗಿಂಗ್.

ಪ್ಯಾಂಗಾಂಗ್ ಸರೋವರದಲ್ಲಿ 'ಚಾರಣ-ಸುತ್ತಾಟ' ತಂಡ

ವ್ಲಾಗಿಂಗ್ ತಂದ ಬದಲಾವಣೆ: 'ಬೈಕಿಂಗ್ ಸಂಸ್ಕೃತಿಯನ್ನೇ ವ್ಲಾಗಿಂಗ್ ಹಾಳು ಮಾಡಿದೆ. ಮೊದಲೆಲ್ಲಾ ರಸ್ತೆ, ಪ್ರಕೃತಿ ಎಲ್ಲವನ್ನೂ ಸವಿಯುವುದು ಬೈಕಿಂಗ್ ಆಗಿತ್ತು. ಈಗ ಎಲ್ಲೆಡೆ ನಿಂತು ವಿಡಿಯೊ ಮತ್ತು ಚಿತ್ರ ತೆಗೆದುಕೊಳ್ಳುವುದೇ ಬೈಕಿಂಗ್ ಆಗಿದೆ. ಈಶಾನ್ಯ ಭಾರತಕ್ಕೆ ಬೈಕಿಂಗ್ ಹೋಗುವವರೆಲ್ಲಾ ಭೂತಾನ್‌ಗೆ ಭೇಟಿ ನೀಡುವುದು ಆ ಬೈಕಿಂಗ್‌ನ ಒಂದು ಭಾಗವಾಗಿತ್ತು. ಅಲ್ಲಿ ಭಾರತೀಯರಿಗೆ ಮೊದಲು ಉಚಿತ ಪ್ರವೇಶವಿತ್ತು. ಒಂದು ಬೈಕ್‌ಗೆ 50 ರೂಪಾಯಿ ಎಂಟ್ರಿ ಫೀ ಕೊಡಬೇಕಿತ್ತಷ್ಟೆ. ಬೈಕಿಂಗ್ ವ್ಲಾಗಿಂಗ್ ಮಾಡುವವರು, ಕಂಡಕಂಡವರೆಲ್ಲಾ ಭೂತಾನ್‌ಗೆ ಹೋಗುವುದು ಹೆಚ್ಚಾಯಿತು. ಭಾರತೀಯ ಬೈಕರ್‌ಗಳ ಸಂಖ್ಯೆ ಇಳಿಸಬೇಕೆಂದೇ ಭೂತಾನ್ ಸರ್ಕಾರ ಈಗ ಒಬ್ಬ ಬೈಕರ್‌ಗೆ ದಿನವೊಂದಕ್ಕೆ 1,500 ರೂಪಾಯಿ ಮತ್ತು ಬೈಕ್ ಒಂದಕ್ಕೆ 4,500 ಶುಲ್ಕ ಹಾಕಿದ್ದಾರೆ' ಎನ್ನುತ್ತಾರೆ ಚಾರಣ-ಸುತ್ತಾಟ ತಂಡದ ಪುಟ್ಟಹೊನ್ನೇಗೌಡ.

ಎಲ್ಲಿಗೆ ಪಯಣ... ಯಾವುದು ದಾರಿ: ಬೆಂಗಳೂರಿನಿಂದ ಮಂಗಳೂರು ಮೂಲಕ ಅರಬ್ಬಿಯ ಅಂಚಿನಲ್ಲೇ ಮೈನ್‌ಲ್ಯಾಂಡ್ ಭಾರತದ ದಕ್ಷಿಣದ ತುದಿ ಕನ್ಯಾಕುಮಾರಿ ಮುಟ್ಟುವುದು ಹಾರ್ಡ್‌ಕೋರ್ ಬೈಕರ್‌ಗಳ ಮೆಟ್ರಿಕ್ ಶಾಲೆಯ ಹಂತವಿದ್ದಂತೆ. ಅಲ್ಲಿಂದ ಬಂಗಾಳಕೊಲ್ಲಿಯ ಬಿಸಿಗಾಳಿಗೆ ಮೈಯೊಡ್ಡಿ ಪುದುಚೇರಿಗೆ ಹೋಗಬೇಕು. ಮೂರೂವರೆ ಸಾವಿರ ಅಡಿಯಿಂದ ಸಮುದ್ರಮಟ್ಟಕ್ಕೆ ಇಳಿದು ಎರಡು ಸಾಗರ, ಒಂದು ಮಹಾಸಾಗರದ ನೀರು ಮುಟ್ಟಿ, ಐವತ್ತಾರು ಜಿಲ್ಲೆಗಳನ್ನು ದಾಟಿ ಮತ್ತೆ ಮೂರೂವರೆ ಸಾವಿರ ಅಡಿ ಎತ್ತರಕ್ಕೆ ಏರುವುದಿದೆಯಲ್ಲ; ಬೈಕರ್‌ನ ತಾಳ್ಮೆ, ಶಕ್ತಿ, ನಿಗ್ರಹ, ಜೇಬು ಎಲ್ಲವನ್ನೂ ನಿಕಷಕ್ಕೆ ಒಡ್ಡುವ ಪಯಣವದು. ಇಲ್ಲಿ ತೇರ್ಗಡೆಯಾದರೆ ಪ್ರತಿಯೊಬ್ಬ ಬೈಕರ್ ಕನಸು ಕಾಣುವುದು ಉತ್ತರದ ತುದಿಯತ್ತ: ಲಡಾಖ್. 'ನಾನಂತೂ ಒಬ್ಬಳೇ ಬೈಕ್ ಏರಿ ಈ ಪ್ರಯಾಣವನ್ನು ಮುಗಿಸಿದೆ. ಆನಂತರವೇ ಲಡಾಖ್‌ಗೆ ಬೈಕಿಂಗ್ ಮಾಡಬಹುದು ಎಂಬ ಕಾನ್ಫಿಡೆನ್ಸ್ ನನಗೆ ಬಂದಿದ್ದು' ಎನ್ನುತ್ತಾರೆ ಈ ತಲೆಮಾರಿನ ಬೈಕರ್ ನೀಲು. ಈ ದಕ್ಷಿಣ ಪರ್ಯಟನೆ ಮುಗಿಸಿದರೆ ಉತ್ತರದ ಪರ್ಯಟನೆಗೆ ಬೈಕರ್ ಸಿದ್ಧ ಎಂದರ್ಥ. ಈಗ ಇದಕ್ಕೊಂದು ಶಾರ್ಟ್‌ಕಟ್ ಇದೆ. ಇಲ್ಲಿಂದ ದೆಹಲಿ/ಚಂಡೀಗಢಕ್ಕೆ ರೈಲಿನಲ್ಲಿ ಬೈಕ್ ಪಾರ್ಸಲ್ ಮಾಡುವುದು. ಅಲ್ಲಿಂದ ಬೈಕ್‌ನಲ್ಲಿ ಕಾಶ್ಮೀರ, ಲಡಾಖ್, ಕುಲು-ಮನಾಲಿ ಹಾದು ಹಿಮಾಲಯ ಇಳಿಯುವುದು. ಮತ್ತೆ ರೈಲಿನಲ್ಲಿ ಬೈಕ್ ಪಾರ್ಸಲ್ ಮಾಡುವುದು. ಹಾರ್ಡ್‌ಕೋರ್ ಬೈಕರ್‌ನ ಅಂತಿಮ ಕನಸು ಲಡಾಖ್. ದಕ್ಷಿಣದಿಂದ ಎರಡು ಸಾವಿರ ಮೈಲು ದೂರವನ್ನು ಸಪಾಟು ಹೆದ್ದಾರಿಗಳಲ್ಲಿ ಸವೆಸಿ ಹಿಮಾಲಯದ ತಪ್ಪಲು ಸೇರಬೇಕು. ಹಿಂಡಿಹಿಪ್ಪೆಯಾದ ಜೀವಕ್ಕೆ ಚೈತನ್ಯ ತುಂಬುವ ಗಿರಿಪರ್ವತಸಾಲುಗಳು ಕೈಬೀಸಿ ಕರೆಯುತ್ತವೆ. ಆಮ್ಲಜನಕ ಕಡಿಮೆ ಇರುವ ಗಾಳಿಯನ್ನು ಉಸಿರಾಡಿ, ಮೂಳೆ ಕೊರೆಯುವ ಚಳಿ ತಾಳಿಕೊಂಡು, ಮಂಜುಗಟ್ಟಿದ ನದಿ-ಹೊಳೆಗಳಲ್ಲಿ ಜಾರಿ ಬೀಳದೆ ಹಿಮಾಲಯ ಇಳಿಯುವುದಿದೆಯಲ್ಲಾ... ದೇಹವೆಲ್ಲಾ ನುಜ್ಜುಗುಜ್ಜಾಗಿರುತ್ತದೆ. ಅಂತಹದ್ದೊಂದು ಸುಖಯಾತನೆಯಲ್ಲಿ ಮತ್ತೆ ಎರಡು ಸಾವಿರ ಮೈಲು ದಕ್ಷಿಣದ ಪಯಣ. ಪ್ರಕೃತಿಯ ಆಹ್ವಾನಕ್ಕೆ ಓಗೊಟ್ಟು ಈ ತಪಸ್ಸು ಕೈಗೊಳ್ಳುವ ಬೈಕರ್‌ಗಳು ಈಗಲೂ ಇದ್ದಾರೆ.

ಮುನ್ನೋಟ 24-12-2023 ರಿಂದ -30-12-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಬೇರೆಯವರು ನಿಮಗೆ ಗೌರವ ಕೊಡಬೇಕೆಂದು ಬಹಳ ನಿರೀಕ್ಷೆ ಮಾಡುವಿರಿ. ಒಳ್ಳೆಯ ಮಾತುಗಳನ್ನು ಆಡಿದರೂ ಅದರಲ್ಲಿನ ಕೆಲವು ವ್ಯಂಗ್ಯಗಳು ಬೇರೆಯವರಿಗೆ ಗಾಸಿಮಾಡುವುದು. ನಿಮ್ಮೆಲ್ಲ ಕೆಲಸಗಳಿಗೆ ಹಿರಿಯರು ಸಹಕಾರ ಕೊಡುವರು. ಸಂಸಾರದಲ್ಲಿ ಸಂತೋಷದ ವಾತಾವರಣವಿರುತ್ತದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಸಾಕಷ್ಟು ಯಶಸ್ಸು ಸಿಗುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಸಣ್ಣಪುಟ್ಟ ಮಾತುಗಳು ಕಾವೇರಿದ ವಾತಾವರಣವನ್ನು ಸೃಷ್ಟಿಸಬಹುದು. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಸ್ವಲ್ಪ ಹಿನ್ನಡೆ ಇರುತ್ತದೆ. ಮೂತ್ರ ಸಂಬಂಧಿತ ಕಾಯಿಲೆಗಳು ಅಥವಾ ಗುಪ್ತಾಂಗಕ್ಕೆ ಸಂಬಂಧಿಸಿದ ಕಾಯಿಲೆಗಳಿರುವವರು ಹೆಚ್ಚು ಎಚ್ಚರವಹಿಸಿ. ಸಂಗಾತಿಯ ಮಾತುಗಳು ಬಹಳ ಕಠಿಣವಾಗಿರುತ್ತದೆ. ಹಿರಿಯರ ಮಾರ್ಗವನ್ನು ಅನುಸರಿಸಿ ಅವರ ಹೆಸರಿಗೆ ಕೀರ್ತಿತರುವ ಯೋಗವಿದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ನಿಮ್ಮ ವ್ಯಾಪಾರದ ಬಗ್ಗೆ ನಿಮಗೆ ನಂಬಿಕೆ ಇರುತ್ತದೆ. ಹಣದ ಒಳಹರಿವು ಮಂದಗತಿಯಲ್ಲಿದ್ದು ಖರ್ಚು ಹೆಚ್ಚಾಗುವ ಸಂದರ್ಭವಿದೆ. ಆಸ್ತಿ ಕೊಳ್ಳುವ ಯೋಗವಿದ್ದರೂ ದಾಖಲೆಗಳನ್ನು ಪರಿಶೀಲಿಸಿರಿ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ. ಮಹಿಳೆಯರಿಗೆ ಹೆಚ್ಚು ಅಭಿವೃದ್ಧಿ ಇರುತ್ತದೆ. ಸಾಹಸ ಕಲಾವಿದರು ಸಾಹಸ ಮಾಡುವಾಗ ಹೆಚ್ಚು ಎಚ್ಚರ ವಹಿಸಿ, ಅಪಘಾತಗಳಾಗುವ ಸಂದರ್ಭಗಳಿವೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ನಿಮ್ಮ ಮನಸ್ಸಿನ ನಿಯಂತ್ರಣ ಹಾಗೂ ಚೇತನ ಎರಡೂ ನಿಮ್ಮ ಕೈಯಲ್ಲಿ ಇರುತ್ತದೆ. ಹಣದ ಒಳಹರಿವು ಸಾಮಾನ್ಯಗತಿಯಲ್ಲಿರುತ್ತದೆ. ವ್ಯಾಪಾರ ವ್ಯವಹಾರಗಳಲ್ಲಿ ಮಂದಗತಿಯ ಲಾಭವಿರುತ್ತದೆ. ಸರ್ಕಾರಿ ವ್ಯವಹಾರಗಳಲ್ಲಿ ಲಾಭ ಕಡಿಮೆ ಇರುತ್ತದೆ. ಸ್ವಲ್ಪ ಆಲಸೀ ನಡವಳಿಕೆ ನಿಮ್ಮಲ್ಲಿ ಮೈದುಂಬಿರುತ್ತದೆ. ಭೂಮಿ ವ್ಯವಹಾರ ಮಾಡುವವರಿಗೆ ಲಾಭವಿರುತ್ತದೆ. ಕ್ರೀಡಾಪಟುಗಳಿಗೆ ಹೆಚ್ಚಿನ ಯಶಸ್ಸು ಇರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಮಾತನಾಡುವಾಗ ಅದರ ಮಹತ್ವ ಅರಿತು ಮಾತನಾಡಿರಿ. ಸಹೋದರಿಯರಿಂದ ನಿಮಗೆ ಬಹಳ ಸಹಕಾರವಿರುತ್ತದೆ. ಕೃಷಿ ಭೂಮಿಯನ್ನು ಈಗ ಕೊಳ್ಳುವ ಯೋಗವಿದೆ. ವಿದ್ಯಾರ್ಥಿಗಳಿಗೆ ಈಗ ಹೆಚ್ಚಿನ ಯಶಸ್ಸು ಇರುತ್ತದೆ. ಗಣಿತ ವಿದ್ಯಾರ್ಥಿಗಳಿಗೆ ನಿರೀಕ್ಷೆಗೆ ಮೀರಿದ ಯಶಸ್ಸು ಇರುತ್ತದೆ. ಸಂಗಾತಿಯ ಜೊತೆ ಕಾವೇರಿದ ವಾತಾವರಣವಿದ್ದರೂ ನಂತರ ಸರಿಯಾಗುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ನಿಮ್ಮ ವರ್ತನೆಯಲ್ಲಿ ಸಾಕಷ್ಟು ದುರಹಂಕಾರವಿರುತ್ತದೆ. ಹಣದ ಒಳಹರಿವು ನಿಮ್ಮ ಅಗತ್ಯವನ್ನು ಪೂರೈಸುವ ಹತ್ತಿರಕ್ಕೆ ಬರುತ್ತದೆ. ನಿಮ್ಮ ವೈಯಕ್ತಿಕ ಕೆಲಸಗಳಿಗೆ ಗಮನ ಕೊಡುವಿರಿ. ಆಸ್ತಿ ವ್ಯವಹಾರ ಮಾಡುವವರಿಗೆ ಲಾಭವಿದೆ. ಸರ್ಕಾರಕ್ಕೆ ಜಮೀನು ಖರೀದಿ ಮಾಡಿ ಕೊಡುವವರಿಗೆ ಹೆಚ್ಚಿನ ಹಣ ದೊರೆಯುತ್ತದೆ. ಮಕ್ಕಳ ಏಳಿಗೆಯಲ್ಲಿ ನಿಧಾನಗತಿಯನ್ನು ಕಾಣಬಹುದು. ಅಜೀರ್ಣ ನಿಮ್ಮನ್ನು ಬಾಧಿಸಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಅಲಂಕಾರಕ್ಕೆ ಹೆಚ್ಚು ಪ್ರಾಮುಖ್ಯ ಕೊಡುವಿರಿ. ಮಾತಿನಲ್ಲಿ ಒರಟುತನ ಬೇಡ. ಎಲ್ಲರನ್ನೂ ಆಕರ್ಷಿಸಲು ಪ್ರಯತ್ನಪಡುವಿರಿ. ನಿಮ್ಮ ನಡವಳಿಕೆಯಲ್ಲಿ ದ್ವಂದ್ವವಿರುತ್ತದೆ. ಕೃಷಿಭೂಮಿಯನ್ನು ಕೊಳ್ಳಲು ಪ್ರಯತ್ನಪಡುವಿರಿ. ವಿದ್ಯಾರ್ಥಿಗಳಿಗೆ ಅಷ್ಟು ಯಶಸ್ವಿ ಇರುವುದಿಲ್ಲ. ಸಂತಾನ ಅಪೇಕ್ಷಿತರಿಗೆ ಸ್ವಲ್ಪ ಹಿನ್ನಡೆ ಇರುತ್ತದೆ. ಕೀಲು ನೋವು ಕೆಲವರನ್ನು ಕಾಡಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಕೃಷಿಕರಿಗೆ ಬಹಳ ಲಾಭವಿರುತ್ತದೆ. ಕ್ರೀಡಾಪಟುಗಳಿಗೆ ಸಿಗಬೇಕಾಗಿದ್ದ ಸೂಕ್ತ ಸೌಲಭ್ಯ ಮತ್ತು ಸಹಾಯಧನಗಳು ಸಿಗುತ್ತವೆ. ಸೈನ್ಯದಲ್ಲಿನ ಹಿರಿಯ ಅಧಿಕಾರಿಗಳಿಗೆ ಹೆಚ್ಚಿನ ಸ್ಥಾನ ಸಿಗುತ್ತದೆ. ಕೃಷಿಭೂಮಿಯನ್ನು ವಿಸ್ತರಣೆ ಮಾಡುವಿರಿ. ವಿದೇಶದಲ್ಲಿ ಓದಬೇಕೆನ್ನುವವರಿಗೆ ಸೂಕ್ತ ಮಾರ್ಗಗಳು ತೆರೆಯುತ್ತವೆ. ಸರ್ಕಾರಿ ಕೆಲಸದಲ್ಲಿರುವವರಿಗೆ ಆದಾಯ ಹೆಚ್ಚುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಸಮಾಜದಲ್ಲಿ ಕೀರ್ತಿ, ಗೌರವಗಳು ಹೆಚ್ಚಾಗುತ್ತವೆ. ಸಂಗೀತಗಾರರಿಗೆ, ಲಲಿತ ಕಲೆಯನ್ನು ಅಭ್ಯಾಸ ಮಾಡುವವರಿಗೆ ಹೆಚ್ಚಿನ ಯಶಸ್ಸು ದೊರೆಯುತ್ತದೆ. ನವೀನ ರೀತಿಯ ಕೃಷಿಯಲ್ಲಿ ಹೆಚ್ಚು ಆಸಕ್ತಿ ತಾಳುವಿರಿ. ಭೂಮಿ ವ್ಯವಹಾರಗಳಲ್ಲಿ ಸಾಕಷ್ಟು ಎಚ್ಚರದಿಂದಿರಿ. ವಿದ್ಯಾರ್ಥಿಗಳಿಗೆ ಅತಿ ಹೆಚ್ಚಿನ ಯಶಸ್ಸು ದೊರೆಯುತ್ತದೆ. ಹಿರಿಯರಿಂದ ನಿಮಗೆ ಉತ್ತಮ ಮನ್ನಣೆ ದೊರೆಯುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಸ್ಥಿರ ಮನಸಿನಿಂದ ಕೆಲಸ ಮಾಡುವಿರಿ. ಹಣದ ಒಳಹರಿವು ಸಾಮಾನ್ಯ ಗತಿಯಲ್ಲಿರುತ್ತದೆ. ವಿಭಿನ್ನ ನಡವಳಿಕೆಗಳಿಂದ ಶತ್ರುಗಳನ್ನು ದಿಕ್ಕು ತಪ್ಪಿಸುವಿರಿ. ಆಸ್ತಿ ಖರೀದಿಯನ್ನು ಈಗ ಮಾಡಬಹುದು. ವಿದ್ಯಾರ್ಥಿಗಳಿಗೆ ಅವರ ಶ್ರಮಕ್ಕೆ ತಕ್ಕ ಫಲ ಸಿಗುತ್ತದೆ. ಸಂಗಾತಿಯು ನೆರಳಿನಂತೆ ನಿಮ್ಮನ್ನು ಹಿಂಬಾಲಿಸುವರು. ಧಾರ್ಮಿಕ ಕಾರ್ಯಗಳನ್ನು ಮಾಡುವವರಿಗೆ ಹೆಚ್ಚಿನ ಲಾಭವಿರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಜನ ಮೆಚ್ಚುವ ನಿರ್ಧಾರಗಳನ್ನು ತೆಗೆದುಕೊಂಡು ಕೆಲಸ ಮಾಡುವಿರಿ. ಹಿರಿಯರು ತಮ್ಮ ನಡವಳಿಕೆಗಳಿಂದ ಸಮಾಜವನ್ನು ತಿದ್ದುವರು. ಪಿತ್ರಾರ್ಜಿತ ಆಸ್ತಿಗಳು ಸಿಗುವ ಸಂದರ್ಭವಿದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಯಶಸ್ಸು ಇದ್ದೇ ಇರುತ್ತದೆ. ತಾಯಿಯ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಿರಿ. ಸಂಗಾತಿಯು ನಡೆಸುವ ವ್ಯವಹಾರಗಳಲ್ಲಿ ಹೆಚ್ಚಿನ ಲಾಭವಿರುತ್ತದೆ. ವೃತ್ತಿಯಲ್ಲಿ ಸ್ಥಿರತೆಯನ್ನು ಕಾಣಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಸಾಕಷ್ಟು ಉಗ್ರತ್ವ ನಿಮ್ಮಲ್ಲಿ ಮನೆ ಮಾಡಿರುತ್ತದೆ. ಸಮಾಜದಿಂದ ಸೂಕ್ತ ಗೌರವ ದೊರೆಯದೆ ಬೇಸರವೆನಿಸುತ್ತದೆ. ವೃತ್ತಿಯಲ್ಲಿ ದ್ವಂದ್ವ ನಿರ್ಧಾರಗಳಿಂದ ತೊಂದರೆಗೆ ಸಿಲುಕುವಿರಿ. ಸಂಘ-ಸಂಸ್ಥೆಗಳ ಮೂಲಕ ಆಸ್ತಿ ಖರೀದಿಸಬಹುದು. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ. ಕಣ್ಣಿನ ತೊಂದರೆ ಇರುವವರು ಹೆಚ್ಚು ಎಚ್ಚರವಹಿಸಿರಿ. ತಂದೆಯ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ಇರಲಿ.

ಪದಬಂಧ 2821



ಮೇಲಿನಿಂದ ಕೆಳಕ್ಕೆ

1. ಬದುಕಿನ ಒಂದು ಭಾಗದ ವೆಚ್ಚಕ್ಕೆ ಕೊಡುವ ಹಣ 4
2. ಸಂತೋಷ ನೀಡಲು ಹಾರಿ ಬರುವ ಬಹುಮಾನ 5
4. ನೀರು ಹರಿವ ಹಳ್ಳದ ಕಡೆ ಹೋಗುವ ನಡಿಗೆಯ ರಸ್ತೆ 5
5. ಉತ್ತರಕರ್ನಾಟಕದ ಪ್ರಿಯಕರ 4
8. ಸಂಗೀತ ಕಚೇರಿಯಲ್ಲಿ ಕಾಲ ನಿರೂಪಕ ತನಿ 5
10. ಓಬವ್ವಳಂತಹ ಸಾಹಸಿ ಹೆಣ್ಣು 5
12. ನೌಕೆ ನಡೆಸುವ ಅಂಬಿಗ 3
13. ಸಾಧಿಸಲು ಹೊರಟ ಹೆಣ್ಣು 3
17. ಅಲೌಕಿಕದಲ್ಲೂ ಹಣದ ವ್ಯವಸ್ಥೆ ಸೇರಿದೆ 5
19. ಕಲ್ಪನೆಯ ಸ್ವರೂಪ ನಿಜ ರೂಪ ತಳೆದಂತೆ ಕಾಣುತ್ತಿದೆ 5
20. ಚಳಿಗೆ ಪೊಂಗಲ್ ಪ್ರಸಾದ ಸಿಗುವ ತಿಂಗಳು 4
22. ಪ್ರವಾಹ ಪರಿಹಾರಕ್ಕಾಗಿ ಕಟ್ಟಬೇಕಾದ ತೆರಿಗೆ 4

ಎಡದಿಂದ ಬಲಕ್ಕೆ

1. ಅಡಿಯಲ್ಲಿ ಪಾಯ ಇರುವ ಬದುಕಿನ ದುಡಿತ 5
3. ನಭದಲ್ಲಿ ಹರಿವ ನಕ್ಷತ್ರದ ಬೆಳಕಿನ ಪ್ರವಾಹ 5
6. ತಿಮ್ಮಪ್ಪನಿಗೆ ತೊಡಿಸುವ ದೊಡ್ಡ ಹಾರದ ಕೈಂಕರ್ಯ 5
7. ನೂರು ವಸಂತಗಳ ಆಯುಸ್ಸು 4
9. ಕೊಡುಗೆಗೆ ಹೆಸರಾದ ಪರಾಕ್ರಮಿ 4
11. ಸ್ವರ್ಗವೇ ಆಚೆ-ಈಚೆಯಾಗಿದೆ 2
13. ತಪ್ಪೊಪ್ಪಿಕೊಳ್ಳಲು ಆಂಗ್ಲ ಪದ 2
14. ಹಿಂದುಮುಂದಾದ ಸಪ್ತಾಹ 2
15. ಒಂದು ರೀತಿ ಬಗೆ ಬಗೆ 3
16. ಸುಸಂಸ್ಕೃತ ಬ್ರಹ್ಮಚಾರಿ ಬಾಲಕ 2
17. ಬೆಲ್ಲ ಕಾಯಿಸಿದಾಗ ಬರುವ ಹದ 2
19. ಅಮೆರಿಕೆಯ ಬಾಹ್ಯಾಕಾಶ ಕೇಂದ್ರ 2
20. ಐಶ್ವರ್ಯದ ಕೈ ಹೀಗೆ ಹಣ ಉತ್ಪತ್ತಿ ಮಾಡುತ್ತೆ 4
21. ಪೈರಿನ ಕೊನೆಯಲ್ಲಿ ತೊನೆಯುವ ಧಾನ್ಯದ ಗೊಂಚಲು 4
23. ಚೈತ್ರದ ಕೋಗಿಲೆಯ ಹಾಡಿಗೆ ಸಾಕ್ಷಿಯಾಗುವ ವೃಕ್ಷ 5
24. ನಿಜವಾದ ಈಶ್ವರನೇ ಇವನು? 5
25. ಉತ್ತೇಜಿಸಿ ಪ್ರೇರಣೆ ಕೊಡುವಂತಹದ್ದು 5

ಪದಬಂಧ ಉತ್ತರ -2820

ಮೇಲಿಂದ ಕೆಳಕ್ಕೆ

1.ಅಂಜಲಿ 2.ಕಡಲತೀರ 3. ತರುಕಾನನ 4.ಹವನ 6.ಅಂದಗಾತಿ 8.ಬಿಲಹರಿ 9.ನರಿ 10.ಜನುಮ 12.ಜೋಕುಮಾರ 13.ಧಮ 14.ತ್ರಿವಿಕ್ರಮ 15.ಪ್ರೇರಕಶಕ್ತಿ 16.ಚಂದನವನ 18.ದಳವಿ 20.ಸಂಸಾರಿ

ಎಡದಿಂದ ಬಲಕ್ಕೆ

1. ಅಂತಕ 3.ತರಹ 5.ಡಮರು 6.ಅಂಗುಲಿಮಾಲ 7. ಕಾಮನಬಿಲ್ಲು 9.ನಗರಜನ 11. ತಿಜೋರಿ 13. ಧರಿತ್ರಿ 15. ಪ್ರೇಮಚಂದ್ರಮ 19.ನದಿಸಂಗಮ 21.ಶನೇವ 22.ವಿರಕ್ತಿ 23.ನರ್ಸರಿ

ಅಪ್ರಜ್ಞಾಪೂರ್ವಕ ಪರಿಣಾಮದ ಅಚ್ಚರಿ

ಲಕ್ಷೀಶ ತೋಳ್ಪಾಡಿ

‘ಮಹಾಭಾರತ ಅನುಸಂಧಾನ ಭಾರತಯಾತ್ರೆ’ ಕೃತಿಗೆ ಲಕ್ಷ್ಮೀಶ ತೋಳ್ಪಾಡಿ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ 2023ನೇ ಸಾಲಿನ ಪ್ರಶಸ್ತಿ ಸಂದಿದೆ. ಈ ಸಂದರ್ಭದಲ್ಲಿ ಅವರು ಮಹಾಭಾರತ ಹಾಗೂ ಸಮಕಾಲೀನ ಸಂದರ್ಭವನ್ನು ಮುಖಾಮುಖಿಯಾಗಿಸಿ ತಮ್ಮ ಚಿಂತನೆಯನ್ನು ಹಂಚಿಕೊಂಡಿದ್ದಾರೆ.

ಸಂದರ್ಶನ: ಎಸ್. ಸೂರ್ಯಪ್ರಕಾಶ ಪಂಡಿತ್

ದರ್ಶನ

• ಮಹಾಭಾರತವನ್ನು ಕುರಿತ ನಿಮ್ಮ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದಿದೆ. ಮಹಾಭಾರತದ ಸಾರ್ವಕಾಲಿಕ ಮೌಲ್ಯಗಳನ್ನು ಈಗಿನ ಸಂದರ್ಭಕ್ಕೆ ಹೇಗೆ ಒಗ್ಗಿಸಬಹುದು ಎನ್ನುವುದನ್ನು ನೀವು ಅಭಿವ್ಯಕ್ತಿಸಿದ್ದೀರಿ. ಅದು ಸಾಧ್ಯವಾದುದು ಹೇಗೆ?

ಮಹಾಭಾರತ ಓದಿದವರು, ಓದದವರು ಎನ್ನುವ ವಿಚಾರ ಹಾಗಿರಲಿ. ನಮ್ಮ ಹಳ್ಳಿಯ ಪಕ್ಕದ ಹಳ್ಳಿಯಲ್ಲಿ ಒಂದು ಕೆರೆ ಇದೆ. ಅದಕ್ಕೆ ಪಾಂಡವರ ಕೆರೆ ಎಂದು ಹೆಸರು. ದ್ರೌಪದಿ ಅದರಲ್ಲಿ ಸ್ನಾನ ಮಾಡಿ ಬಟ್ಟೆ ಒಣಗಿಸುತ್ತಿದ್ದಳು ಎನ್ನುವುದು ಪ್ರತೀತಿ. ಕೆರೆಯ ಬಳಿ ಒಂದು ಶಿಲೆ ಇದೆ. ಅದರ ಮೇಲೆ ಅವಳು ಬಟ್ಟೆ ಒಣಗಿಸುತ್ತಿದ್ದಳು ಎನ್ನುತ್ತಾರೆ. ಇಂತಹ ಸಾವಿರ ಪ್ರತೀತಿಗಳು ಎಲ್ಲ ಕಡೆಯೂ ಇವೆ. ಇದರರ್ಥ ಜನರ ಮೇಲೆ ರಾಮಾಯಣ–ಮಹಾಭಾರತಗಳು ಆಳವಾದ ಪ್ರಭಾವವನ್ನು ಬೀರಿವೆ. ನಾನು ಒಂದು ಕಡೆ ಬರೆದಿದ್ದೆ- ನಮ್ಮ ಊರಿನ ಕಲ್ಲಿನ ಮೇಲೆ ದ್ರೌಪದಿ ಒಣಗಿಸಿದ ಸೀರೆಯನ್ನು ಯಾವ ದುಶ್ಯಾಸನನೂ ಸೆಳೆಯಲು ಸಾಧ್ಯವಿಲ್ಲ- ಎಂದು. ಅಂದರೆ, ನಮ್ಮ ಸುಪ್ತ ಮನಸ್ಸಿನ ಮೇಲೆ ರಾಮಾಯಣ, ಮಹಾಭಾರತ ಮಹಾಕಾವ್ಯಗಳು ಬಹಳ ತೀವ್ರವಾದ ಪ್ರಭಾವ ಬೀರಿವೆ. ಇದು ನನಗೆ ಆಶ್ಚರ್ಯ ಮತ್ತು ಆಕರ್ಷಣೆ. ನಾವು ಪ್ರಜ್ಞಾಪೂರ್ವಕವಾಗಿ ಬದುಕಬೇಕು ಎನ್ನುತ್ತೇವೆ. ಆದರೆ, ಅಪ್ರಜ್ಞಾಪೂರ್ವಕವಾದ ಪ್ರಭಾವ ನಮ್ಮಲ್ಲಿ ಆಳವಾಗಿರುತ್ತದೆ. ನಮ್ಮ ಸುಪ್ತಪ್ರಜ್ಞೆಯನ್ನು ಪ್ರಭಾವಿಸತಕ್ಕ ದ್ರವ್ಯವನ್ನು ಮಹಾಭಾರತವು ಹೊಂದಿದೆ. ಯಾವುದೋ ಒಂದು ಅಧ್ಯಯನ ನಮಗೇ ಗೊತ್ತಿಲ್ಲದೆ ಸ್ವಾಧ್ಯಾಯವಾಗುತ್ತದೆ. ಸ್ವಾಧ್ಯಾಯ–ತಪಸ್ಸುಗಳು ಭಾರತೀಯ ಸಂಸ್ಕೃತಿಯಲ್ಲಿ ಬಹಳ ಮುಖ್ಯವಾದಂಥವು. ಈ ದೃಷ್ಟಿಯಿಂದ ನಾನು ಮಹಾಭಾರತವನ್ನು ಅನುಸಂಧಾನ ಮಾಡುತ್ತಾ ಹೋದೆ. ಹೀಗಾಗಿ ನನಗೆ ಕಥೆ ಹೇಳುವುದಕ್ಕಿಂತಲೂ ಶೋಧನೆ ಮುಖ್ಯವಾಯಿತು. ಅದಕ್ಕೆ ಬೇಕಾದ ಅನೇಕ ಪರಿಕರಗಳನ್ನು ಇಟ್ಟುಕೊಂಡು ಆಲೋಚಿಸಿದೆನಷ್ಟೆ. ಈ ಅನುಸಂಧಾನದಲ್ಲಿ ಪಾತ್ರಗಳು ಮುಖ್ಯವೂ ಹೌದು, ಅಮುಖ್ಯವೂ ಹೌದು. ತೀವ್ರವಾದ ಶೋಧನೆ ಇಲ್ಲಿಯ ಪ್ರಧಾನ ಉದ್ದೇಶ. ಒಂದು ಕಾವ್ಯ ಎಲ್ಲರದ್ದೂ ಆಗದೆ ಯಾರದ್ದೂ ಆಗುವುದಿಲ್ಲ. ಒಂದರ ಒಳಗಿನ ಒಂದನ್ನು ಹುಡುಕುವುದನ್ನು ಮಹಾಭಾರತವೇ ನನಗೆ ಕಲಿಸಿತು. ಇದನ್ನು ಹದಿನೈದು ದಿನಕ್ಕೊಮ್ಮೆ ‘ಪ್ರಜಾವಾಣಿ’ ಪತ್ರಿಕೆಗೇ ಬರೆಯುತ್ತಿದ್ದೆ ಅಲ್ಲವೆ? ಆದರೆ ಆಗ ಬಹಳ ಒದ್ದಾಡುತ್ತಿದ್ದೆ. ಒಳ ಮನಸ್ಸಿನ ವಿಷಯವನ್ನು ಬರೆಯುವುದು ಕಷ್ಟ!

• ಆಧುನಿಕ ಕಾಲದಲ್ಲಿ ವಿಜ್ಞಾನ ಮಹಾಸಾಧನೆ ನಮ್ಮ ಮುಂದಿದೆ. ಕೃತಕ ಬುದ್ಧಿಮತ್ತೆಯಿಂದ ಏನಾಗುವುದೋ ಎಂಬ ಆತಂಕವೂ ಇದೆ. ಆದರೂ ಪ್ರಾಚೀನ ವಾಙ್ಮಯದ ಕುರಿತೂ ಹೆಚ್ಚಿನ ಒಲವು ಈಗ ಇದೆ. ನಿಮ್ಮ ಪ್ರಮುಖ ಕೃತಿಗಳೆಲ್ಲವೂ ಪ್ರಾಚೀನ ವಾಙ್ಮಯದ ಸುತ್ತಲೇ ಇವೆ. ಇದರ ಬಗ್ಗೆ ನಿಮಗೆ ಏನನ್ನಿಸುತ್ತದೆ?

ಮನುಷ್ಯ ಎಷ್ಟೇ ಆಧುನಿಕನಾದರೂ ಅಷ್ಟೇ ಪ್ರಾಚೀನ. ಭೂತಕಾಲದಿಂದ ಮನುಷ್ಯನಿಗೆ ಬಿಡುಗಡೆ ಸುಲಭವೋ? ಮನುಷ್ಯ ಪ್ರಾಚೀನನೂ ಹೌದು, ನವೀನನೂ ಹೌದು. ಪ್ರಾಚೀನ ವಾಙ್ಮಯದ ಒಲವು ಎಂಬುದು ಆಧುನಿಕತೆಯಿಂದಲೋ ಮತ್ತೊಂದರಿಂದಲೋ ಬಿಡಿಸಿಕೊಳ್ಳುವ ಪಲಾಯನವಾದವಲ್ಲ. ಉದಾಹರಣೆಗೆ ನೋಡಿ: ಭಗವದ್ಗೀತೆಯು ನಿನ್ನ ಕರ್ತವ್ಯವನ್ನು ನೀನು ಮಾಡು ಎಂದು ಹೇಳುತ್ತದೆ; ಪಲಾಯನ ಮಾಡಬೇಡ ಎನ್ನುತ್ತದೆ. ಪ್ರಾಚೀನ ವಾಙ್ಮಯದಲ್ಲಿ ಪ್ರಾಚೀನವೂ ನವೀನವೂ ಒಟ್ಟೊಟ್ಟಿಗೆ ಇರುತ್ತದೆ. ಉಪನಿಷತ್ತುಗಳು ತುಂಬಾ ಪ್ರಾಚೀನವಾದವು. ‘ಕಣ್ಣಿನ ಕಣ್ಣು’ ಎಂದು ಉಪನಿಷತ್ ಹೇಳುತ್ತದೆ. ‘ಸತ್ಯಸ್ಯ ಸತ್ಯಂ’ ಎನ್ನುತ್ತದೆ. ಕಣ್ಣು ಎನ್ನುವುದು ಇಂದ್ರಿಯವೇ ಹೌದು. ಆದರೆ, ನಮ್ಮ ಪ್ರಾಚೀನರು ಅಲ್ಲಿ ಹೇಳುತ್ತಿರುವುದು – ನಾವು ಇಂದ್ರಿಯಗಳಿಂದ ಮಾತ್ರವಷ್ಟೆ ಬದ್ಧರಾದವರಲ್ಲ; ಇಂದ್ರಿಯದ ಒಳಗಡೆ ಇನ್ನೊಂದು ಕೆಲಸ ಮಾಡುತ್ತಿದೆ. ಅದು ಇರುವುದರಿಂದಲೇ ನಮ್ಮ ಇಂದ್ರಿಯಗಳು ಕೆಲಸ ಮಾಡಲು ಸಾಧ್ಯವಾಗುತ್ತದೆ. ನಮಗೆ ಪ್ರಜ್ಞೆ, ಬೌದ್ಧಿಕತೆ ಇದೆ. ಅಂದಮೇಲೆ ಕೃತಕ ಬುದ್ಧಿಮತ್ತೆ ಬಂದದ್ದು ಎಲ್ಲಿಂದ? ನಮ್ಮಿಂದಲೇ ಅಲ್ಲವೇ?

• ಪ್ರಾಚೀನ ಗ್ರಂಥಗಳನ್ನು ನೇರವಾಗಿ ಅಧ್ಯಯನ ಮಾಡುವುದು ಈಗ ಕಷ್ಟ. ಹೀಗಿರುವಾಗ ಪ್ರಾಚೀನ ಗ್ರಂಥಗಳನ್ನು ಓದಲು ಸಿದ್ಧರಾಗುವುದಾದರೂ ಹೇಗೆ?

ಹೈಸ್ಕೂಲ್‌ನಲ್ಲಿ ನನಗೆ ಒಬ್ಬರು ಮೇಷ್ಟರಿದ್ದರು. ನಮ್ಮ ಪಠ್ಯದಲ್ಲಿ ಕುವೆಂಪು ಅವರ ಒಂದು ಅಧ್ಯಾಯ ಇತ್ತು. ಅದರಲ್ಲಿ ಒಂದು ಸಾಲು ಹೀಗಿತ್ತು-‘ಅಂಗಳದಲ್ಲಿ ಹಸುಳೆ ಬಿಸಿಲು ಆಡುತ್ತಿತ್ತು.’ ಮೇಷ್ಟರು ಓದಿ, ಪುಸ್ತಕ ಮಡಚಿಟ್ಟರು. ‘ಆಹಾ’ ಎಂದರು. ಇದು ನನ್ನ ಮನಸ್ಸನ್ನು ಮುಟ್ಟಿತು. ಉದ್ದೇಶಪೂರ್ವಕವಾಗಿ ಮುಟ್ಟಿದ್ದಲ್ಲ. ಕೇಳುತ್ತಾ ಕೇಳುತ್ತಾ ಆದದ್ದು. ಇದರಿಂದ ಕನ್ನಡದ ಮೇಲೆ ನನಗೆ ಪ್ರೀತಿ ಹುಟ್ಟಿತು. ಎಲ್ಲ ವಿಷಯಗಳಲ್ಲಿ ಹೀಗೆ ಪ್ರೀತಿ ಹುಟ್ಟುವಂಥದ್ದು ನಡೆದುಬಿಟ್ಟರೆ ನಮ್ಮ ಶಿಕ್ಷಣ ಪದ್ಧತಿಯೂ ಸೇರಿದಂತೆ ಎಲ್ಲವೂ ಸರಿಯಾಗುತ್ತದೆ. ಇಂಥ ಪ್ರೀತಿಯನ್ನು ಹುಟ್ಟಿಸದೆ ಸುಮ್ಮನೆ ಯಾವ ಸಿದ್ಧಾಂತವನ್ನು ಹೇಳಿದರೂ ಪರಿಣಾಮ ಆಗುವುದಿಲ್ಲ. ಜೀವಂತ ಮನಸ್ಸು ಜೀವಂತವಾಗಿರಲು ಹೇಗೆಲ್ಲ ಕೆಲಸ ಮಾಡುತ್ತದೆ ಎನ್ನುವುದಷ್ಟೆ ಮುಖ್ಯ. ಸುಲಭವಾದ ತೀರ್ಮಾನಗಳಲ್ಲಿ ಜೀವನ ಸಾಗಿಸುವುದು ವ್ಯಾವಹಾರಿಕತೆ. ಇದು ಕಪ್ಪು-ಬಿಳುಪು, ಎಡ-ಬಲ ಎನ್ನುತ್ತೇವಲ್ಲ, ಹಾಗೆ. ಯಾವುದೇ ಸಂಗತಿಯಲ್ಲೂ ಮನಸ್ಸು ಆಳಕ್ಕೆ ಇಳಿಯದೆ ಏನು ಫಲ? ತರ್ಕವನ್ನು ಮೀರಿ ಆಳಕ್ಕೆ ಇಳಿಯಬೇಕು. ಮನಸ್ಸು ಸೆರೆಮನೆಯಲ್ಲಿದೆ ಎಂದು ನಮಗೆ ಗೊತ್ತಾಗಬೇಕು. ಅದನ್ನು ಶಿಕ್ಷಣವೇ ಮಾಡಬೇಕು.

• ಈಗ ಮನುಷ್ಯನ ಬುದ್ಧಿ ಸಾಕಷ್ಟು ಬೆಳೆದಿದೆ. ಆದರೆ, ಹಿಂದಿನ ಕಾಲಕ್ಕೆ ಹೋಲಿಸಿದರೆ ಈಗಿನ ಯುದ್ಧಗಳೇ ಹೆಚ್ಚು ಅನಿಸುತ್ತದೆ. ಮಹಾಭಾರತದಲ್ಲೂ ಯುದ್ಧವಿತ್ತು. ಈ ಎರಡನ್ನೂ ಎದುರು ಬದಿರಲ್ಲಿ ಇಟ್ಟು ಏನು ಹೇಳಬಹುದು?

ಜಗತ್ತಿನಲ್ಲಿ ಎಲ್ಲೆಲ್ಲೂ ಈಗ ಗೆಲ್ಲಬೇಕು ಎಂಬ ಭಾವನೆ ಇದೆ. ಯಾರ ವಿರುದ್ಧ? ನಮ್ಮ ಶತ್ರುಗಳ ವಿರುದ್ಧ. ನಮ್ಮ ಶತ್ರುಗಳು ಎಂದು ಹೇಗೆ ಭಾವಿಸುತ್ತೀರಿ? ಅವರು ನಮ್ಮನ್ನ ಶತ್ರುಗಳು ಎಂದು ಭಾವಿಸಿರುವುದರಿಂದ. ಅವರು ನಮ್ಮನ್ನು ಹಾಗೆ ಭಾವಿಸುವುದನ್ನೇ ಸತ್ಯ ಎಂದೇಕೆ ಭಾವಿಸಬೇಕು? ಯಾಕೆ ಈ ಚಿತ್ರಣವನ್ನು ನಾವು ಬದಲಾಯಿಸಬಾರದು? ಬದಲಾಯಿಸಲು ಅವರು ಬಿಡೊಲ್ಲ, ಅದಕ್ಕೇ ಹೀಗೆ ಮಾಡುತ್ತೇವೆ ಎನ್ನುತ್ತೇವೆ. ಹೇಗಾದರೂ ಮಾಡಿ ಗೆಲ್ಲಬೇಕು ಎಂಬ ಪ್ರವೃತ್ತಿಯನ್ನು ನಿರಂತರವಾಗಿ ಚಿಕ್ಕಂದಿನಿಂದಲೇ ಪೋಷಿಸಲಾಗುತ್ತದೆ. ಜೀವನ ಮಾಡುವುದು ಎಂದರೆ ಹಠದಿಂದ ಬದುಕುವುದಾ? ನಾವು ಬದುಕಿರುವುದು ನಮ್ಮ ಅಹಂಕಾರದಿಂದಲ್ಲ ಎಂಬುದನ್ನು ಅರಿಯಬೇಕು. ಗಾಢನಿದ್ದೆಯಲ್ಲಿ ನಮಗೆ ಯಾವ ಅಹಂಕಾರವೂ ಇರುವುದಿಲ್ಲ; ಅದು ಶಾಂತಸ್ಥಿತಿ. ನಮ್ಮ ಎಲ್ಲ ಸಂಕಟಗಳೂ ಪ್ರಾರಂಭವಾಗುವುದು ಎಚ್ಚರವಾದ ಮೇಲೆ. ಈ ಎಚ್ಚರ ಎನ್ನುವುದೇ ಎಲ್ಲ ಸಂಕಟಗಳ ಕೊಡುಗೆಯಾ? ಇದನ್ನು ಯಾರೂ ಆಲೋಚಿಸುವುದಿಲ್ಲ. ನಮ್ಮಲ್ಲಿ ಅಹಂಕಾರದ ಪೋಷಣೆ ನಡೆಯಕೂಡದು ಎನ್ನುವುದು ನಮಗೆ ಗೊತ್ತಾಗಬೇಕಷ್ಟೆ. ಮಹಾಭಾರತವು ಇಂಥ ಎಲ್ಲ ಕಷ್ಟಗಳನ್ನೂ ಬಿಡಿಬಿಡಿಯಾಗಿ ಹೇಳುತ್ತದೆ. ನಾವು ನಿಜವಾಗಿ ದೇವರ ದಾಸರಾದರೆ, ಆ ಕ್ಷಣದಿಂದ ಲೋಕದ ದಾಸ್ಯದಿಂದ ನಮಗೆ ಬಿಡುಗಡೆ ಸಿಕ್ಕುತ್ತದೆ. ಆದರೆ ಯಾವುದಾದರೂ ಒಂದು ಸಿದ್ಧಾಂತಕ್ಕೆ ಬದ್ಧರಾದರೆ ಇಂತಹ ಅರಿವು ಸಾಧ್ಯವಿಲ್ಲ.

ಚಾರಣ ಮುಗಿಸಿದ ‘ಬೆಟ್ಟದ ಜೀವ’

ಕುಮಾರಪರ್ವತದ ನಡುನೆತ್ತಿಯಲ್ಲಿ ಗಿರಿಗದ್ದೆಯ ‘ಭಟ್ಟರ ಮನೆ’ ಹಾಗೂ ತೋಟ


ಮಹಾಲಿಂಗೇಶ್ವರ ಭಟ್

ಮಹಮ್ಮದ್ ಶರೀಫ್

ನುಡಿ ನಮನ

ದಕ್ಷಿಣ ಕನ್ನಡ ಜಿಲ್ಲೆಯ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಿಂದ 13 ಕಿ.ಮೀ. ದೂರದಲ್ಲಿರುವ ‘ಕುಮಾರ ಪರ್ವತ’ದ ಚಾರಣ ಹಾದಿ, ತುಳಿದವರಿಗೇ ಗೊತ್ತು. ಕನ್ನಡ ಸಾಹಿತ್ಯದ ಮೇರುಪರ್ವತ ಕೋಟ ಶಿವರಾಮ ಕಾರಂತರಿಂದ ‘ಬೆಟ್ಟದ ಜೀವ’ ಕಾದಂಬರಿ ಬರೆಸಿಕೊಂಡ ಈ ಪರ್ವತದ ಎತ್ತರಕ್ಕೆ ನಡೆಯುತ್ತ 4 ಕಿ.ಮೀ. ಸಾಗಿದಂತೆ ತೋಟದ ನಡುವೆ ಮನೆಯೊಂದು ಕಾಣುತ್ತದೆ. ಅದೇ ‘ಭಟ್ಟರ ಮನೆ’. ಗಿರಿಗದ್ದೆ ಅಲ್ಲಿನ ಹೆಸರು. ಮನೆಯಂಗಳದಲ್ಲಿ ನಿಂತು, ನಗುತ್ತ ಸ್ವಾಗತಿಸುತ್ತಿದ್ದ ಮಹಾಲಿಂಗ ಭಟ್ಟರು ಡಿಸೆಂಬರ್ 20ರಂದು 67ನೇ ವಯಸ್ಸಿನಲ್ಲಿ ಬದುಕಿನ ಚಾರಣ ಮುಗಿಸಿದರು.

ನಸುಕಿನಲ್ಲಿ ಕುಮಾರಪರ್ವತಕ್ಕೆ ಚಾರಣ ಆರಂಭಿಸಿದರೆ ಸಂಜೆಯಾಗುವ ಹೊತ್ತಿಗೆ ಗಿರಿಗದ್ದೆಯ ಭಟ್ಟರ ಮನೆ ತಲುಪುತ್ತೇವೆ. 40 ವರ್ಷಗಳಿಂದ ಬೆಟ್ಟದ ನಡುವೆ ಒಂಟಿ ಮನೆಯಲ್ಲಿ ಬದುಕುತ್ತ, ಚಾರಣಕ್ಕೆ ಬರುವವರಿಗೆ ಅನ್ನ, ನೀರು, ಆಶ್ರಯ ನೀಡುತ್ತ ಬಂದ ಮನೆಯದು. 1974ರಲ್ಲಿ ಪರಮೇಶ್ವರ ಭಟ್ ಗಿರಿಗದ್ದೆಗೆ ಬಂದು ನೆಲೆಸಿದರು. ಅವರ ಕಾಲಾನಂತರ ಮಕ್ಕಳಾದ ಮಹಾಲಿಂಗೇಶ್ವರ ಭಟ್, ನಾರಾಯಣ ಭಟ್ ಮನೆ ನಡೆಸಿಕೊಂಡು ಬಂದರು.

ಮಣ್ಣಿನಿಂದ ನಿರ್ಮಿತ ಮನೆಗೆ ಹೊಸಕಾಲದ ನವೀಕರಣವಿಲ್ಲ. ಇಲ್ಲಿ ವಿದ್ಯುತ್ತಿಗೂ ನೀರು ಮೂಲ. ಮನೆಯ ಪಕ್ಕದಲ್ಲಿಯೇ ಹಟ್ಟಿ ನಿರ್ಮಿಸಿ ಹಸುಗಳನ್ನು ಸಾಕುತ್ತಿದ್ದ ಭಟ್ಟರು, ಹೈನುಗಾರಿಕೆಯಲ್ಲೂ ತೊಡಗಿಸಿಕೊಂಡಿದ್ದರು. ಬೆಟ್ಟದ ನಡುವಿನ ಒಂಟಿ ಮನೆಯೊಳಗೆ ಆರಾಮವಾಗಿ ಕೂತು ಸ್ಮಾರ್ಟ್ ಟಿವಿಯಲ್ಲಿ ಜಗತ್ತಿನ ಸುದ್ದಿಗಳನ್ನು ವೀಕ್ಷಿಸುತ್ತಿದ್ದ ಭಟ್ಟರನ್ನು ಕಂಡು ಚಾರಣಿಗರು ಕಣ್ಣರಳಿಸುತ್ತಿದ್ದರು. ನಾಡಿನ ಅರಿವಿಗೆ ಊರಿನ ಸುತ್ತಾಟವೇ ಬೇಕೆಂಬ ನಿಯಮವಿಲ್ಲ. ಕಾಡಿನ ಅರಿವಿಗೆ ಕಾಡು ಸುತ್ತಲೇಬೇಕಲ್ಲ.

ಮಧ್ಯಾಹ್ನವಾದಂತೆ ಬಿಸಿಬಿಸಿ ಕುಚ್ಚಲಕ್ಕಿ ಗಂಜಿ, ತರಕಾರಿ ಸಾಂಬಾರು, ಉಪ್ಪಿನಕಾಯಿ, ಜೊತೆಗೊಂದಿಷ್ಟು ಮಜ್ಜಿಗೆ ನೀಡುತ್ತಿದ್ದ ಭಟ್ಟರು, ಅದಕ್ಕೆ ತಕ್ಕುದಾದ ದರ ನಿಗಡಿಪಡಿಸಿದ್ದರು. ದಣಿವಿಗೆ ಸೂಕ್ತವಾದ ಆ ಆಹಾರ ನಿಜವಾದ ಅನ್ನದ ರುಚಿ, ಮಹತ್ವ ತಿಳಿಸುತ್ತಿತ್ತು. ಅನ್ನಕ್ಕೆ ಮೂಲವೇ ಇಲ್ಲದ ಬೆಟ್ಟದ ನಡುವೆ ಮಹಾಲಿಂಗೇಶ್ವರ ಭಟ್ಟರು ‘ಚಾರಣಿಗರ ಪಾಲಿನ ಅನ್ನದಾತ’ ಎಂದೇ ಹೆಸರಾದರು.

ಬೆಟ್ಟ ಹತ್ತುವುದೇ ಸಾಹಸವೆಂದು ಚಾರಣಿಗರು ಅಂದುಕೊಂಡರೆ, ಭಟ್ಟರು ಸಲೀಸಾಗಿ ಒಂದೇ ದಿನದೊಳಗೆ ಸುಬ್ರಹ್ಮಣ್ಯ ಪೇಟೆಗೆ ಬಂದು ಹೋಗುತ್ತಿದ್ದರು.

ಸಾಮಾಜಿಕ ಸ್ವಾಸ್ಥ್ಯ ಹದಗೆಡುತ್ತ ಬಂದ ಕಾಲಘಟ್ಟದಲ್ಲಿ ಭಟ್ಟರು ಆಡಿದ ಮಾತೊಂದು ನೆನಪಾಗುತ್ತದೆ; ‘ಬರಿಗೈಯಲ್ಲಿ ಬಂದಿದ್ದೇವೆ. ಬರಿಗೈಯಲ್ಲಿಯೇ ಮರಳುತ್ತೇವೆ. ಈ ವಾಸ್ತವ ತಿಳಿದೇ ನಾನು ನಿತ್ಯ ನಗುನಗುತ್ತ ಇರುತ್ತೇನೆ’.

‘ಜಾಗರ’ದ ಸಂಸ್ಕೃತಿಯ...

10ನೇ ಪುಟದಿಂದ..

ಮೂಡಣದ ಮೂರು ರಾಯರು

ಆಕಾಶದಲ್ಲಿ ಹೊಸ ನಕ್ಷತ್ರವನ್ನು ನೋಡಿ, ‘ಯಹೂದಿಗಳು ಶತಮಾನಗಳಿಂದ ಕಾಯುತ್ತಿದ್ದ ಅರಸ ಹುಟ್ಟಿಬರುವ ಗಳಿಗೆ ಬಂದಿದೆ’ ಎಂದು ಲೆಕ್ಕ ಹಾಕಿದ ಪೂರ್ವದ ಮೂವರು ರಾಯರು, ಅದರ ಜಾಡನ್ನು ಹಿಡಿದು ಬೆತ್ಲೆಹೇಮಿಗೆ ಬಂದು ‘ಕೂಸು ಯೇಸುಸ್ವಾಮಿಗೆ ಬಂಗಾರ, ಧೂಪ ಮತ್ತು ಸುಗಂಧ ದ್ರವ್ಯಗಳನ್ನು ಒಪ್ಪಿಸುತ್ತಾರೆ’. ಇವರನ್ನು ಪೂರ್ವದ ಪಂಡಿತರು, ಜ್ಞಾನಿಗಳು, ಅರಸರು ಅಥವಾ ಜ್ಯೋತಿಷಿಗಳು ಎಂದು ಗುರುತಿಸಲಾಗುತ್ತದೆ.

ಪಂಡಿತರ ಭೇಟಿಯ ಸ್ಮರಣೆಯ ‘ಮೂರು ರಾಯರ ಹಬ್ಬ’ವು, ಕನ್ನಡನಾಡಿನಲ್ಲಿ ಹೊಸ ರೂಪದಲ್ಲಿ ಅಭಿವ್ಯಕ್ತಗೊಂಡಿದೆ. ಸಂಕ್ರಾಂತಿಯ ದನಕರುಗಳ ಪೂಜೆ, ದಸರೆಯ ಆಯುಧ ಪೂಜೆ ಮತ್ತು ಹೋಳಿ ಹುಣ್ಣಿಮೆಯ ಕಾಮನಹಬ್ಬದ ರಂಗಿನಾಟ- ಈ ಮೂರೂ ಸಂಭ್ರಮಗಳು, ಕ್ರೈಸ್ತರು ಅಧಿಕ ಸಂಖ್ಯೆಯಲ್ಲಿರುವ ಗ್ರಾಮಗಳಲ್ಲಿನ ಈ ಮೂರು ರಾಯರ ಹಬ್ಬದಲ್ಲಿ ಮೇಳೈಸಿವೆ.

ಬೆಳಿಗ್ಗೆ ಹಬ್ಬದ ಪಾಡು(ಹಾಡು) ಪೂಜೆ ಮುಗಿಯುತ್ತಿದ್ದಂತೆಯೇ, ಕೆಲವು ಊರುಗಳಲ್ಲಿನ ಕ್ರೈಸ್ತರು ತಮ್ಮ ದನಕರುಗಳನ್ನು ಸಿಂಗರಿಸಿಕೊಂಡು ಗುಡಿಯ ಅಂಗಳಕ್ಕೆ ತರುತ್ತಾರೆ. ಅಲ್ಲಿ ಗುರುಗಳು ತೀರ್ಥ ಪ್ರೋಕ್ಷಣೆ ಮಾಡಿ ಆಶೀರ್ವದಿಸುತ್ತಾರೆ. ದಸರೆಯಲ್ಲಿ ಆಯುಧ ಪೂಜೆ ಮಾಡುವಂತೆ, ಕ್ರೈಸ್ತರು ತಮ್ಮ ತಮ್ಮ ವಾಹನಗಳನ್ನು ಗುಡಿಯಂಗಳಕ್ಕೆ ತಂದು ಅವಕ್ಕೂ ಗುರುಗಳಿಂದ `ಅಪಘಾತಗಳು ನಡೆಯದಿರಲಿ’ ಎಂದು ಕೋರಿ ಆಶೀರ್ವಾದ ಪಡೆಯುತ್ತಾರೆ. ನಂತರ ಮಕ್ಕಳು ಪರಸ್ಪರ ಬಣ್ಣ ಎರಚಿ ಸಂಭ್ರಮಿಸುತ್ತಾರೆ.

ಪವಿತ್ರ ಜಾಗರದ ವಿಸರ್ಜನೆ

ಮೂರು ರಾಯರ ಹಬ್ಬದ ಕೊನೆಯಲ್ಲಿ ಚರ್ಚು ಮತ್ತು ಮನೆಮನೆಗಳಲ್ಲಿ ನಿರ್ಮಿಸಿದ್ದ ಕೊಟ್ಟಿಗೆಗಳನ್ನು ಬಿಚ್ಚುತ್ತಾರೆ. ಕೆಲವು ಗ್ರಾಮಗಳಲ್ಲಿನ ಕ್ರೈಸ್ತರು, ವಾಲಗದವರನ್ನು ಗುಡಿ (ಚರ್ಚ್)ಗೆ ಕರೆಸಿ, ಗುಡಿಯ ಜಾಗರವನ್ನು ಊರೆಲ್ಲಾ ಸುತ್ತಾಡಿಸಿ, ಹೊಳೆಗೋ, ಕೆರೆಗೋ ಒಯ್ದು ನೀರಿಗೆ ಒಪ್ಪಿಸುವಂತೆ ಕೋರುತ್ತಿದ್ದರು. ಕೆಲವರು ತಮ್ಮ ಮನೆಗಳಲ್ಲಿನ ಕೊಟ್ಟಿಗೆಯ ಜಾಗರಗಳನ್ನೂ ಅವರಿಗೇ ಒಪ್ಪಿಸುತ್ತಿದ್ದರು.

ಬೇಗೂರಿನಲ್ಲಿನ ಕ್ರೈಸ್ತ ಮಹಿಳೆಯರು, ಜಾಗರದ ಬುಟ್ಟಿ, ಮೊರಗಳನ್ನು ತಲೆಯ ಮೇಲೆ ಹೊತ್ತು, ವಾಲಗದವರೊಂದಿಗೆ ಊರಲ್ಲಿ ಮೆರವಣಿಗೆ ಮಾಡುತ್ತಿದ್ದರು. ಕೊನೆಗೆ ಕೆರೆಯಲ್ಲಿ ಅವನ್ನು ವಿಸರ್ಜಿಸುತ್ತಿದ್ದರು. ಈ ಆಚರಣೆಯು ಗಣೇಶ ಚತುರ್ಥಿಯ ಗಣಪನ ಮತ್ತು ಪಶ್ಚಿಮ ಬಂಗಾಳದ ದೀಪಾವಳಿಯ ಕಾಳಿಮಾತೆಯ ವಿಸರ್ಜನೆಯ ಕ್ರಮವನ್ನು ಹೋಲುತ್ತಿತ್ತು.

ನಗರೀಕರಣದ ಪ್ರಭಾವ ಮತ್ತು ಪ್ರಗತಿಯ ನಾಗಾಲೋಟದಲ್ಲಿ ನಮ್ಮ ಜನಪದರ ಹಲವಾರು ಸಂಪ್ರದಾಯಗಳು ಮೂಲೆಗುಂಪಾಗಿರುವಂತೆ, ಕ್ರೈಸ್ತ ಜನಪದರ ‘ಜಾಗರ ಮುಳುಗಿಸುವ’ ಆಚರಣೆ ನೇಪಥ್ಯಕ್ಕೆ ಸರಿದಿದೆ. ಗೋದಲಿಯ ಪಕ್ಕ ಜಾಗರ ಬೆಳೆಸುವ ಪದ್ಧತಿ ಗ್ರಾಮಾಂತರ ಪ್ರದೇಶಗಳಲ್ಲಿ, ಸಂಪ್ರದಾಯಸ್ಥ ಮನೆಗಳಲ್ಲಿ ಗುಟುಕು ಜೀವ ಉಳಿಸಿಕೊಂಡಿದೆ. ನೈಸರ್ಗಿಕ ಪುಟಾಣಿ ಕ್ರಿಸ್ಮಸ್ ಗಿಡಗಳ ಬದಲು ಪ್ಲಾಸ್ಟಿಕ್ ಕ್ರಿಸ್ಮಸ್ ಗಿಡಗಳು ಬಂದಂತೆ, ನಿಧಾನವಾಗಿ ಪ್ರಕೃತಿಯಿಂದ ಮಣ್ಣಿನಿಂದ ದೂರ ಸರಿಯುತ್ತಿರುವ ಪಟ್ಟಣಿಗರ ಗೋದಲಿಯ ಸಿಂಗಾರಕ್ಕೆ, ಜಾಗರದ ಬದಲು ಗಲೀಜು ಮಾಡದ ಪ್ಲಾಸ್ಟಿಕ್ ಹುಲ್ಲಿನ ಬಗೆಬಗೆಯ ಹಾಸುಗಳು ಬಂದಿವೆ, ಬರತೊಡಗಿವೆ.

ಕ್ರಿಸ್‌ಮಸ್ ಬೆಳಕಿನ ಮೋಂಬತ್ತಿ

ಗಾಯಗೊಂಡ ಬದುಕಿನ ಚಿತ್ರಗಳು

ವಿಕ್ರಮ ವಿಸಾಜಿ

ವಿಮರ್ಶೆ



ಪು: 136 ₹120

ಅಗಸ್ತ್ಯ ನಕ್ಷತ್ರ
ಲೇ: ಮಲ್ಲಿಕಾರ್ಜುನಗೌಡ ತೂಲಹಳ್ಳಿ
ಪ್ರ: ಪಲ್ಲವ ಪ್ರಕಾಶನ
ಸಂ:9480353507

ಗ್ರಾಮೀಣ ಬದುಕು ಮತ್ತು ನಗರ ಜೀವನ ಮೊದಲಿನಿಂದಲೂ ಕನ್ನಡ ಕತೆಗಳ ಆಸಕ್ತಿಯ ತಾಣಗಳು. ಮಲ್ಲಿಕಾರ್ಜುನಗೌಡ ತೂಲಹಳ್ಳಿ ಅವರ ‘ಅಗಸ್ತ್ಯ ನಕ್ಷತ್ರ’ ಸಂಕಲನದ ಕತೆಗಳು ಗ್ರಾಮೀಣ ಬದುಕಿನೆಡೆಗೆ ವಾಲಿವೆ. ಕನ್ನಡ ಕತೆಗಳು ಈಗಾಗಲೇ ದೊಡ್ಡ ಪ್ರಮಾಣದಲ್ಲಿ ತೆರೆದಿಟ್ಟ ಈ ಲೋಕಕ್ಕೆ ಇನ್ನಷ್ಟು ಅನುಭವಗಳನ್ನು ಸೇರಿಸಲು ಯತ್ನಿಸಿವೆ. ಇಲ್ಲಿಯ ನಾಲ್ಕು ಕತೆಗಳಲ್ಲಿ ಎರಡು ಕತೆಗಳು ನೀಳ್ಗತೆಗಳು. ‘ಘಾಟು’ ಕತೆ ತಂಬಾಕು ಬೆಳೆಯ ಸುತ್ತಲಿನ ರಾಜಕಾರಣವನ್ನು ಹೇಳಿದರೆ, ‘ಅಗಸ್ತ್ಯ ನಕ್ಷತ್ರ’ ಕತೆ ಪ್ರೇಮವೊಂದರ ದುರಂತ ಅಂತ್ಯವನ್ನು ಕಾಣಿಸಿದೆ. ‘ಕಣಿವೆ’ ಕತೆ ದುಡ್ಡಿನ ಆಸೆಯಲ್ಲಿ ಹೊಲಗಳನ್ನು ಗಣಿ ದಣಿಗಳಿಗೆ ಮಾರಿ ರೋಗ ತಂದುಕೊಂಡ ರೈತರ ಕತೆಯಾದರೆ, ಕೊನೆಯ ಕತೆ ‘ನಲ್ಲಿ ಬಂತು’ ಊರಿನ ಜಾತಿ ವ್ಯವಸ್ಥೆಯ ಸಂಕೀರ್ಣ ಚಿತ್ರಗಳಿಗೆ ಕನ್ನಡಿ ಹಿಡಿದಿದೆ. ವಿವಿಧ ಸಮುದಾಯಗಳ ನಡುವಿನ ಅಪನಂಬಿಕೆ, ಬೆಳೆಗಾರರು ಮತ್ತು ದಲ್ಲಾಳಿಗಳ ವೈಮನಸ್ಸು, ಲಾಭ-ನಷ್ಟಗಳ ಲೆಕ್ಕಾಚಾರದಲ್ಲಿ ಎಲ್ಲಾ ಸಂಬಂಧಗಳು ತೋಪೆದ್ದು ಹೋಗುವ ದುರಂತ, ಪೈಪ್‌ಲೈನ್ ಹಾಕುವ ನೆವದಲ್ಲಿ ನೀರು ಯಾವ ಕೇರಿಯಿಂದ ಯಾವ ಕೇರಿಗೆ ಹೋಗಬೇಕೆಂಬ ಜಗಳ ಇಲ್ಲಿನ ಕತೆಗಳಲ್ಲಿ ಸಂಘರ್ಷದ ವಾತಾವರಣವನ್ನು ನಿರ್ಮಿಸಿವೆ. ಸಂಬಂಧಗಳನ್ನು ಅರ್ಥಮಾಡಿಕೊಳ್ಳದ ಸ್ಥಿತಿ ಹಲವು ಕೊಲೆಗಳಿಗೆ ಕಾರಣವಾಗಿದೆ. ‘ಅಗಸ್ತ್ಯ ನಕ್ಷತ್ರ’ ಕತೆಯಲ್ಲಿ ಸರೋಜಳ ಕೊಲೆ ಇದಕ್ಕೊಂದು ಸಂಕೇತ. ಆಕೆಯ ಪ್ರಿಯಕರ ಭೋಜನಗೌಡ ಪೊಲೀಸರ ಶಂಕೆಗೊಳಗಾಗಿ ಇನ್ನೊಂದು ತರಹದ ಮಾನಸಿಕ ಹಿಂಸೆಗೆ ಒಳಗಾಗಿದ್ದಾನೆ. ಆತನ ಪ್ರಗತಿಪರ ಆಶಯಗಳು ಮತ್ತಷ್ಟು ತೊಂದರೆಗಳನ್ನು ತಂದೊಡ್ಡಿವೆ. ಪತ್ರಕರ್ತ ಉದಯನ ತನಿಖಾ ವರದಿಯ ರೂಪದಲ್ಲಿ ಈ ಕತೆಯನ್ನು ರಚಿಸಲಾಗಿದೆ. ‘ನಲ್ಲಿ ಬಂತು’ ಕತೆ ಗ್ರಾಮೀಣ ಜಗತ್ತಿನ ರಾಜಕಾರಣ ಮತ್ತು ಜಾತಿಯ ವಿಕಾರಗಳನ್ನು ಬಿಚ್ಚಿಟ್ಟಿದೆ. ಜೊತೆಗೆ ಕೃಷಿ ಜಗತ್ತಿನ ತಲ್ಲಣಗಳನ್ನು ತೆರೆದಿಡುವಲ್ಲಿ ಆಸಕ್ತವಾಗಿದೆ.

ಈ ಕತೆಗಳಲ್ಲಿ ಕಾಣಿಸಿಕೊಳ್ಳುವ ರಾಜಕಾರಣವು ಇಲ್ಲಿನ ಪರಿಸ್ಥಿತಿಯನ್ನು ಇನ್ನಷ್ಟು ಜಟಿಲಗೊಳಿಸಿದೆ. ಪ್ರತಿಯೊಂದು ಸಮಸ್ಯೆ ಕೂಡ ಅದಕ್ಕೆ ಓಟಿನ ರಾಜಕಾರಣದ ಭಾಗ. ನ್ಯಾಯಪ್ರಜ್ಞೆ ಹಿನ್ನೆಲೆಗೆ ಸರಿದು, ಯಾರ ಪರ ನಿಂತರೆ ಎಷ್ಟು ಓಟು ದಕ್ಕುತ್ತದೆ ಎಂಬುದೇ ಅದಕ್ಕೆ ಮುಖ್ಯ. ಹೀಗಾಗಿ ಅದು ಪ್ರವೇಶಿಸಿದಷ್ಟೂ ಸಮಸ್ಯೆ ಗೊಂದಲದ ಗೂಡಾಗಿಬಿಟ್ಟಿದೆ. ರಾಜಕಾರಣ ಹಲವು ತಳ ಸಮುದಾಯಗಳನ್ನು ಪರಸ್ಪರ ಎದುರಾಳಿಗಳಾಗಿಸುವ ಸಂಚಿನ ಭಾಗವಾಗಿರುವುದನ್ನು ಕತೆಗಳಲ್ಲಿ ಕಂಡುಕೊಳ್ಳಬಹುದು. ನಾಲ್ಕೂ ಕತೆಗಳಲ್ಲಿ ಇದನ್ನು ವ್ಯಂಗ್ಯದಿಂದಲೂ, ವಿ ಷಾ ದ ದಿ ಂ ದ ಲೂ ಸೂಚಿಸಲಾಗಿದೆ. ಇಲ್ಲಿನ ಕತೆಗಳ ಬಹುತೇಕ ಪಾತ್ರಗಳಿಗೆ ಕೃಷಿಯು ಈಗ ಅಷ್ಟು ಲಾಭದಾಯಕ ಸಂಗತಿಯಾಗಿ ಉಳಿದಿಲ್ಲ. ಅದನ್ನು ಉದ್ಯಮವಾಗಿಸುವ ಆಸೆಗಳಿಗೆ ಕೃಷಿಕರು ಬಲಿಯಾಗುತ್ತಿದ್ದಾರೆ. ತಂಬಾಕು ಉದ್ಯಮ, ಕಬ್ಬಿಣದ ಅದಿರಿನ ಉದ್ಯಮ ಅವರನ್ನು ಸೆಳೆದಿದೆ. ಎಲ್ಲಿ ಒಂದು ಗ್ರಾಮವಿತ್ತೊ ಅಲ್ಲಿ ಈಗ ವ್ಯಾಪಾರದ ಅವಕಾಶಗಳು ಗೋಚರಿಸಿವೆ. ಜೀವನವನ್ನು ಜೀವಿಸಬೇಕೊ ಅಥವಾ ಭೋಗಿಸಬೇಕೊ ಎಂಬ ದ್ವಂದ್ವಗಳಲ್ಲಿ ಪಾತ್ರಗಳು ದಿಕ್ಕೆಟ್ಟು ನಿಂತಿವೆ. ಗ್ರಾಮೀಣ ಜಗತ್ತಿನ ಈ ಬದಲಾದ ಚಿತ್ರಗಳನ್ನು ಕತೆಗಳು ಒಳಗೊಂಡಿದ್ದೊಂದು ವಿಶೇಷ.

ಇವು ಗ್ರಾಮೀಣ ಜಗತ್ತಿನ ವಾಸ್ತವವನ್ನು ಅರಿಯಹೊರಟ ಕತೆಗಳು. ಅಯ್ನೋರ ಓಣಿ, ಪಿಂಜಾರ ಕೇರಿ, ಮಾದಿಗರ ಕೇರಿ, ಹೀಗೆ ಹಲವು ಸಮುದಾಯಗಳ ಮುಖಗಳಿವೆ. ಇವುಗಳ ಮೂಲಕ ಆಯಾ ಸಮುದಾಯಗಳ ರಚನೆಯೊಂದನ್ನು ಪ್ರತಿನಿಧಿಸುವ ಭಾಷೆಯೂ ಕಾಣಿಸಿಕೊಂಡಿದೆ.

ಬಣಕಾರ ಬಸಯ್ಯ, ಈಚಲದಕಟ್ಟೆ ಭರಮಪ್ಪ, ಕಾಸೀಂಸಾಬ್, ಮಾದರ ದುರುಗ, ಹಾಲಬಾವಿ ಮಾಸ್ತರ, ಮೇಸ್ತ್ರೀ ಚೌಡಪ್ಪ, ತಳವಾರ ಮರಿಯ, ಕ್ಷೌರಿಕ ನಂಜಣ್ಣ, ಅಗಸರ ಪಕ್ಕೀರಣ್ಣ, ಚಲವಾದಿ ಗಿಡ್ಡಪ್ಪ, ಹುಲುಗವ್ವ, ಲಿಂಗನಗೌಡ ಮತ್ತು ನಾಯಕರ ಭರಮಜ್ಜ ಇವರೆಲ್ಲರ ಮಾತು ಗ್ರಾಮೀಣ ಸಂಸ್ಕೃತಿಯ ಹಲವು ಪದರುಗಳನ್ನು ತೆರೆದಿಟ್ಟಿದೆ. ಗ್ರಾಮೀಣ ಜಗತ್ತಿನ ಭಾಷಿಕ ಸಂಸ್ಕೃತಿ ನಿರ್ಮಾಣಗೊಂಡಿದ್ದರ ಚಿತ್ರವೊಂದು ಅನುದ್ದೇಶಪೂರ್ವಕವಾಗಿ ಇಲ್ಲಿನ ಕತೆಗಳಲ್ಲಿ ದಾಖಲಾಗಿದೆ. ಅಲ್ಲಲ್ಲಿ ಬರುವ ಕಾವ್ಯಾತ್ಮಕ ಭಾಷೆ ಕೂಡ ಅಚ್ಚರಿ ಹುಟ್ಟಿಸುತ್ತದೆ. ವಾಸ್ತವದ ನಿರೂಪಣೆ ವಾಚಾಳಿ ನಿರೂಪಣೆ ಆಗಬೇಕಿಲ್ಲ ಎಂಬುದನ್ನು ಹಲವು ಕಡೆ ಕಾಣಿಸಿದ್ದೆ ಇಲ್ಲಿಯ ಕತೆಗಳ ಒಂದು ಗುಣಾತ್ಮಕ ಸಂಗತಿ.

ಗ್ರಾಮೀಣ ಜಗತ್ತಿನ ಒತ್ತಡಗಳನ್ನು ಇಲ್ಲಿಯ ಕತೆಗಳು ಸ್ವಲ್ಪ ಹಳೆಯದಾದ ಮಾದರಿಯಲ್ಲಿ ಗ್ರಹಿಸುತ್ತಿರುವುದರಿಂದ ಹೊಸ ಸದ್ದುಗಳನ್ನು ಆಲಿಸಲು ಇವುಗಳಿಗೆ ಸಾಧ್ಯವಾಗುತ್ತಿಲ್ಲ. ವೈವಿಧ್ಯಮಯವಾದ ವಿವರಗಳಿವೆ. ಆದರೆ ಈ ವಿವರಗಳಿಗೆ ಆಳವಾದ ಅನುಭವಗಳ ನೆರವು ದೊರೆಯದೇ ಹೋಗಿದೆ. ವಿವರಗಳನ್ನು ಕಾಣಿಸುವ ಉತ್ಸಾಹ, ಕತೆಗಳ ರಚನೆ ಹಾಗೂ ಕತೆಗಳಿಂದ ಹೊರಡಬಹುದಾದ ದನಿಗಳನ್ನು ಆಲಿಸುವಲ್ಲಿ ಇಲ್ಲ. ಇದರಿಂದಾಗಿ ಕತೆಗಳಲ್ಲಿ ವಿಸ್ತಾರವಾಗಿ ಹರಡಿಕೊಂಡಿರುವ ವಿವರಗಳಿಗೆ ಚಲನೆ ಸಾಧ್ಯವಾಗಿಲ್ಲ. ಇದ್ಯಾಕೆ ಹೀಗಾಗಿದೆ ಅಂತ ಯೋಚಿಸಿದರೆ ಕೆಲ ಸಂಗತಿಗಳು ಗೋಚರಿಸಬಹುದು. ಈ ಕತೆಗಳಲ್ಲಿನ ಪಾತ್ರಗಳು ತಮ್ಮ ಅಂತರ್ಯದೊಂದಿಗೆ ಹೆಚ್ಚು ಸಂಬಂಧಗಳನ್ನಿಟ್ಟುಕೊಂಡಿಲ್ಲ. ಹೊರಗಿನ ಘಟನೆಗಳಿಂದ ಪ್ರಭಾವಗೊಂಡಷ್ಟು, ತಮ್ಮ ಒಳಗಿನ ದ್ವಂದ್ವಗಳಿಂದ ಕಲಿಯುತ್ತಿಲ್ಲ. ಈ ಬಿರುಕು ಪಾತ್ರಗಳ ಅಂತರ್ಯವನ್ನು ಖಾಲಿಯಾಗಿಯೇ ಉಳಿಸಿಬಿಟ್ಟಿದೆ. ಹೊರಗಿನ ಲೋಕ ದೊಡ್ಡದೆಂಬುದರಲ್ಲಿ ಎರಡು ಮಾತಿಲ್ಲ, ಆದರೆ ಮನುಷ್ಯರ ಒಳಗಿನ ಲೋಕ ಹೊರಗಿನ ಲೋಕಕ್ಕಿಂತ ಎರಡು ಪಟ್ಟು ದೊಡ್ಡದೆಂಬುದನ್ನು ನಂಬಿದ್ದರೆ ಕತೆಗಳ ಬೆಳವಣಿಗೆಯ ಮಾರ್ಗಗಳು ಮೊಟಕುಗೊಳ್ಳುತ್ತವೆ. ಪುಟಗಳಲ್ಲಿ ದೀರ್ಘವಾಗಿ ಬೆಳೆಯುವ ಕತೆಗಳು ಓದುಗರ ಮನಸ್ಸಿನಲ್ಲೂ ಬೆಳೆಯುವಂತಾದರೆ ಚೆಂದ. ಹಾಗೆ ಬೆಳೆಯುವ ಸಾಧ್ಯತೆಗಳನ್ನು ಕತೆಗಳಲ್ಲಿ ಬಚ್ಚಿಡುವುದೇ ಎಲ್ಲಾ ಕಾಲದ ಕತೆಗಾರರ ಎದುರಿನ ಸವಾಲು. ವಿವರಗಳು ತಿಳಿವಳಿಕೆಯಾಗಿ ಬದಲಾಗುವ ದಾರಿಗಳನ್ನು ಕತೆಗಾರರು ಹುಡುಕುತ್ತಲೇ ಇರಬೇಕೇನೊ. ಆ ತಿಳಿವಳಿಕೆಗಳು ಕತೆಗಳ ರಚನೆಯೊಳಗಿನಿಂದಲೇ ಎದ್ದು ಬರಬೇಕು. ಗಾಯಗೊಂಡ ಈ ಗ್ರಾಮಗಳನ್ನು ನಿರೂಪಿಸಲು ಹೊಸ ಕಣ್ನೋಟವೇ ಬೇಕಿತ್ತು ಎನಿಸುತ್ತದೆ.

ಮೊದಲ ಓದು

ಪ್ರಮುಖ ವಚನಕಾರರ ವಚನ ವಿಶ್ಲೇಷಣೆ

ಪು: 432 ₹450

ವಚನಬೋಧಿ
ಲೇ :ಶಿವಕುಮಾರ್
ಪ್ರ:ಅಕ್ಕ ಐ.ಎ.ಎಸ್ ಅಕಾಡೆಮಿ
ಸಂ:9560863287

ಅಲ್ಲಮಪ್ರಭು, ಬಸವಣ್ಣನಿಂದ ಹಿಡಿದು ಅನೇಕ ವಚನಕಾರರು ವಚನ ಸಾಹಿತ್ಯದಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ. ಅಂತಹ ಪ್ರಮುಖ 60 ವಚನಕಾರರ ವಚನಗಳ ವಿಶ್ಲೇಷಣೆಯನ್ನು ಒಳಗೊಂಡಿದೆ ಈ ‘ವಚನಬೋಧಿ’ ಕೃತಿ.

‘ಲೇಖಕರು ಆಯ್ದ ವಚನಗಳನ್ನು ತಿಳಿಯಾದ ಕನ್ನಡದಲ್ಲಿ ವ್ಯಾಖ್ಯಾನಿಸಿದ್ದಾರೆ.ವಿದ್ಯಾರ್ಥಿಗಳಿಗೆ, ವಚನಾಸಕ್ತರಿಗೆ ಉಪಯುಕ್ತವಾಗಿದೆ. ವಚನ ವೈವಿಧ್ಯ, ವಿಚಾರಗಳ ವಿಸ್ತಾರವು ಓದುಗರ ಗಮನಕ್ಕೆ ಬರುವಂತೆ ಕೃತಿ ರೂಪುಗೊಂಡಿದೆ’ ಎಂದು ಪುಸ್ತಕದ ಬೆನ್ನುಡಿಯಲ್ಲಿ ಪ್ರೊ.ಕಾಳೇಗೌಡ ನಾಗವಾರ ಅವರು ಹೇಳಿದ್ದಾರೆ.

ದೇವರದಾಸಿಮಯ್ಯ, ಅಲ್ಲಮ, ಬಸವಣ್ಣ, ಸಿದ್ಧರಾಮಯ್ಯ, ಸಕಲೇಶ ಮಾದರಸ, ಅಂಬಿಗರ ಚೌಡಯ್ಯ, ಉರಿಲಿಂಗದೇವನಿಂದ ಹಿಡಿದು ಮಸಣಮ್ಮ, ಕಾಳವ್ವೆ, ಗುಡ್ಡವ್ವೆ ತನಕ ಪ್ರಮುಖ ವಚನಕಾರರ ಜನಪ್ರಿಯ ವಚನಗಳ ವಿಶ್ಲೇಷಣೆ ಕೃತಿಯಲ್ಲಿದೆ. ಉದಾಹರಣೆಗೆ: ‘ಲೋಕದ ಡೊಂಕ ನೀವೇಕೆ ತಿದ್ದುವಿರಿ?...’ ಎಂಬ ಬಸವಣ್ಣನವರ ಜನಪ್ರಿಯ ವಚನದ ಸಂಪೂರ್ಣ ಅರ್ಥವನ್ನು ಲೇಖಕರು ವಿವರಿಸಿದ್ದಾರೆ. 60 ಬರಹಗಳನ್ನು ಹೊಂದಿರುವ ಕೃತಿಯಲ್ಲಿ ವಚನಗಳ ಜೊತೆಗೆ ವಚನಕಾರರ ಕುರಿತ ಕಿರುಪರಿಚಯವೂ ಇದೆ. ವಚನ ಅಧ್ಯಯನ ಆಸ್ತಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಕೈಪಿಡಿಯಾಬಗಲ್ಲಂತಹ ಕೃತಿ.

ವಿಜ್ಞಾನ–ತಂತ್ರಜ್ಞಾನದ ಹೂರಣ

ಪು: 156 ₹160

ವಿರಾಟ್ ವಿಜ್ಞಾನ
ಲೇ :ಗುರುರಾಜ್ ಎಸ್. ದಾವಣಗೆರೆ
ಪ್ರ: ವಸಿಷ್ಠ ಬುಕ್ಸ್, ಬೆಂಗಳೂರು
ಸಂ: 9901067738

ಗಣಿತ ಅಧ್ಯಾಪಕರಾದ ಗುರುರಾಜ್ ಎಸ್. ದಾವಣಗೆರೆ ಅವರಿಗೆ ಹೊಸಕಾಲದ ಬಹುಮುಖಿ ವಿಷಯಗಳ ಮೇಲೆ ಇನ್ನಿಲ್ಲದ ಆಸಕ್ತಿ. ಅದರಲ್ಲೂ ತಂತ್ರಜ್ಞಾನ ಹಾಗೂ ವಿಜ್ಞಾನವನ್ನು ಅವರು ಕಣ್ಣುಗಳನ್ನು ಅಗಲಿಸಿ ನೋಡುವವರ ಪೈಕಿ. ವಿಜ್ಞಾನ, ತಂತ್ರಜ್ಞಾನ ವಿಸ್ತರಣೆಗೊಳ್ಳುತ್ತಾ, ಬದುಕಿನ ಭಾಗವೇ ಆಗುತ್ತಾ, ಹೊಸತೇನೋ ಸವಾಲು ಬಂತಿದೋ ಎನ್ನುವಂತೆ ಮಾಡುತ್ತಲೇ ಇವೆ. ಇಂತಹ ಸಂಗತಿಗಳ ಮಾಹಿತಿ ಕೊಡುವುದರ ಜೊತೆಗೆ ಅವನ್ನು 360 ಡಿಗ್ರಿಯಲ್ಲಿ ನೋಡುವ ಕ್ರಮವೊಂದು ಇರುವುದು ಉತ್ತಮ. ಅಂತಹ ಯತ್ನವನ್ನು ಗುರುರಾಜ್ ಮಾಡಿದ್ದಾರೆ. ‘ಸುಧಾ’ ವಾರಪತ್ರಿಕೆಯಲ್ಲಿ ಪ್ರಕಟವಾದ ಮುಖಪುಟ ಲೇಖನಗಳನ್ನು ಒಳಗೊಂಡ ಮಾಹಿತಿಪೂರ್ಣ ಸಂಕಲನ ‘ವಿರಾಟ್ ವಿಜ್ಞಾನ’.

ಥ್ರೀಡಿ, ಬಾಹ್ಯಾಕಾಶ, ಯಾಂತ್ರಿಕ ಬುದ್ಧಿಮತ್ತೆ ಹೀಗೆ ಹಲವು ಕ್ಷೇತ್ರಗಳ ಸೋಜಿಗಪಡುವಂತಹ ಮಾಹಿತಿಯನ್ನು ಅವರು ಒಟ್ಟುಮಾಡಿ ಕೊಟ್ಟಿದ್ದಾರೆ. ‘ಸೈನ್ಸ್-ಟೆಕ್ನಾಲಜಿಯ ತೀರ ಇತ್ತೀಚಿನ ಆಗುಹೋಗುಗಳನ್ನು ಎಲ್ಲರಿಗೂ ಅರ್ಥವಾಗುವಂತೆ ಬರೆಯುವವರಲ್ಲಿ ಅಗ್ರಗಣ್ಯರು’ ಎಂದು ಗುರುರಾಜ್ ಅವರನ್ನು ನಾಗೇಶ ಹೆಗಡೆ ತಮ್ಮ ಬೆನ್ನುಡಿಯಲ್ಲಿ ಗುರುತಿಸಿದ್ದಾರೆ. ಕೃತಿಯ ಸಾರಕ್ಕೆ ಅವರ ಈ ನುಡಿ ಸರ್ಟಿಫಿಕೇಟ್ ಇದ್ದಂತೆ.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಹೃದ್ವನ

ಕುವೆಂಪು ಅವರು ಕಾವ್ಯರ್ಷಿ. ಅವರು ಪರಮಾತ್ಮನನ್ನು ಸದಾ ಧ್ಯಾನಿಸುವ ತಪಸ್ವಿ. ಭಗವಂತನನ್ನು ಹೃದಯವಾಸಿ ಎಂದು ಹೇಳುವರು. ಕವಿಯು ಹೃದಯವನ್ನೇ ಧ್ಯಾನಕ್ಷೇತ್ರವನ್ನಾಗಿಸಿಕೊಂಡು, ಅನಂತಶಕ್ತನನ್ನು ‘ಹೃದ್ವನವಾಸಿ’ ಎಂದಿದ್ದಾರೆ. ‘ಹೃದ್ವನ’ ಪದ ಸೃಷ್ಟಿಸಿ ‘ಭಕ್ತರ ಹೃದಯದಿ ನೆಲೆಸುತ ಮುದದಿ ಭಕ್ತವತ್ಸಲನಾಗಿಹೆಯಂತೆ’ ಎಂಬ ಅರಿವಿನಲ್ಲಿ ‘ಹೃದ್ವನವಾಸಿ’ಯನ್ನು ಧ್ಯಾನಿಸಿದ್ದಾರೆ.

ಅದ್ವಿತಿಯನಾಗಿಹೆಯಂತೆ
ಹೃದ್ವನವಾಸಿಯು ನೀನಂತೆ
ಭಕ್ತಿಯು ನೀನಂತೆ
ಶಕ್ತಿಯು ನೀನಂತೆ
ಸಿದ್ಧರ ಮುಕ್ತಿಯು ನೀನಂತೆ
(ಅಂತೆ – ಕೊಳಲು)

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಕಥೆ

ಜ್ಯೋತಿ ಅವರ **ಅಹಲ್ಯೆ ಭೇಟಿಯಾದ ಸೀತಾ...**

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ

ಜ್ಯೋತಿ ಗುರುಪ್ರಸಾದ ಅವರ **ನಿನ್ನ ಪ್ರೇಮದ ಕಣ್ಣುಗಳ ಅರಸಿ**

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry

ಗೋವಾದ ಪಗೋಟರ್ ಬೀಚ್

ವರ್ಷಾರಂಭಕೆ ಸುಂದರ ತಾಣಗಳ ಮುನ್ನುಡಿ

ಹೊಸ ವರ್ಷದ ಬಾಗಿಲು ತೆರೆಯುತ್ತಿದ್ದಂತೆ ಹೊಸ ಕನಸು, ಹುರುಪು, ಉತ್ಸಾಹವೂ ಮೈದುಂಬುತ್ತದೆ. ಕಹಿ ಮರೆತು ನವ ಚೈತನ್ಯ ಬಯಸುವ ಮನಗಳಿಗೆ ವರ್ಷದ ಆರಂಭವನ್ನು ಹೊಸತಾಗಿ, ಸ್ಮರಣೀಯಗೊಳಿಸುವಂತೆ ಮಾಡುವ ಸುಂದರ ಸ್ಥಳಗಳ ಪರಿಚಯ ಇಲ್ಲಿದೆ...

ಸುಮಲತಾ ಎನ್.

ಹೊಸ ಹುರುಪಿಗೆ ಹಾದಿ ಗೋವಾ

ವರ್ಷಕ್ಕೆ ಸುಂದರ ಮುನ್ನುಡಿ ಬರೆಯಬೇಕು, ಮನಸೋಇಚ್ಛೆ ಹಾಡಿ ಕುಣಿಯಬೇಕೆಂಬುದು ನಿಮ್ಮಿಷ್ಟವಾಗಿದ್ದರೆ, 'ಗೋವಾ' ಎಂದಿಗೂ ನಿರಾಸೆ ಮಾಡದು. ಇಂದಿಗೂ ಲಕ್ಷಾಂತರ ಜನರಿಗೆ ಗೋವಾ, 'ಹೊಸ ವರ್ಷಾಚರಣೆಗೆ ಫೇವರೆಟ್ ಸ್ಥಳ'. ಈ ಸಮಯದಲ್ಲಿ ಜನ ಹೆಚ್ಚಿದ್ದರೂ, ಆ ವೈವಿಧ್ಯದ ಸಂಗಮವೇ ಹೊಸ ಹುರುಪು ತುಂಬುತ್ತದೆ. ಪಾರ್ಟಿ ಬಯಸುವವರಿಗೆಂದೇ ಬೀಚ್ ಸೈಡ್ ಹೋಟೆಲ್, ರೆಸಾರ್ಟ್‌ಗಳು, ಮ್ಯೂಸಿಕ್ ಅಡ್ಡಗಳು, ಕರೋಕೆ ಬಾರ್‌ಗಳು, ಹಿಪ್ಪಿ ಜಂಕ್ಷನ್‌ಗಳು, ಗಾಲಾ ಡಿನ್ನರ್, ಕೆಸಿನೊಗಳು ಮನಸ್ಸು ತಣಿಸುತ್ತವೆ.

ಪಾರ್ಟಿ ಬಯಸದವರಿಗೂ ಆಯ್ಕೆಗಳು ಕಡಿಮೆಯಿಲ್ಲ. ಪ್ರಾಚೀನ ಪೋರ್ಚುಗೀಸ್ ವಾಸ್ತುವಿನ್ಯಾಸದ ಕಟ್ಟಡಗಳು, ಸುಂದರ ಕಡಲ ಕಿನಾರೆಗಳು, ಹಿಪ್ಪಿ ಸಂಸ್ಕೃತಿ ಬಿಂಬಿಸುವ ಜನನಿಬಿಡ ದಾರಿಗಳು, ಫ್ಲೀ ಮಾರ್ಕೆಟ್‌ಗಳು ಕಣ್ಣು ತುಂಬಬಲ್ಲವು. ಪ್ರಕೃತಿಯ ಮಡಿಲಲ್ಲಿ ಕಾಲ ಕಳೆಯಲು ಬಯಸುವವರಿಗೆ ದಕ್ಷಿಣ ಗೋವಾ ಹೇಳಿ ಮಾಡಿಸಿದ್ದು. ಬೆಟ್ಟಗುಡ್ಡಗಳ ನಡುವೆ, ವಿಶ್ರಾಂತ ಸಮುದ್ರಗಳ ಸಾಮೀಪ್ಯ ಸುಂದರ ಅನುಭವ ನೀಡಬಲ್ಲದು.

ಶಿಲ್ಲಾಂಗ್‌ನ ರಿವೈ

ಉತ್ಸಾಹ ತುಂಬುವ ಶಿಲ್ಲಾಂಗ್

ಮನಸ್ಸಿನ ಬೇಸರವನ್ನೆಲ್ಲಾ ಮರೆಸಿ ನವ ಚೈತನ್ಯ ತುಂಬುವ ಶಕ್ತಿ ಶಿಲ್ಲಾಂಗ್‌ನಲ್ಲಿದೆ. ಈಶಾನ್ಯ ರಾಜ್ಯ ಮೇಘಾಲಯದ ರಾಜಧಾನಿ ಶಿಲ್ಲಾಂಗ್, ನದಿ- ಸರೋವರ, ಪುಟ್ಟ ಪುಟ್ಟ ಜಲಧಾರೆಗಳನ್ನೊಳಗೊಂಡ ದಟ್ಟ ಕಾಡಿನ ಸುಂದರ ನೋಟದೊಂದಿಗೆ ಕಫೆ, ಕ್ಲಬ್‌ಗಳನ್ನೊಳಗೊಂಡ ಆಧುನಿಕ ಮೋಹಕ್ಕೂ ತಕ್ಕ ನಗರ. ಇದಕ್ಕೇ ಶಿಲ್ಲಾಂಗ್‌ಗೆ 'ಪೆಪ್ಪಿ ಸಿಟಿ' ಎಂದು ಪ್ರೀತಿಯಿಂದ ಕರೆಯುವುದು.

ಪ್ರಕೃತಿಯ ತೋಳಿನಲ್ಲಿ ಕಾಲ ಕಳೆಯಲು ಬಯಸುವವರಿಗೂ, ಪಾರ್ಟಿಯಲ್ಲಿ ಮೋಜು ಮಸ್ತಿ ಮಾಡಬಯಸುವವರಿಗೂ ಹೊಸ ವರ್ಷದಲ್ಲಿ ಶಿಲ್ಲಾಂಗ್ ಬಾಗಿಲು ತೆರೆದು ಸ್ವಾಗತಿಸುತ್ತದೆ. ಇಲ್ಲಿಯೇ ಎಲಿಫಂಟ್ ಫಾಲ್ಸ್, ಶಿಲಾಂಗ್ ಪೀಕ್, ಡಾನ್‌ಬಾಸ್ಕೊ ಮ್ಯೂಸಿಯಂ, ಲೇಡಿ ಹೈದರಿ ಪಾರ್ಕ್ ನೋಡಿ ಇನ್ನಷ್ಟು ಖುಷಿಗೊಳ್ಳಬಹುದು.

ಫ್ರೆಂಚ್ ಪುದುಚೇರಿ

ಪುದುಚೇರಿ ಬೀಚ್

'ಭಾರತದ ಪುಟ್ಟ ಫ್ರಾನ್ಸ್' ಎಂದೇ ಕರೆಸಿಕೊಂಡಿರುವ ಪುದುಚೇರಿ, ಹೊಸ ವರ್ಷ ಸಮೀಪಿಸುತ್ತಿದ್ದಂತೆ ಹೊಸ ಮೆರುಗು ತುಂಬಿಕೊಳ್ಳುತ್ತದೆ. ಬಣ್ಣ ಬಣ್ಣದ ಲೈಟಿಂಗ್‌ಗಳಿಂದ ಮಿಂದೇಳುವ ನಗರದಲ್ಲಿ ನವ ಸಂವತ್ಸರದ ಖುಷಿಯೂ ಪ್ರತಿಫಲಿಸುತ್ತದೆ. ಈ ಕಾರಣಕ್ಕೇ ಹೊಸ ವರ್ಷಾಚರಣೆಗೆ ಅತ್ಯುತ್ತಮ ಸ್ಥಳ ಎಂದು ಪುದುಚೇರಿ ಹೆಸರು ಗಳಿಸಿಕೊಂಡಿದೆ.

ಪ್ಯಾರಡೈಸ್ ಬೀಚ್, ಆರೋ ಬೀಚ್‌ಗಳಂಥ ಶುದ್ಧ ಸಾಗರ ತಟಗಳೊಂದಿಗೆ ಫ್ರೆಂಚ್ ಸಂಸ್ಕೃತಿಯ ಕುರುಹುಗಳನ್ನೂ ಅಲ್ಲಲ್ಲಿ ಕಾಣಬಹುದು. ಫ್ರೆಂಚ್ ಶೈಲಿಯ ಕಟ್ಟಡಗಳು, ಕೆಫೆಗಳು, ಥರಾವರಿ ಸ್ಥಳೀಯ ಖಾದ್ಯಗಳು... ಎಲ್ಲವನ್ನೂ ಮಿಶ್ರವಾಗಿಸಿಕೊಂಡ ಸ್ಥಳದಲ್ಲಿ ನವ ವರ್ಷಾಚರಣೆಯೂ ವಿಶೇಷವೆನಿಸಬಹುದು.

ವಯ್ಯಾರದ ವಯನಾಡು

ಹಸಿರು ತುಂಬಿದ ಬೆಟ್ಟ ಗುಡ್ಡಗಳ, ದಟ್ಟ ಕಾಡುಗಳ ನಡುವಿನ ಕೇರಳದ ವಯನಾಡು ಹೊಸ ವರ್ಷದ ಸಮಯದಲ್ಲಿ ಇನ್ನಷ್ಟು ಚೆಲುವು ತುಂಬಿಕೊಂಡಿರುತ್ತದೆ. ಚಳಿಗಾಲದ ಈ ಸಮಯದಲ್ಲಿ ಮಂಜು ಆವರಿಸಿದ ಬೆಟ್ಟಗುಡ್ಡಗಳ ದೃಶ್ಯಾವಳಿಗಳು ಮನಸ್ಸಿಗೆ ಹೊಸತನ ತುಂಬಬಲ್ಲವು. ಸಮುದ್ರ ಮಟ್ಟದಿಂದ 2100 ಮೀಟರ್ ಎತ್ತರದಲ್ಲಿದ್ದು, ಆಕರ್ಷಣೀಯ ಸ್ಥಳ. ಜಲಧಾರೆಗಳು, ಗುಹೆಗಳು, ಘಮ್ಮೆನ್ನುವ ತೋಟಗಳನ್ನು ನೋಡುತ್ತಾ ಹೊಸ ವರ್ಷ ಆಚರಿಸಬಹುದು. ಝಿಪ್ಲಿಂಗ್ ಕೂಡ ಹೊಸ ಅನುಭವ ನೀಡಬಹುದು. ಪ್ರಕೃತಿಪ್ರಿಯರಿಗೆಂದೇ ಹೊಸ ವರ್ಷಕ್ಕೆ ಟ್ರೀ ಹೌಸ್, ಬೋಟ್‌ಹೌಸ್‌ಗಳೂ ಅಣಿಗೊಳ್ಳುತ್ತವೆ. ಮರದ ಮನೆಯಲ್ಲಿ ನಿಸರ್ಗದ ಚೆಲುವಿನೊಂದಿಗೆ ಹೊಸ ಸಂವತ್ಸರವನ್ನು ಸ್ವಾಗತಿಸಬಹುದು.

ವಯನಾಡಿನ ಕಾರ್ಲಾಡ್ ಕೆರೆ

ಕಲ್ಪನಾಲೋಕ ಕಸೋಲ್

ಕಸೋಲ್‌ನ ಪಾರ್ವತಿ ಕಣಿವೆ

ಹಿಮಾಚಲ ಪ್ರದೇಶದ ಪುಟ್ಟ ಹಳ್ಳಿ ಕಸೋಲ್; ಭೂಮಿ ಮೇಲಿನ ಸ್ವರ್ಗ. ಹಿಮ ಹೊದ್ದ ಪರ್ವತಶ್ರೇಣಿಗಳ ನಡುವೆ ತಣ್ಣಗೆ ಹರಿವ ನದಿಯ ಕಲರವ ಕೇಳುತ್ತಾ ಪ್ರಶಾಂತವಾಗಿ ಕಾಲ ಕಳೆಯಲು ಬಯಸುವವರಿಗೆ ಕಸೋಲ್ ಕಲ್ಪನಾಲೋಕವೇ. ಥರಗುಟ್ಟುವ ಚಳಿಯ ನಡುವೆ ನದಿಯಂಚಿನಲ್ಲಿ ಕ್ಯಾಂಪ್‌ಫೈರ್ ಹಾಕಿ ಕೂತು ಹೊಸ ಸಂವತ್ಸರವನ್ನು ಸ್ವಾಗತಿಸುವ ಸುಖವೇ ಬೇರೆ. ಹೊಸ ವರ್ಷದಲ್ಲಿ ಪಾರ್ಟಿ ಮಾಡಲು ಬಯಸುವವರಿಗೆಂದೇ ಕಸೋಲ್ ಸಡಗರದಿಂದ ತಯಾರಾಗುತ್ತದೆ. ಇದಕ್ಕಾಗೇ ಈ ಸಮಯದಲ್ಲಿ ಸಾವಿರಾರು ಜನ ಇಲ್ಲಿಗೆ ಭೇಟಿ ನೀಡುತ್ತಾರೆ. ಕಸೋಲ್ ಸುತ್ತಮುತ್ತಲಿರುವ ತೋಶ್, ಮಲಾನಾ, ಚಾಲಲ್, ರಸೋಲ್, ಗ್ರಹಣ್, ಕಲ್ಗ, ಬುದ್ಧಬನ್, ಕುಟ್ಲದಂಥ ಸ್ಥಳಗಳಿಗೂ ಭೇಟಿ ನೀಡಬಹುದು.



ಥಾರ್ ಮರುಭೂಮಿ

ಚಿನ್ನದ ನಗರದಲ್ಲಿ...

ಸುಂದರ ಕಡಲ ತೀರಗಳಲ್ಲಿ, ಹಸಿರು ಬೆಟ್ಟ ಗುಡ್ಡಗಳ ನಡುವೆ, ಹಿಮ ಪರ್ವತಗಳಲ್ಲಿ ಹೊಸ ವರ್ಷಾಚರಣೆ ಮಾಡಲು ಇಷ್ಟಪಡುವವರು ಒಂದೆಡೆಯಾದರೆ, ಮರಳ ರಾಶಿಯ ನಡುವೆ ಹೊಸ ಯುಗಕ್ಕೆ ಕಾಲಿಡಲು ಬಯಸುವವರು ಹಲವರು. ಇದಕ್ಕೆ ಹೇಳಿಮಾಡಿಸಿದ ತಾಣ ರಾಜಸ್ಥಾನದ ಜೈಸಲ್ಮೇರ್. ಜೈಸಲ್ಮೇರ್ ಕೂಡ ಹೊಸ ವರ್ಷಾಚರಣೆಯ ಸುಂದರ ತಾಣವೆಂಬ ಖ್ಯಾತಿ ಪಡೆದ ಊರು.

ಮರಳ ಇಳಿಜಾರು, ದಿಬ್ಬಗಳ ನಡುವೆ ಒಂಟೆ ಪಯಣ ಮಾಡುತ್ತಾ ರಾಜಸ್ಥಾನದ ಜನಪದ ನೃತ್ಯ, ಸಂಗೀತವನ್ನು ಮರಳುಗಾಡಿನ ಮಧ್ಯೆ ಕೇಳುತ್ತಾ ಹೊಸತನ ಅನುಭವಿಸುವುದು ಕೂಡ ರೋಚಕವೇ. ಇದರೊಂದಿಗೆ ಅರಮನೆ, ಪ್ರಾಚೀನ ಕೋಟೆಗಳನ್ನು ಸುತ್ತುತ್ತಾ ಭಾರತದ ಚಿನ್ನದ ನಗರಿ ಜೈಸಲ್ಮೇರ್‌ನಲ್ಲಿ ಕಾಲ ಕಳೆದು ಶ್ರೀಮಂತ ಸಂಸ್ಕೃತಿ, ಇತಿಹಾಸವನ್ನು ಅರಿಯಬಹುದು. ಮರಳುಗಾಡಿನ ನಡುವೆ ಕ್ಯಾಂಪಿಂಗ್, ಸೂರ್ಯಾಸ್ತದ ವೀಕ್ಷಣೆ ಭಿನ್ನ ಅನುಭವವನ್ನೇ ನೀಡಬಹುದು.



ಕಾಜಾದ ಬುದ್ಧ ಮಾರ್ಗ

ವಿಶೇಷ ಅನುಭೂತಿಯ ಕಾಜಾ

ಸಮುದ್ರ ಮಟ್ಟದಿಂದ 12,500 ಅಡಿ ಎತ್ತರದಲ್ಲಿರುವ, ಹಿಮಾಚಲದ ಸ್ಪಿಟಿ ಕಣಿವೆಯ ಕಾಜಾ ನಗರ ಭಾರತದಲ್ಲಿ ಅತ್ಯುತ್ತಮ ಹೊಸ ವರ್ಷಾಚರಣೆಯ ತಾಣವೆಂದು ಹೆಸರು ಪಡೆದಿದೆ. ಮೊನಾಸ್ಟರಿಗಳು, ಹಳೆ ಕೋಟೆಗಳು, ಹಿಮಾಚ್ಛಾದಿತ ಪರ್ವತಗಳು, ಝರಿ ತೊರೆಗಳು, ಆಕಾಶವನ್ನು ಪ್ರತಿಬಿಂಬಿಸುವ ಸರೋವರಗಳು... ಬೇಸರ ಕಳೆದು ಹೊಸ ಉತ್ಸಾಹವನ್ನು ತುಂಬಬಲ್ಲ ದೃಶ್ಯಗಳು ಇಲ್ಲಿ ಅಸಂಖ್ಯ. ಸಾಹಸಮಯ ಯಾನ ಬಯಸುವವರು ಹಿಕ್ಕಿಂನಲ್ಲಿನ ವಿಶ್ವದ ಅತಿ ಎತ್ತರದ ಅಂಚೆ ಕಚೇರಿಗೆ ಭೇಟಿ ನಿಡಬಹುದು. ಪಿನ್ ನ್ಯಾಷನಲ್ ವ್ಯಾಲಿಗೆ ಸಫಾರಿ ಕೈಗೊಳ್ಳಬಹುದು.

ಹಸಿರಿನ ಸಿರಿ ಮೈದುಂಬಿಕೊಂಡ ಕೊಡಗು

ಕಾಡು, ಟೀ-ಕಾಫಿ ತೋಟಗಳ ಘಮಲಿನ ನಡುವೆ ಸಾಗುತ್ತಲೇ ಬೆಟ್ಟ ಗುಡ್ಡಗಳ ಚೆಲುವನ್ನು ಕಣ್ತುಂಬಿಕೊಳ್ಳುವ, ಮಂಜಿನಾಟವನ್ನು ಕಾಣಿಸುವ, ಭಿನ್ನ ಸಂಸ್ಕೃತಿಯೊಂದನ್ನು ಪರಿಚಯಿಸುವ ಮಡಿಕೇರಿ ಹೊಸ ವರ್ಷಾಚರಣೆಯ ಪ್ರಸಿದ್ಧ ತಾಣದ ಪಟ್ಟಿಯಲ್ಲಿ ಗುರುತು ಮೂಡಿಸಿಕೊಂಡಿದೆ. ನಿಸರ್ಗದ ಸಾಮೀಪ್ಯದಲ್ಲಿ ಸಮಯ ಕಳೆಯಬಯಸುವವರಿಗೆ ಮಡಿಕೇರಿಯ ವಾತಾವರಣ ಬಲು ಹಿತ. ಇದರೊಂದಿಗೆ ಹಾಡಿ ನಲಿದು ಕುಣಿಯಲು ಇಷ್ಟಪಡುವವರಿಗೆಂದೇ ಇಲ್ಲಿ ರೆಸಾರ್ಟ್‌ಗಳು, ಹೋಂ ಸ್ಟೇಗಳು ವಿಶೇಷವಾಗಿ ಅಣಿಯಾಗಿರುತ್ತವೆ. ಮೈಮನ ತಣಿಸುವ ಸಾಕಷ್ಟು ಸುಂದರ ಸ್ಥಳಗಳೂ ಇಲ್ಲಿವೆ.

ಮಡಿಕೇರಿ

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಡಗ್ಗ ಚಕ್ಕು ಕೀರ್ತಿಶ್ರೀಷ್ಟು ಕಥೆಯ ಸಮಾಧಿ ಸುದ್ದಿ

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಅಗಲಿದ ಆಪ್ತರ ಸಮಾಧಿಯ ಎದುರು ಗುಂಡ ಭಾವುಕನಾದ. ಹೂಗುಚ್ಛ ಸಮರ್ಪಿಸಿ, ಕಣ್ಣುಮುಚ್ಚಿ ಪ್ರಾರ್ಥನೆಯ ಭಾವದಲ್ಲಿ ನಿಂತ. ಚಕ್ಕನೆ ಸಮಾಧಿಯಿಂದ 'ಥ್ಯಾಂಕ್ಸ್' ಎಂಬ ಪ್ರತಿಕ್ರಿಯೆ ಬರಬೇಕೆ? ತಕ್ಷಣವೇ ಅವನು ಕಾಲಿಗೆ ಬುದ್ಧಿ ಹೇಳಿದ.

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ವೇದಾಂತ ಗೌರ
ಕಲಬುರಗಿ

ಸಮನ್ವಿತ ಎನ್. ಎಸ್.,
ಚಿತ್ರದುರ್ಗ

ನಂದಿತಾ ಎಸ್.ಎಂ.,
ಬೆಂಗಳೂರು

ಶ್ರಾವಣಿ ಅರವಳ್ಳಿ,
ಬೆಂಗಳೂರು

ಉಮಾ ಮಹೇಶ್ವರಿ,
ಮೈಸೂರು

ನಿವೇದಿತಾ ಪಾಟಿಲ್,
ಯಲಬುರ್ಗ

ಟು ಇನ್ ಒನ್ ಪದಬೆಸುಗೆ

ಇಲ್ಲಿ ಕೊಟ್ಟಿರುವ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆಯ್ದು ಪದದ ಆರಂಭಕ್ಕೆ ಹಾಗೂ ಕೊನೆಗೆ ಒಂದೊಂದು ಅಕ್ಷರ ತುಂಬಿದರೆ ಆರಂಭಕ್ಕೆ ಮೂರು ಅಕ್ಷರದ ಒಂದು ಪದ ಹಾಗೂ ಕೊಟ್ಟಿರುವ ಪದದಿಂದ ಮತ್ತೊಂದು ಅಂತ್ಯ ಪದವಾಗುವುದು.

ದವ   ಕರ   ವಸ

ಸದ   ಮಾರ   ಗಡ

ಅಕ್ಷರ ಪಟ್ಟಿ

ಗ	ಯಾ	ಣಿ	ಡು	ಡೆ	ಸ್ಯ
ಕ	ಮುಂ	ಕಿಂ	ದಿ	ಸಂ	ಸು

ಜಾಣಪದ ಆಟ

ಅಕ್ಷರ ಪಟ್ಟಿ

ಇಲ್ಲಿ ಕೊಟ್ಟಿರುವ 'ಕಾರ' ಪದದ ಹಿಂದೆ ಅಕ್ಷರ ಪಟ್ಟಿಯಿಂದ ಎರಡಕ್ಷರ ಆರಿಸಿ ಹಿಂದೆ ತುಂಬಿ ನಾಲ್ಕಕ್ಷರದ ಪದ ಮಾಡಿ.

ಅ	ಮ
ಪ್ರ	ಬ
ಸ	ರ
ಸ	ರ
ಮ	ಲಂ
ದ	ತೀ
ಹ	ಪ
ಉ	ಧ
ಅಂ	ರಿ
ಅ	ಪ

1			ಕಾ	ರ
2			ಕಾ	ರ
3			ಕಾ	ರ
4			ಕಾ	ರ
5			ಕಾ	ರ
6			ಕಾ	ರ
7			ಕಾ	ರ
8			ಕಾ	ರ
9			ಕಾ	ರ
10			ಕಾ	ರ

ಮೋGನ ENGLISH

T-Time

ಇಲ್ಲಿ ಕೊಟ್ಟಿರುವ T ಅಕ್ಷರದ ಮುಂದೆ ಅಕ್ಷರ ಪಟ್ಟಿಯಿಂದ ಆಯ್ದು ಎರಡು ಅಕ್ಷರ ತುಂಬಿ ಮೂರಕ್ಷರದ ಅರ್ಥಬದ್ಧ ಪದರಚಿಸಿ

ಅಕ್ಷರ ಪಟ್ಟಿ

U	A
E	Y
O	B
R	E
I	W
H	N
O	P
E	O
I	N
Y	P

1	T		
2	T		
3	T		
4	T		
5	T		
6	T		
7	T		
8	T		
9	T		
10	T		

ಏಕಾಕ್ಷರಿ ಕಥೆ

ಇಲ್ಲಿ ಕೊಟ್ಟಿರುವ ಕಥೆಯನ್ನು ನೀವು ಓದಬೇಕಾದರೆ ವೃತ್ತದಲ್ಲಿ ಬಿಟ್ಟಿರುವ 'ಮ'ಕಾರದ ಒಂದು ಅಕ್ಷರ ತುಂಬಿ ಕಥೆ ಓದುತ್ತಾ ಹೋಗಿ

○ಣಿಪುರದ ○ಹಾರಾಜ ○ಧವ ನಾಯಕನ ○ದಲ ○ದ್ದು ○ಗಳಾದ ○ಧು○ತಿಯು ○ಣಿಪಾಲದ ○ಹಾರಾಜ ○ರನಾಯಕನ ○ಹಾ○ಂತ್ರಿ ○ಂಜುನಾಯಕನ ○ದಲ ○ಗ ○ಧುಸೂಧನನನ್ನು ○ನಸಾರೆ ○ಚ್ಚಿ ○ದುವೆಯಾಗಲು ○ನಸ್ಸು ○ಡಿ ○ರುದಿನ ○ಹಾರಾಜನಲ್ಲಿ ○ನವಿ ○ಡಿಕೊಂಡು ○ಘ ○ಸದ ○ಗಳವಾರ ○ಹಡಿ ○ನೆಯಲ್ಲಿ ○ಹತ್ತರವಾದ ○ಗಳ ○ಹೂರ್ತದಲ್ಲಿ ○ದುವೆಯಾಗಿ ○ನೆದೇವರಾದ ○ಹದೇವನಿಗೆ ○ಣಿಯದೇ ○ಹಾಪರಾಧ ○ಡಿದೆನೆಂದು ○ನನೊಂದು ○ಧುಚಂದ್ರಕ್ಕೆ ○ಂಚೆಯೇ ○ಡಿದಳು.

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಟು ಇನ್ ಒನ್ ಪದಬೆಸುಗೆ: 1.ವಾನರಕ 2.ಮೀಸಲುಗೆ 3.ಲಹರಣಿ 4.ಶಬರಿದು 5.ಗೀಜಗತ್ತು 6.ಅಂತರಹ

ಜಾಣಪದ ಆಟ: 1.ಕಚ್ಚಾಟ 2.ಹೊಯ್ದಾಟ 3.ತುಂಟಾಟ 4.ಕುಂಟಾಟ 5.ಜಗ್ಗಾಟ 6.ಹುಚ್ಚಾಟ 7.ಪುಂಡಾಟ 8.ಕಾಡಾಟ 9.ಕಾದಾಟ 10.ಚೆಲ್ಲಾಟ 11.ಮಾರಾಟ 12.ಚೀರಾಟ

ಹುಡುಕಾಟ: 1.ಕಡಲೆಕಾಯಿ

ಪದಒಗಟು: ಮೈನಾ

ಚಿಲಿಪಿಲಿ ಚೆಲ್ಲಾಪಿಲ್ಲಿ: 1.ಕಾಲಿಗೆ ಬುದ್ಧಿ ಹೇಳು 2.ಮೂಗಿನ ಮೇಲೆ ಬೆರಳಿಡು 3.ನೀರಿನಂತೆ ಖರ್ಚು ಮಾಡು 4.ತಲೆ ಬಿಸಿಯಾಗು

ಮೋಜಿನ ಇಂಗ್ಲಿಷ್: 1.ICE 2.EMU 3.EEL 4.PEA 5.SEA 6.TEA 7.EAT 8.OAK 9.OIL 10.BEE 11.BIO 12.ATE

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ತುಮಕೂರು ಸಮೀಪದ ಗುಬ್ಬಿಯಲ್ಲಿ ನಡೆದ ಐಎನ್‌ಆರ್‌ಸಿ2 ಕೆ 1000 ರ್‍ಯಾಲಿಯಲ್ಲಿ ಸಮಗ್ರ ಪ್ರಶಸ್ತಿ ಗೆದ್ದ ಹರಿಕೃಷ್ಣ ವಾಡಿಯಾ ಮತ್ತು ಕುನಾಲ್ ಕಶ್ಯಪ್

ಕೆ1000 ರ್‍ಯಾಲಿ: ವಾಡಿಯಾಗೆ ಪ್ರಶಸ್ತಿ

ತುಮಕೂರು: ಆರ್ಕಾ ಮೋಟರ್‌ಸ್ಪೋರ್ಟ್ಸ್‌ನ ಹರಿಕೃಷ್ಣ ವಾಡಿಯಾ ಮತ್ತು ಅವರ ಸಹಚಾಲಕ ಕುನಾಲ್ ಕಶ್ಯಪ್ ಅವರು ಬ್ಲ್ಯೂ ಬ್ಯಾಂಡ್ ಕೆ 1000 ರ್‍ಯಾಲಿ ಪ್ರಶಸ್ತಿ ಜಯಿಸಿದರು.

ಶನಿವಾರ ಗುಬ್ಬಿ ಸಮೀಪ ನಡೆದ ರ್‍ಯಾಲಿಯಲ್ಲಿ ವಾಡಿಯಾ ಮುನ್ನಡೆ ಸಾಧಿಸಿದರು. ಇದರೊಂದಿಗೆ ಅವರು ಐಎನ್‌ಆರ್‌ಎಸ್ 2 ಪ್ರಶಸ್ತಿ ಮತ್ತು 40 ಅಂಕಗಳನ್ನು ತಮ್ಮದಾಗಿಸಿಕೊಂಡರು. 1 ಗಂಟೆ, 26 ನಿಮಿಷ, 53.5 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಸಮಗ್ರ ಪ್ರಶಸ್ತಿ ಗೆದ್ದರು. ಪಿವಿಟಿಯ ಡೀನ್ ಮಸ್ಕರೇನಸ್ ಮತ್ತು ಗಗನ್ ಕರುಂಬಯ್ಯ ಎರಡನೇ ಸ್ಥಾನ ಗಳಿಸಿದರು. ಸ್ನ್ಯಾಪ್ ರೇಸಿಂಗ್‌ನ ಯೂನುಸ್ ಇಲಿಯಾಸ್ ಮತ್ತು ನಿತಿನ್ ಜೇಕಬ್ ಮೂರನೇ ಸ್ಥಾನ ಗಳಿಸಿದರು.

ಐಎನ್‌ಆರ್‌ಸಿ 2 ವಿಭಾಗದಲ್ಲಿ ವಾಡಿಯಾ–ಕುನಾಲ್ ಮೊದಲಿಗರಾದರು. ಜೆಒ ಒನ್ ರ್‍ಯಾಲಿಂಗ್‌ನ ಚೇತನ್ ಶಿವರಾಂ ಮತ್ತು ಇ ಶಿವಪ್ರಕಾಶ್ ಎರಡನೇ ಹಾಗೂ ಪಿವಿಟಿಯ ರಿತೇಶ್ ಗುತ್ತೇದಾರ್ ಮತ್ತು ಎಂ.ಸೂರಜ್ ಮೂರನೇ ಸ್ಥಾನ ಗಳಿಸಿದರು.

ಡೇವಿಸ್ ಕಪ್ ಪಂದ್ಯ ಆಡಲು ಪಾಕಿಸ್ತಾನಕ್ಕೆ ಹೋಗಬೇಕಾಗಿದೆ ಭಾರತ ಟೆನಿಸ್ ತಂಡ

ಎಐಟಿಎ ಮನವಿ ತಿರಸ್ಕರಿಸಿದ ಐಟಿಎಫ್

ನವದೆಹಲಿ (ಪಿಟಿಐ): ಇಸ್ಲಾಮಾಬಾದ್‌ನಲ್ಲಿ ಡೇವಿಸ್ ಕಪ್ ವಿಶ್ವಗುಂಪಿನ ಪಂದ್ಯವಾಡಲು ಭಾರತ ತಂಡಕ್ಕೆ ಭದ್ರತೆಯ ಸಮಸ್ಯೆ ಎದುರಾಗಬಹುದು ಎಂಬ ಅಖಿಲ ಭಾರತ ಟೆನಿಸ್ ಸಂಸ್ಥೆಯ ಮನವಿಯನ್ನು ಅಂತರರಾಷ್ಟ್ರೀಯ ಟೆನಿಸ್ ಫೆಡರೇಷನ್ (ಐಟಿಎಫ್) ಟ್ರಿಬ್ಯೂನಲ್ ತಿರಸ್ಕರಿಸಿದೆ. ಹೀಗಾಗಿ 60 ವರ್ಷಗಳಲ್ಲಿ ಮೊದಲ ಬಾರಿ ಭಾರತ ಟೆನಿಸ್ ತಂಡ ಪಾಕಿಸ್ತಾನಕ್ಕೆ ಭೇಟಿ ನೀಡಲೇಬೇಕಾಗಿದೆ.

ಭಾರತ ತಂಡ ಒಂದು ವೇಳೆ ಪಾಕಿಸ್ತಾನಕ್ಕೆ ಆಡಲು ಹೋಗದಿದ್ದರೆ, ಪಂದ್ಯದಲ್ಲಿ ಆತಿಥೇಯ (ಪಾಕಿಸ್ತಾನ) ತಂಡವನ್ನು ವಿಜಯಿ ಎಂದು ತೀರ್ಮಾನಿಸಲಾಗುತ್ತದೆ. ಈ ತೀರ್ಮಾನವಾದಲ್ಲಿ ಭಾರತ ವಿಶ್ವಗುಂಪು ಎರಡಕ್ಕೆ ಸರಿಯಲಿದೆ. ಗೆಲ್ಲುವ ತಂಡ ವಿಶ್ವ ಗುಂಪು ಒಂದರಲ್ಲಿ ಮುಂದುವರಿಯಲಿದೆ.

ಭಾರತ ಡೇವಿಸ್ ಕಪ್ ತಂಡ 1964 ರಲ್ಲಿ ಕೊನೆಯ ಬಾರಿ ಪಾಕಿಸ್ತಾನಕ್ಕೆ ತೆರಳಿತ್ತು. ಆಗ ಭಾರತ 4–0 ಅಂತರದಿಂದ ಜಯಗಳಿಸಿತ್ತು.

ರಾಮಕುಮಾರ್ ರಾಮನಾಥನ್

ತಮ್ಮ ಮನವಿಯನ್ನು ಐಟಿಎಫ್ ತಿರಸ್ಕರಿಸಿರುವುದನ್ನು ಎಐಟಿಎ ಮಹಾ ಪ್ರಧಾನ ಕಾರ್ಯದರ್ಶಿ ಅನಿಲ್ ಧುಪರ್ ಪಿಟಿಐಗೆ ಖಚಿತಪಡಿಸಿದ್ದಾರೆ.

‘ಐಟಿಎಫ್ ಟ್ರಿಬ್ಯೂನಲ್‌ನ ಸಂದೇಶ ತಲುಪಿದೆ. ನಾವು ಸೋಮವಾರ ಕ್ರೀಡಾ ಸಚಿವಾಲಯವನ್ನು ಸಂಪರ್ಕಿಸಲಿದ್ದು, ತಂಡವನ್ನು ಕಳುಹಿಸಬೇಕೇ ಎಂಬ ಬಗ್ಗೆ ಮಾರ್ಗದರ್ಶನ ಪಡೆಯುತ್ತೇವೆ’ ಎಂದು ಧುಪರ್ ತಿಳಿಸಿದರು.

ಎಐಟಿಎ, ಫೆಬ್ರುವರಿ 3 ಮತ್ತು 4ರಂದು ನಡೆಯುವ ಈ ಪಂದ್ಯಕ್ಕೆ ಇತ್ತೀಚೆಗಷ್ಟೇ ಐವರು ಆಟಗಾರರ ತಂಡವನ್ನು ಪ್ರಕಟಿಸಿದ್ದು, ಐಟಿಎಫ್ ತಮ್ಮ ಮನವಿ ತಿರಸ್ಕರಿಸಿದರೆ ತಂಡವನ್ನು ಕಳುಹಿಸುವುದಾಗಿ ತಿಳಿಸಿತ್ತು.

ತಟಸ್ಥ ಸ್ಥಳದಲ್ಲಿ ಪಂದ್ಯವನ್ನು ನಡೆಸುವಂತೆ ಎಐಟಿಎ ವಿನಂತಿಯನ್ನು 15 ಸದಸ್ಯರ ಡೇವಿಸ್ ಕಪ್ ಸಮಿತಿ ತಳ್ಳಿಹಾಕಿತ್ತು. ಹೀಗಾಗಿ ಎಐಟಿಎ, ದಾರಿಕಾಣದೇ ಐಟಿಎಫ್ ಟ್ರಿಬ್ಯೂನಲ್ ಅನ್ನು ಸಂಪರ್ಕಿಸಿತ್ತು.

‘ಪಾಕಿಸ್ತಾನ ಕೆಲವು ಮಹತ್ವದ ಡೇವಿಸ್ ಕಪ್ ಪಂದ್ಯಗಳನ್ನು ಯಶಸ್ವಿಯಾಗಿ ಆಯೋಜಿಸಿದೆ. ಭಾರತ ವಿರುದ್ಧವೂ ಯೋಗ್ಯ ರೀತಿಯಲ್ಲಿ ಆ ದೇಶವು ಪಂದ್ಯ ಆಯೋಜಿಸಲಾಗದು ಎಂಬುದಕ್ಕೆ ಯಾವುದೇ ಸ್ಪಷ್ಟ ಆಧಾರವಿಲ್ಲ’ ಎಂದು ಸಮಿತಿ ಹೇಳಿದೆ. ಶಾಂತಿ- ಸುವ್ಯವಸ್ಥೆ ಕಾಪಾಡುವುದು ಆತಿಥೇಯ ದೇಶದ ಜವಾಬ್ದಾರಿ. ಪ್ರಯಾಣ ಮತ್ತು ಪಾಲ್ಗೊಳ್ಳುವಿಕೆಗೆ ಸಂಬಂಧಿಸಿದಂತೆ ಭಾರತ ತಂಡಕ್ಕೆ ಭರವಸೆ ನೀಡಬೇಕು’ ಎಂದು ಸಮಿತಿ ಅಭಿಪ್ರಾಯಪಟ್ಟಿದೆ.

ಪ್ರಕಟಿಸಲಾದ ತಂಡದಿಂದ ಸುಮಿತ್ ನಗಾಲ್ ಮತ್ತು ಶಶಿಕುಮಾರ್ ಮುಕುಂದ್ ಹಿಂದೆ ಸರಿದಿದ್ದಾರೆ. ರಾಮಕುಮಾರ್ ರಾಮನಾಥನ್, ಎನ್.ಶ್ರೀರಾಮ್ ಬಾಲಾಜಿ, ಯೂಕಿ ಭಾಂಬ್ರಿ, ನಿಕಿ ಪೂಣಚ್ಚ ಮತ್ತು ಸಾಕೇತ್ ಮೈನೇನಿ ತಂಡದಲ್ಲಿದ್ದಾರೆ.

ಫುಟ್‌ಬಾಲ್: ಶುಕ್ಲಾ ದತ್ತಾ ಕೋಚ್

ನವದೆಹಲಿ (ಪಿಟಿಐ): ಭಾರತ ಫುಟ್‌ಬಾಲ್ ತಂಡದ ಮಾಜಿ ಆಟಗಾರ್ತಿ ಶುಕ್ಲಾ ದತ್ತಾ ಅವರನ್ನು ಭಾರತ 19 ವರ್ಷದೊಳಗಿನವರ ಮಹಿಳಾ ತಂಡದ ಮುಖ್ಯ ಕೋಚ್ ಆಗಿ ನೇಮಕ ಮಾಡಲಾಗಿದೆ.

ತಂಡಕ್ಕೆ ಮಾರ್ಗದರ್ಶನ ನೀಡುವರು. ಶ್ರದ್ಧಾಂಜಲಿ ಸಾಮಂತ್ರೆ ಸಹಾಯಕ ಕೋಚ್ ಮತ್ತು ಲಾರೆಂಬಮ್ ರೋನಿಬಾಲಾ ಚಾನು ಗೋಲ್‌ಕೀಪಿಂಗ್ ಕೋಚ್ ಸ್ಥಾನಕ್ಕೆ ನೇಮಕವಾಗಿದ್ದಾರೆ ಎಂದು ಎಐಎಫ್‌ಎಫ್ ಪ್ರಕಟಣೆಯಲ್ಲಿ ತಿಳಿಸಿದೆ.

ಮೊದಲ ಟೆಸ್ಟ್ ಪಂದ್ಯಕ್ಕೆ ಮಳೆ ಅಡ್ಡಿ ಸಾಧ್ಯತೆ

ಸೆಂಚುರಿಯನ್ (ಪಿಟಿಐ): ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಣ ನಡೆಯಲಿರುವ ‘ಬಾಕ್ಸಿಂಗ್ ಡೇ’ ಟೆಸ್ಟ್ ಪಂದ್ಯದ ಮೊದಲ ದಿನ ಮಳೆ ಸುರಿಯುವ ಸಾಧ್ಯತೆ ಇದೆ.

‘ಇಲ್ಲಿ ದಿನದಿಂದ ದಿನಕ್ಕೆ ತಾಪಮಾನ ಇಳಿಕೆಯಾಗುತ್ತಿದೆ. ಪಂದ್ಯದ ದಿನದಂದು 20 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಹೆಚ್ಚು ಕುಸಿಯುವ ಸಾಧ್ಯತೆ ಇದೆ. ಅದರಿಂದ ಮಳೆ ಬರುವ ಸಾಧ್ಯತೆ ಇದೆ. ಮೊದಲ ದಿನವಿಡೀ ಪಂದ್ಯ ನಡೆಯುವುದೇ ಅನುಮಾನವಾಗಿದೆ’ ಎಂದು ದಕ್ಷಿಣ ಆಫ್ರಿಕಾದ ಪಿಚ್ ಕ್ಯುರೇಟರ್ ಬ್ರಿಯಾನ್ ಬಿಲಾಯ್ ಹೇಳಿದ್ದಾರೆ.

ಶನಿವಾರ ಪಿಚ್ ಸಿದ್ಧತೆಯನ್ನು ಪರಿಶೀಲಿಸಿದ ನಂತರ ಅವರು ಸುದ್ದಿ ಸಂಸ್ಥೆಯೊಂದಿಗೆ ಮಾತನಾಡಿದರು.

‘ಎರಡು ಮತ್ತು ಮೂರನೇ ದಿನದಾಟದಲ್ಲಿ ಒಂದಿಷ್ಟು ಆಟ ನಡೆಯುವ ನಿರೀಕ್ಷೆ ಇದೆ. ಆದರೆ ತಂಪು ವಾತಾವರಣ ಇರುವುದರಿಂದ ಪಿಚ್‌ನಲ್ಲಿ ಚೆಂಡು ಎಷ್ಟು ತಿರುವು ಪಡೆಯಬಹುದು ಎಂಬುದನ್ನು ಈಗಲೇ ಹೇಳಲಾಗದು’ ಎಂದು ಅವರು ತಿಳಿಸಿದರು.

‘ಪಂದ್ಯದ ಆರಂಭಿಕ ಹಂತದಲ್ಲಿ ಪಿಚ್‌ನಲ್ಲಿ ವೇಗಿಗಳಿಗೆ ಹೆಚ್ಚು ನೆರವು ನೀಡುವ ಸಾಧ್ಯತೆ ಇದೆ. ಬ್ಯಾಟರ್‌ಗಳಿಗೆ ಕಠಿಣ ಸವಾಲು ಎದುರಾಗಬಹುದು. ಮೊದಲೆರಡು ದಿನಗಳಲ್ಲಿ ಹೆಚ್ಚು ಅವಧಿಯಲ್ಲಿ ಪಿಚ್ ಕವರ್ ಆಗಿಯೇ ಉಳಿದರೆ ನಂತರದ ಆಟದಲ್ಲಿ ಚೆಂಡಿನ ಚಲನೆ ಹೇಗಿರಬಹುದು ಎಂಬುದನ್ನು ಕಾದು ನೋಡಬೇಕು’ ಎಂದೂ ಹೇಳಿದರು.